ಶುಕ್ರವಾರ, ಜೂನ್ 11, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 162 | ಪುಟ 10
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸಿನಿಮಾ ಪುರವಣಿ**
ತಮ್ಮ ವೃತ್ತಿ ಜೀವನದ ಎರಡು ವರ್ಷವನ್ನು ಈ ಕೋವಿಡ್ ಪಿಡುಗಿನ ಅವಧಿ ಕಸಿಯಿತು ಎನ್ನುವ ನಟಿ ಅದಿತಿ ಪ್ರಭುದೇವ, ಲಾಕ್‌ಡೌನ್ ಬಳಿಕ ಸಾಲು ಸಾಲು ಚಿತ್ರಗಳಲ್ಲಿ ಬಣ್ಣಹಚ್ಚಲು ಸಜ್ಜಾಗಿದ್ದಾರೆ.

**ಆಳ-ಅಗಲ**
ಭಾರತೀಯ ಅಮೆರಿಕನ್ನರಿಗೆ ತಾರತಮ್ಯದ ಕಿರಿಕಿರಿ

ರಾಜಕಾಲುವೆ ಒತ್ತುವರಿ ಆರೋಪ: ತನಿಖಾ ತಂಡ ರಚನೆ 4

ಯೋಗಿ ಆದಿತ್ಯನಾಥ್ ನಾಯಕತ್ವಕ್ಕೆ ಕುತ್ತು? 9

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 52,300 ▲ | 15,737 ▲ | 73.06 ▼ |

ಉಳಿದ ಜಿಲ್ಲೆಗಳಲ್ಲಿ ನಿರ್ಬಂಧ ಸಡಿಲ • ಮಧ್ಯಾಹ್ನ 2 ಗಂಟೆಯವರೆಗೆ ಖರೀದಿಗೆ ಅವಕಾಶ

# 11 ಜಿಲ್ಲೆಗಷ್ಟೇ ಲಾಕ್‌ಡೌನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಪ್ರಕರಣಗಳು ಹೆಚ್ಚಾಗಿರುವ 11 ಜಿಲ್ಲೆಗಳಲ್ಲಿ ಇದೇ 21ರ ವರೆಗೆ ಲಾಕ್‌ಡೌನ್‌ನ ಕಠಿಣ ನಿಯಮಗಳು ಯಥಾಸ್ಥಿತಿಯಲ್ಲಿ ಮುಂದುವರಿಯಲಿದ್ದು, ಉಳಿದ ಜಿಲ್ಲೆಗಳಲ್ಲಿ ಇದೇ 14ರಿಂದ ನಿರ್ಬಂಧಗಳನ್ನು ಸ್ವಲ್ಪ ಮಟ್ಟಿಗೆ ಸಡಿಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಚಿವರ ಜತೆ ಗುರುವಾರ ಸಭೆ ನಡೆಸಿದರು. ಬಳಿಕ ಸುದ್ದಿಗಾರರಿಗೆ ನಿಯಮ ಸಡಿಲಿಕೆಯ ವಿವರ ನೀಡಿದರು.

ಕೋವಿಡ್ ಪ್ರಕರಣಗಳು ನಿಯಂತ್ರಣಕ್ಕೆ ಬರದೇ ಇರುವ 11 ಜಿಲ್ಲೆಗಳಲ್ಲಿ ಇನ್ನಷ್ಟು ಕಠಿಣ ಕ್ರಮಗಳನ್ನು ಜಾರಿಗೊಳಿಸುವ ಅಗತ್ಯವಿದ್ದರೆ, ಜಿಲ್ಲಾ ಉಸ್ತುವಾರಿ ಸಚಿವರ ಜತೆ ಜಿಲ್ಲಾಧಿಕಾರಿಗಳು ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ ಎಂದು ಯಡಿಯೂರಪ್ಪ ತಿಳಿಸಿದರು.

## ನಿಯಮಗಳ ಸಡಿಲಿಕೆ ಯಾವುವು

- ಎಲ್ಲ ಕಾರ್ಖಾನೆಗಳಲ್ಲಿ ಶೇ 50 ರಷ್ಟು ಸಿಬ್ಬಂದಿ ಹಾಗೂ ಗಾರ್ಮೆಂಟ್ಸ್‌ಗಳಲ್ಲಿ ಶೇ 30 ರಷ್ಟು ಹಾಜರಾತಿಯೊಂದಿಗೆ ಕಾರ್ಯ ನಿರ್ವಹಿಸಬಹುದು.
- ಅಗತ್ಯ ವಸ್ತುಗಳ ಮಾರಾಟದ ಅಂಗಡಿಗಳು ಬೆಳಿಗ್ಗೆ 6 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವಹಿವಾಟು ನಡೆಸಬಹುದು.
- ಕಟ್ಟಡ ಮತ್ತು ಇತರ ನಿರ್ಮಾಣ ಕಾಮಗಾರಿ ನಡೆಸಲು ಅವಕಾಶ. ಅದಕ್ಕೆ ಪೂರಕವಾದ ಸಾಮಗ್ರಿಗಳು, ಸ್ಟೀಲ್ ಮತ್ತು ಸಿಮೆಂಟ್ ಮಾರಾಟಕ್ಕೆ ಅವಕಾಶ
- ಉದ್ಯಾನಗಳಲ್ಲಿ ಬೆಳಿಗ್ಗೆ 5 ಗಂಟೆಯಿಂದ ಬೆಳಿಗ್ಗೆ 10 ಗಂಟೆಯವರೆಗೆ ವಾಯುವಿಹಾರ ಮಾಡಬಹುದು
- ಬೀದಿ ವ್ಯಾಪಾರಿಗಳು ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಾರಾಟ ಮಾಡಬಹುದು
- ಆಟೋ ಮತ್ತು ಟ್ಯಾಕ್ಸಿಗಳಲ್ಲಿ ಇಬ್ಬರು ಪ್ರಯಾಣಿಕರಿಗೆ ಅವಕಾಶ. ಆದರೆ, ಬಿಎಂಟಿಸಿ ಮತ್ತು ಇತರ ಸಮೂಹ ಸಾರಿಗೆಗಳಿಗೆ ಅವಕಾಶವಿಲ್ಲ.
- ತುರ್ತು ಕಾರ್ಯದ ನಿಮಿತ್ತ ಅಂತರ್ ಜಿಲ್ಲಾ ಪ್ರಯಾಣಕ್ಕೆ ಅವಕಾಶವೂ ಇದೆ.

### ಲಾಕ್‌ಡೌನ್ ಜಿಲ್ಲೆಗಳು

ಚಿಕ್ಕಮಗಳೂರು
ಶಿವಮೊಗ್ಗ
ದಾವಣಗೆರೆ
ಮೈಸೂರು
ಚಾಮರಾಜನಗರ
ಹಾಸನ
ದಕ್ಷಿಣಕನ್ನಡ
ಬೆಂಗಳೂರು ಗ್ರಾಮಾಂತರ
ಮಂಡ್ಯ
ಬೆಳಗಾವಿ
ಕೊಡಗು

### ರಾತ್ರಿ ಕರ್ಫ್ಯೂ

- ಪ್ರತಿ ದಿನ ರಾತ್ರಿ 7 ಗಂಟೆಯಿಂದ ಮಾರನೇ ದಿನ ಬೆಳಿಗ್ಗೆ 5 ಗಂಟೆಯವರೆಗೆ

### ವಾರಾಂತ್ಯ ಕರ್ಫ್ಯೂ

- ಜೂನ್ 18 ರ ಶುಕ್ರವಾರ ರಾತ್ರಿ 7 ರಿಂದ ಜೂನ್ 21 ರ ಸೋಮವಾರ ಬೆಳಿಗ್ಗೆ 5 ಗಂಟೆಯವರೆಗೆ

ಪ್ರಕರಣಗಳು ಕಡಿಮೆಯಾಗಿರುವ ಉಳಿದ ಜಿಲ್ಲೆಗಳಲ್ಲಿ ನಿಯಮಗಳನ್ನು ಸಡಿಲಿಕೆ ಮಾಡಲು ನಿರ್ಧರಿಸಲಾಗಿದ್ದು, ಮೊದಲ ಹಂತದ ಸಡಿಲಿಕೆ ಜೂನ್ 14 ರ ಬೆಳಿಗ್ಗೆ 6 ಗಂಟೆಯಿಂದ ಜೂನ್ 21 ರ ಬೆಳಿಗ್ಗೆ 6 ಗಂಟೆಯವರೆಗೆ ಅನ್ವಯವಾಗುತ್ತದೆ. ನಂತರದ ಹಂತಗಳಲ್ಲಿ ಪರಿಸ್ಥಿತಿ ನೋಡಿಕೊಂಡು ಇನ್ನಷ್ಟು ಸಡಿಲಿಕೆ ಮಾಡಲಾಗುವುದು ಎಂದರು.

**ಜಿಲ್ಲಾಧಿಕಾರಿಗಳ ಜತೆ ಸಂವಾದ:** ಕೋವಿಡ್ ಪ್ರಕರಣಗಳು ಹೆಚ್ಚಾಗಿರುವ ಎಂಟು ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ಯಡಿಯೂರಪ್ಪ ಗುರುವಾರ ಬೆಳಿಗ್ಗೆ ವಿಡಿಯೊ ಸಂವಾದ ನಡೆಸಿ, ಲಾಕ್‌ಡೌನ್ ಸಡಿಲಿಸುವ ಕುರಿತು ಅಭಿಪ್ರಾಯ ಪಡೆದರು.

ಕೋವಿಡ್ ದೃಢ ಪ್ರಮಾಣವನ್ನು ಶೇ 5 ಕ್ಕಿಂತ ಕಡಿಮೆಗೊಳಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವಂತೆ ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಮೈಸೂರು, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು.

ರಾಜ್ಯದ ಒಟ್ಟು ಪ್ರಕರಣಗಳಲ್ಲಿ 65 ಸಾವಿರ ಸಕ್ರಿಯ ಪ್ರಕರಣಗಳು ಈ ಎಂಟು ಜಿಲ್ಲೆಗಳಲ್ಲಿವೆ. ಸರ್ಕಾರ ಕೈಗೊಂಡಿರುವ ಕಠಿಣ ನಿರ್ಬಂಧಗಳಿಂದಾಗಿ ಸೋಂಕಿನ ತೀವ್ರತೆ ಇಳಿಮುಖವಾಗುತ್ತಿದೆ. ಆದರೆ, ಎಂಟು ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿಲ್ಲ. ಮೈಸೂರು ಹೊರತುಪಡಿಸಿ ಇತರ ಜಿಲ್ಲೆಗಳಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶಗಳಲ್ಲಿ ಸೋಂಕು ಹೆಚ್ಚಿದೆ' ಎಂದು ಮುಖ್ಯಮಂತ್ರಿ ಕಳವಳ ವ್ಯಕ್ತಪಡಿಸಿದರು.

'ಚಿಕ್ಕಮಗಳೂರು ಜಿಲ್ಲೆಯಲ್ಲಿ ಜೂನ್ ಮೊದಲ ವಾರದಲ್ಲಿ ಕೋವಿಡ್ ದೃಢ ಪ್ರಮಾಣ ಅತಿ ಹೆಚ್ಚು ಅಂದರೆ, ಸರಾಸರಿ ಶೇ 25.17 ದಾಖಲಾಗಿದೆ. ಮೈಸೂರಿನಲ್ಲಿಯೂ ಶೇ 22ರಷ್ಟಿದೆ. ಕೋವಿಡ್ ನಿಯಂತ್ರಣಕ್ಕೆ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

# ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ: ಅರುಣ್ ಸಿಂಗ್

ಪ್ರಜಾವಾಣಿ ವಾರ್ತೆ

**ನವದೆಹಲಿ:** ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ತಿಳಿಸಿದರು.

ಇಲ್ಲಿನ ತಮ್ಮ ನಿವಾಸದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೋವಿಡ್–19 ಸಂದಿಗ್ಧ ಪರಿಸ್ಥಿತಿಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿರುವ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಹೈಕಮಾಂಡ್ ಎದುರು ಯಾವುದೇ ಪ್ರಸ್ತಾವ ಇಲ್ಲ' ಎಂದರು.

'ಪಕ್ಷವು ಎಲ್ಲಾ ರಾಜ್ಯಗಳಲ್ಲಿರುವ ಕಾರ್ಯಕರ್ತರು, ಮುಖಂಡರು ಸೇರಿದಂತೆ ಪ್ರತಿಯೊಬ್ಬರಿಗೂ ಮಾರ್ಗದರ್ಶನ ನೀಡುತ್ತದೆ. ಅದೇ ರೀತಿ, ಪಕ್ಷದ ಹೈಕಮಾಂಡ್ ಮೇಲೂ ಪ್ರತಿಯೊಬ್ಬರಿಗೆ ವಿಶ್ವಾಸ ಇರುತ್ತದೆ. ಯಡಿಯೂರಪ್ಪ ಅವರೂ ಹೈಕಮಾಂಡ್ ಮಾರ್ಗದರ್ಶನದ ಮೇರೆಗೆ ಕಾರ್ಯ ನಿರ್ವಹಿಸುತ್ತೇನೆ ಎಂದು ಹೇಳಿರುವುದರಲ್ಲಿ ತಪ್ಪೇನೂ ಇಲ್ಲ' ಎಂದು ಅವರು ಹೇಳಿದರು.

ಅರುಣ್ ಸಿಂಗ್

'ಕೆಲವು ಶಾಸಕರು ಯಡಿಯೂರಪ್ಪ ವಿರುದ್ಧ ದನಿ ಎತ್ತಿದ್ದರೆ, ಇನ್ನು ಕೆಲವರು ಅವರ ಪರ ಸಹಿ ಸಂಗ್ರಹ ಕಾರ್ಯದಲ್ಲಿ ತೊಡಗಿದ್ದಾರೆ ಎಂಬ ಮಾಹಿತಿ ದೊರೆತಿದೆ. ಜೂನ್ 16 ಅಥವಾ 17ರಿಂದ ಮೂರು ದಿನ ನಾನು ಕರ್ನಾಟಕಕ್ಕೆ ಭೇಟಿ ನೀಡಲಿದ್ದೇನೆ. ಅವರೆಲ್ಲರ ಅಹವಾಲುಗಳನ್ನು ಆಲಿಸುತ್ತೇನೆ. ಮಾತುಕತೆ ಮೂಲಕ ಗೊಂದಲ ನಿವಾರಿಸುತ್ತೇನೆ' ಎಂದು ಅರುಣ್ ಸಿಂಗ್ ಸ್ಪಷ್ಟಪಡಿಸಿದರು.

ಸಾರ್ವಜನಿಕ ಜೀವನದಲ್ಲಿ ಇರುವ ಶಾಸಕರು ಬಹಿರಂಗವಾಗಿ ಯಾವುದೇ ರೀತಿಯ ಹೇಳಿಕೆ ನೀಡುವುದು ಸರಿಯಲ್ಲ. ಈಗಾಗಲೇ ಬಹಿರಂಗ ಹೇಳಿಕೆ ನೀಡಿದವರೊಂದಿಗೆ ಮಾತನಾಡಲಾಗುವುದು ಎಂದು ಅವರು ವಿವರಿಸಿದರು.

ಶಾಸಕರು ಕ್ಷೇತ್ರದ ಜನರ ಸೇವೆ ಮಾಡಬೇಕು. ರಾಜ್ಯದ ಒಳಿತನ್ನೇ ಆಲೋಚಿಸಬೇಕು. ಈ ನಿಟ್ಟಿನಲ್ಲಿ ಅವರೊಂದಿಗೆ ಸಮಾಲೋಚನೆ ನಡೆಸಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು. ಶಾಸಕಾಂಗ ಪಕ್ಷದ ಸಭೆ ನಡೆಸಬೇಕೇ ಬೇಡವೇ ಎಂಬ ಕುರಿತೂ ಆಗಲೇ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

'ರಾಜ್ಯ ಘಟಕದ ಅಧ್ಯಕ್ಷರನ್ನೂ ಬದಲಿಸುವ ಬಗ್ಗೆ ಚರ್ಚೆ ನಡೆದಿದೆಯೇ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಉತ್ತಮ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂಘಟನೆ ಕಾರ್ಯದಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದರು.

# ವಿಜಯೇಂದ್ರ ಮಠ ಸುತ್ತಾಟ ಗುಟ್ಟು?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪನವರ ಬದಲಾವಣೆಯ ಪ್ರಶ್ನೆಯೇ ಇಲ್ಲ ಎಂದು ಪಕ್ಷದ ವರಿಷ್ಠರು ಭರವಸೆ ನೀಡಿದ್ದಾರೆ ಎಂದು ಸಚಿವರು, ಬಿಜೆಪಿ ನಾಯಕರು ಬಲವಾಗಿ ಪ್ರತಿಪಾದಿಸಿದ್ದರೂ ಪಕ್ಷದ ರಾಜ್ಯ ಉಪಾಧ್ಯಕ್ಷ ಹಾಗೂ ಮುಖ್ಯಮಂತ್ರಿ ಪುತ್ರ ಬಿ.ವೈ. ವಿಜಯೇಂದ್ರ ಅವರು ಮಠಗಳನ್ನು ಸುತ್ತಲಾರಂಭಿಸಿರುವುದು ರಾಜಕೀಯ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ವಿಜಯೇಂದ್ರ

ಯಡಿಯೂರಪ್ಪನವರ ವಿರೋಧಿ ಎಂದೇ ಗುರುತಿಸಿಕೊಂಡಿರುವ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಅವರು ಇತ್ತೀಚೆಗೆ ಹಲವು ಮಠಗಳಿಗೆ ಭೇಟಿ ಕೊಟ್ಟಿದ್ದರು. ದೆಹಲಿ ಮಟ್ಟದಲ್ಲಿ ಬಿಜೆಪಿಯೊಳಗೆ 'ಹಿಡಿತ' ಹೊಂದಿರುವ ಕರ್ನಾಟಕದ 'ಪ್ರಭಾವಿ'ಯೊಬ್ಬರ ಸಂದೇಶವನ್ನು ರವಾನಿಸುವ ಜತೆಗೆ, ಮಠಾಧೀಶರ ಮನವೊಲಿಸುವ ಕಸರತ್ತನ್ನು ಯೋಗೇಶ್ವರ್ ನಡೆಸಿದ್ದರು ಎಂದೂ ಹೇಳಲಾಗಿತ್ತು. ಈ ಬೆಳವಣಿಗೆ ಬೆನ್ನಲ್ಲೇ, ವಿಜಯೇಂದ್ರ ಮಠ ಸುತ್ತಾಟ ಆರಂಭಿಸಿರುವುದು ವಿವಿಧ ರೀತಿಯ ವಿಶ್ಲೇಷಣೆಗಳಿಗೆ ದಾರಿ ಮಾಡಿಕೊಟ್ಟಿದೆ.

ಎರಡು ದಿನಗಳಿಂದ ವಿವಿಧ ಮಠಗಳಿಗೆ ಭೇಟಿ ನೀಡಿದ ವಿಜಯೇಂದ್ರ ಮಠಾಧೀಶರ ಜತೆ ಸುದೀರ್ಘ ಸಮಾಲೋಚನೆ ನಡೆಸಿದ್ದಾರೆ. ಸುತ್ತೂರು, ಸಿದ್ದಗಂಗಾ, ಹಿರಿಯೂರು, ಚಿತ್ರದುರ್ಗದಲ್ಲಿರುವ ಪ್ರಮುಖ ವೀರಶೈವ– ಲಿಂಗಾಯತ ಮಠಗಳ ಪೀಠಾಧ್ಯಕ್ಷರನ್ನು ಭೇಟಿ ಮಾಡಿದ್ದಾರೆ.

'ಇದು ವೈಯಕ್ತಿಕ ಭೇಟಿ' ಎಂದು ವಿಜಯೇಂದ್ರ ಆಪ್ತರು ಹೇಳಿದರೂ, ರಾಜ್ಯ ರಾಜಕೀಯ ಬೆಳವಣಿಗೆಗಳ ಬಗ್ಗೆ ಈ ಸಂದರ್ಭದಲ್ಲಿ ಚರ್ಚೆ ನಡೆದಿದೆ ಎನ್ನುತ್ತವೆ ಮೂಲಗಳು.

ಚಿತ್ರದುರ್ಗದ ಮುರುಘಾ ಶರಣರ ಜತೆ ನಡೆಸಿದ ಭೇಟಿಯ ಸಂದರ್ಭದಲ್ಲಿ ವಿಜಯೇಂದ್ರ ಅವರು 'ತಮ್ಮ ತಂದೆಯವರ ಬೆಂಬಲಕ್ಕೆ ಮಠಗಳು ನಿಲ್ಲಬೇಕು' ಎಂದು ಮನವಿ ಮಾಡಿದ್ದಾರೆಂದು ಗೊತ್ತಾಗಿದೆ.

ಈ ಸಂದರ್ಭದಲ್ಲಿ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು, ಮಾದಾರ ಚೆನ್ನಯ್ಯ ಸ್ವಾಮೀಜಿ, ವಾಲ್ಮೀಕಿ ಪೀಠದ ಪುರುಷೋತ್ತಮಾನಂದ ಸ್ವಾಮೀಜಿ, ಶಿರಸಿ ರುದ್ರದೇವರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಹಾವೇರಿ ಹೊಸಮಠದ ಶಾಂತಲಿಂಗ ಸ್ವಾಮೀಜಿ, ಚಳ್ಳಕೆರೆಯ ವಿರಕ್ತ ಮಠದ ಬಸವ ಕಿರಣ ಸ್ವಾಮೀಜಿ, ದಾವಣಗೆರೆಯ ವಿರಕ್ತಮಠದ ಬಸವಪ್ರಭು ಸ್ವಾಮೀಜಿ, ಚಿತ್ರದುರ್ಗದ ಭೋವಿಮಠದ ಇಮ್ಮಡಿ ಸಿದ್ದರಾಮ ಸ್ವಾಮೀಜಿ, ಮೇದಾರ ಪೀಠದ ಕೇತೇಶ್ವರ ಸ್ವಾಮೀಜಿ ಇದ್ದರು.

**ಮಠಾಧೀಶರಿಗೆ ಮನವರಿಕೆ:** ಯಡಿಯೂರಪ್ಪನವರ ಬೆನ್ನಿಗೆ ನಿಲ್ಲುವಂತೆ ಮಠಾಧೀಶರ ಮನವೊಲಿಸುವುದು ವಿಜಯೇಂದ್ರ ಮಠ ಸುತ್ತಾಟದ ಪ್ರಮುಖ ಉದ್ದೇಶ ಎನ್ನಲಾಗಿದೆ.

ಆದರೆ, ವಿಜಯೇಂದ್ರ ಭೇಟಿಗೆ ಮುನ್ನವೇ ಆರೆಸ್ಸೆಸ್ ನಿಷ್ಠರಾದ ಕೆಲವು ಬಿಜೆಪಿ ನಾಯಕರು ಮಠಾಧೀಶರನ್ನು ಭೇಟಿ ಮಾಡಿ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಅವರಿಗೆ ವಿವರಿಸಿ, ಮನವರಿಕೆ ಮಾಡಿಕೊಡುವ ಯತ್ನ ನಡೆಸಿದ್ದಾರೆ. ಈ ವೇಳೆ, ನಾಯಕತ್ವ ಬದಲಾವಣೆ ಕುರಿತಂತೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡದಂತೆ ಮಠಾಧೀಶರ ಮನವೊಲಿಸುವ ಯತ್ನವನ್ನು ಈ ನಾಯಕರು ಮಾಡಿದ್ದರು. ಅದನ್ನು, ಬದಲಿಸಿ, ತಮ್ಮ ಪರ ನಿಲುವು ವ್ಯಕ್ತಪಡಿಸುವಂತೆ ಬಲ ಕ್ರೋಡೀಕರಣ ಮಾಡುವುದು ವಿಜಯೇಂದ್ರ ಉದ್ದೇಶ.

## ಯುಪಿಎಸ್‌ಸಿ ಆ.2ರಿಂದ ಸಂದರ್ಶನ ಆರಂಭ

**ನವದೆಹಲಿ(ಪಿಟಿಐ):** ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) 2020ನೇ ಸಾಲಿನ ನಾಗರಿಕ ಸೇವೆಗಳ ಸಂದರ್ಶನವನ್ನು ಆಗಸ್ಟ್ 2ರಿಂದ ಆರಂಭಿಸಲಿದೆ.

ಕೋವಿಡ್ ಪರಿಸ್ಥಿತಿಯಿಂದಾಗಿ ಕೇಂದ್ರ ಲೋಕಸೇವಾ ಆಯೋಗವು ಕಳೆದ ಏಪ್ರಿಲ್‌ನಲ್ಲಿ ನಡೆಯಬೇಕಿದ್ದ ಸಂದರ್ಶನಗಳನ್ನು ಮುಂದೂಡಿತ್ತು. ಸಂದರ್ಶನದ 'ಇ-ಪತ್ರ'ಗಳು ಶೀಘ್ರದಲ್ಲಿ ಲಭ್ಯವಾಗಲಿವೆ. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಯುಪಿಎಸ್‌ಸಿ ಅಧಿಕೃತ ವೆಬ್‌ಸೈಟ್ www.upsc.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಇದೇ ವರ್ಷದ ಮಾರ್ಚ್ 23ರಂದು ನಡೆಸಲಾಗಿದ್ದ ನಾಗರಿಕ ಸೇವೆಗಳ (ಮುಖ್ಯ) ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುತ್ತದೆ.

ಕೋವಿಡ್: ಆಸ್ಪತ್ರೆಗಳಲ್ಲಿನ ಹಾಸಿಗೆ ಬೇಡಿಕೆ ಕುಸಿತ

# ಶೇ 50ಕ್ಕೂ ಹೆಚ್ಚು ಹಾಸಿಗೆ ಖಾಲಿ

• ವರುಣ ಹೆಗಡೆ

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಏರಿಕೆ ಕಂಡ ಬೆನ್ನಲ್ಲೇ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಯನ್ನು ಹಲವು ಪಟ್ಟು ಹೆಚ್ಚಳ ಮಾಡಲಾಗಿತ್ತು. ಆದರೆ, ಈಗ ಸೋಂಕಿತರ ಸಂಖ್ಯೆ ಇಳಿಮುಖ ಆಗಿರುವುದರಿಂದ ಶೇ 50ಕ್ಕೂ ಹೆಚ್ಚು ಹಾಸಿಗೆಗಳು ಖಾಲಿ ಉಳಿದಿವೆ.

ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆಗಾಗಿ ಮೀಸಲಾಗಿರುವ 61,979 ಹಾಸಿಗೆಗಳಲ್ಲಿ 36 ಸಾವಿರಕ್ಕೂ ಹೆಚ್ಚು ಹಾಸಿಗೆಗಳು ಈಗ ಖಾಲಿ ಉಳಿದಿವೆ. ಸಂಭಾವ್ಯ ಮೂರನೇ ಅಲೆಯ ಹೊಡೆತ ತಡೆಯಲು ಬೇಕಾಗಬಹುದು ಎಂಬ ಲೆಕ್ಕಾಚಾರದಲ್ಲಿ ಅವುಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸರ್ಕಾರ ನಿರ್ಧರಿಸಿದೆ.

ಫೆಬ್ರವರಿಯಲ್ಲಿ ಕೆಲ ದಿನಗಳು 500ರ ಆಸುಪಾಸಿನಲ್ಲಿದ್ದ ಹೊಸ ಪ್ರಕರಣಗಳ ಸಂಖ್ಯೆ ಏಪ್ರಿಲ್ ತಿಂಗಳಲ್ಲಿ ದಿನವಹಿ 50 ಸಾವಿರದ ಆಸುಪಾಸು ತಲುಪಿತ್ತು. ಸಕ್ರಿಯ ಪ್ರಕರಣಗಳ ಸಂಖ್ಯೆ ಆರು ಲಕ್ಷದ ಗಡಿ ದಾಟಿತ್ತು.

ಪರೀಕ್ಷೆ ವಿಳಂಬ, ಮನೆ ಆರೈಕೆ ವೇಳೆ ನಿರ್ಲಕ್ಷ್ಯ ಸೇರಿದಂತೆ ವಿವಿಧ ಕಾರಣಗಳಿಂದ ಗಂಭೀರವಾಗಿ ಅಸ್ವಸ್ಥಗೊಂಡು, ಆಸ್ಪತ್ರೆಯತ್ತ ಮುಖ ಮಾಡಿದವರ ಸಂಖ್ಯೆ ಏರಿಕೆಯಾಗಿದ್ದರಿಂದ ಆಸ್ಪತ್ರೆಗಳಲ್ಲಿ ಹಾಸಿಗೆ ಅಭಾವ ತೀವ್ರತರವಾಗಿ ಕಾಡಿತ್ತು.

ಆಮ್ಲಜನಕ ಸಂಪರ್ಕ ಸಹಿತ ಹಾಗೂ ಐಸಿಯು ಹಾಸಿಗೆಗಳಿಗೆ ಬೇಡಿಕೆ ಹೆಚ್ಚಿದ ಪರಿಣಾಮ ತಾಲ್ಲೂಕು ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು ಸೇರಿದಂತೆ ವಿವಿಧೆಡೆ ಹಾಸಿಗೆಗಳನ್ನು ವ್ಯವಸ್ಥೆ ಮಾಡಲಾಗಿದೆ. ಕೋವಿಡ್ ಕಾಣಿಸಿಕೊಳ್ಳುವ ಮೊದಲು ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳಲ್ಲಿ 1,970 ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳಿದ್ದವು. ಈಗ ಆ ಸಂಖ್ಯೆ 24 ಸಾವಿರಕ್ಕೆ ಏರಿಕೆಯಾಗಿದೆ.

8ನೇ ಪುಟ ನೋಡಿ

> ಆಸ್ಪತ್ರೆಗೆ ದಾಖಲಾಗುವ ಕೋವಿಡ್ ಪೀಡಿತರ ಸಂಖ್ಯೆ ಕಡಿಮೆಯಾಗಿದೆ. ಇದರಿಂದಾಗಿ ಹೆಚ್ಚಿನ ಹಾಸಿಗೆಗಳು ಖಾಲಿಯಿವೆ
> **ಡಾ. ಓಂಪ್ರಕಾಶ್ ಪಾಟೀಲ್**
> ಆರೋಗ್ಯ ಇಲಾಖೆ ನಿರ್ದೇಶಕ

ಪ್ರಜಾವಾಣಿ ವಿಶೇಷ

**ಕೋವಿಡ್ ಹಾಸಿಗೆಗಳ ವಿವರ (ಜೂ. 9)**

| ವಿಧ | ಮೀಸಲು | ಭರ್ತಿ | ಖಾಲಿ |
|---|---|---|---|
| ಸಾಮಾನ್ಯ | 30,726 | 9,630 | 21,096 |
| ವೆಂಟಿಲೇಟರ್ ರಹಿತ ಐಸಿಯು | 3,363 | 2,223 | 1,140 |
| ವೆಂಟಿಲೇಟರ್ ಸಹಿತ ಐಸಿಯು | 3,042 | 2,198 | 844 |
| ಆಮ್ಲಜನಕ ಸೌಲಭ್ಯ ಸಹಿತ | 24,848 | 11,465 | 13,383 |

* ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಒಟ್ಟು ಸಂಖ್ಯೆ

## ಕಪ್ಪು ಶಿಲೀಂಧ್ರ: ಹಾಸಿಗೆ ಲಭ್ಯತೆಯ ಮಾಹಿತಿ ಕೇಳಿದ ಹೈಕೋರ್ಟ್

**ಬೆಂಗಳೂರು:** ಕಪ್ಪು ಶಿಲೀಂಧ್ರ ಸೋಂಕಿತರಿಗೆ ಚಿಕಿತ್ಸೆ ನೀಡಲು ರಾಜ್ಯದಲ್ಲಿ ಲಭ್ಯ ಇರುವ ಹಾಸಿಗೆಗಳ ಸಂಖ್ಯೆಗೆ ಸಂಬಂಧಿಸಿದಂತೆ ಅಂಕಿ–ಅಂಶ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಸದ್ಯ ರಾಜ್ಯದಲ್ಲಿ 2,282 ಕಪ್ಪು ಶಿಲೀಂಧ್ರ ಪ್ರಕರಣಗಳು ವರದಿಯಾಗಿವೆ. 1,947 ರೋಗಿಗಳು ಚಿಕಿತ್ಸೆಯಲ್ಲಿದ್ದು, 157 ಜನ ಮೃತಪಟ್ಟಿದ್ದಾರೆ. 102 ಮಂದಿ ಗುಣಮುಖರಾಗಿದ್ದಾರೆ ಎಂದು ಸರ್ಕಾರ ವಿವರಿಸಿತು.

'ಐಸಿಎಂಆರ್ ಹೊರಡಿಸಿರುವ ಹೊಸ ಮಾರ್ಗಸೂಚಿಗಳ ಪ್ರಕಾರ ಆಸ್ಪತ್ರೆ ಗಳಲ್ಲಿ ಚಿಕಿತ್ಸೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಅಗತ್ಯ ಔಷಧಗಳನ್ನ ಕೇಂದ್ರ ಸರ್ಕಾರ ಪೂರೈಸಬೇಕು' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಶೇಷ ವಿಭಾಗೀಯ ಪೀಠ ನಿರ್ದೇಶನ ನೀಡಿತು.

2ನೇ ಪುಟ ನೋಡಿ

**ರಾಜ್ಯ ಕೋವಿಡ್ ಅಂಕಿ–ಅಂಶ**

27,39,290 ▲ ಒಟ್ಟು ಸೋಂಕಿತರು (27,28,248 ನಿನ್ನೆಯ ವಿವರ)
2,10,652 ▼ ಸಕ್ರಿಯ ಪ್ರಕರಣಗಳು
24,96,132 ▲ ಗುಣಮುಖರಾದವರು
32,485 ಒಟ್ಟು ಸಾವು ▼

**ದಿನದ ಏರಿಕೆ**

| | | |
|---|---|---|
| ಹೊಸ ಪ್ರಕರಣ | 11,042 | ▲ |
| ಗುಣಮುಖ | 15,721 | ▼ |
| ಸಾವು | 194 | ▲ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

# ಬಿಹಾರ: ಕೋವಿಡ್ ಸಾವಿನ ಪ್ರಮಾಣ ಒಂದೇ ದಿನ ಶೇ 72ರಷ್ಟು ಹೆಚ್ಚಳ!

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬಿಹಾರದಲ್ಲಿ ಕೋವಿಡ್‌ನಿಂದಾಗಿ ಮೃತಪಟ್ಟವರ ಪ್ರಮಾಣ 24 ತಾಸುಗಳೊಳಗೆ ಶೇ 72ರಷ್ಟು ಏರಿಕೆಯಾಗಿದೆ. ಭಾರತದಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆಯು ಸರಿಯಾಗಿ ದಾಖಲಾಗುತ್ತಿಲ್ಲ ಎಂಬ ಬಹುಕಾಲದ ಅನುಮಾನಕ್ಕೆ ಇದು ಪುಷ್ಟಿ ನೀಡಿದೆ.

ಜೂನ್ 7ರವರೆಗೆ ಬಿಹಾರದಲ್ಲಿ ಕೋವಿಡ್‌ನಿಂದ ಮೃತರಾದವರ ಸಂಖ್ಯೆ 5,424 ಇತ್ತು. ಆದರೆ, ಮರುದಿನ ಈ ಸಂಖ್ಯೆ 9,375ಕ್ಕೆ ಏರಿದೆ. ಪಟ್ನಾ ಹೈಕೋರ್ಟ್‌ನ ಆದೇಶದಂತೆ ಬಿಹಾರ ಸರ್ಕಾರವು ಸಾವಿನ ಸಂಖ್ಯೆಯನ್ನು ಮರುಪರಿಶೀಲನೆ ನಡೆಸಿದ್ದರಿಂದ ಈ ಹೆಚ್ಚಳ ಆಗಿದೆ. 3,951 ಪ್ರಕರಣಗಳು ಹೊಸದಾಗಿ ಸೇರ್ಪಡೆ ಆಗಿವೆ.

ಅತಿ ದೊಡ್ಡ ಪ್ರಮಾಣದ ಹೆಚ್ಚಳ ಪಟ್ನಾದಲ್ಲಿ ಕಂಡು ಬಂದಿದೆ. ಜೂನ್ 8ರ ಪ್ರಕಾರ, ಪಟ್ನಾದಲ್ಲಿ 2,293 ಮಂದಿ ಮೃತಪಟ್ಟಿದ್ದಾರೆ. ಆದರೆ, ಒಂದು ದಿನ ಹಿಂದೆ ಇದು 1,223 ಆಗಿತ್ತು. ಏರಿಕೆಯ ಪ್ರಮಾಣವು ಶೇ 80ರಷ್ಟಾಗಿದೆ.

ಕೋವಿಡ್ ಸಾವಿನ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡ ಇತರ ಜಿಲ್ಲೆಗಳೆಂದರೆ ಮುಝಫ್ಫರ್‌ಪುರ (294ರಿಂದ 608), ಮಧುಬನಿ (154ರಿಂದ 316), ಬೇಗುಸರಾಯ್ (138ರಿಂದ 454), ಪೂರ್ವ ಚಂಪಾರಣ್ (131ರಿಂದ 422) ಮತ್ತು ನಳಂದ (240ರಿಂದ 462).

8ನೇ ಪುಟ ನೋಡಿ

# ಯೋಗಿ–ಮೋದಿ ಭೇಟಿ ಇಂದು

**ನವದೆಹಲಿ (ಪಿಟಿಐ):** ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗುರುವಾರ ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಒಂದೂವರೆ ಗಂಟೆ ಕಾಲ ಚರ್ಚೆ ನಡೆಸಿದರು.

ಉತ್ತರ ಪ್ರದೇಶದಲ್ಲಿನ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಭೇಟಿ ಮಹತ್ವ ಪಡೆದಿದೆ. ಶುಕ್ರವಾರ ಆದಿತ್ಯನಾಥ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಯಾಗಲಿದ್ದಾರೆ.

**ಸೂರ್ಯನ ಉಂಗುರ**
ಕೊಪ್ಪಳದಲ್ಲಿ ಗುರುವಾರ ಕಂಡುಬಂದ ಸೂರ್ಯನ ಸುತ್ತಲೂ ಆವರಿಸಿದ್ದ ಬೆಳಕಿನ ಉಂಗುರದ ಮಾದರಿಯ ಕೆಳಗೆ ಗಾಳಿಪಟ ಹಾರಿಸುತ್ತಿದ್ದ ಬಾಲಕ. ಮೋಡಕವಿದ ವಾತಾವರಣದಿಂದಾಗಿ ಈ ವಿಸ್ಮಯ ಹೆಚ್ಚು ಹೊತ್ತು ಗೋಚರಿಸಲಿಲ್ಲ ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

**ಇಂದಿನ ಪಾಡ್‌ಕಾಸ್ಟ್ ವಿಶೇಷ**
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತಿ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ರಶೀದಿ ಮೇಲೆ ಪರವಾನಗಿ ಸಂಖ್ಯೆ ಕಡ್ಡಾಯ 9

2ತಿಂಗಳ ಲಾಕ್‌ಡೌನ್: ಒಂದು ತಿಂಗಳ ತೆರಿಗೆ ವಿನಾಯಿತಿ

# ಸರ್ಕಾರದ ನೀತಿ: ಚಾಲಕರ ಫಜೀತಿ

• ವಿಜಯಕುಮಾರ್ ಎಸ್.ಕೆ.

**ಬೆಂಗಳೂರು:** ವಾಹನ ಸಂಚಾರಕ್ಕೆ ಏಪ್ರಿಲ್ 21ರಿಂದಲೇ ನಿರ್ಬಂಧ ಇದ್ದರೂ ಟ್ಯಾಕ್ಸಿ ಮತ್ತು ಮ್ಯಾಕ್ಸಿಕ್ಯಾಬ್ ಚಾಲಕರಿಗೆ ಒಂದು ತಿಂಗಳ ತೆರಿಗೆ ವಿನಾಯಿತಿ ಮಾತ್ರ ಸಿಕ್ಕಿದೆ. ಕೆಲಸ ಇಲ್ಲದೆ ಅತಂತ್ರ ಸ್ಥಿತಿಯಲ್ಲಿರುವ ಚಾಲಕರಿಗೆ ಈಗ ಡೀಸೆಲ್ ದರ ಏರಿಕೆಯ ಬರೆಯೂ ಹೊರೆಯಾಗಿದೆ.

ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಬಸ್, ಲಾರಿಗಳು ಸಾರಿಗೆ ಇಲಾಖೆಗೆ ತ್ರೈಮಾಸಿಕವಾಗಿ ತೆರಿಗೆ ಪಾವತಿಸಬೇಕು. ಬಸ್ ಮತ್ತು ಲಾರಿಗಳನ್ನು ಶೆಡ್‌ನಲ್ಲೇ ನಿಲ್ಲಿಸಿಕೊಂಡರೆ ಅನುಪಯುಕ್ತ ಎಂದು ಘೋಷಿಸಿಕೊಂಡು ಅದರ ದಾಖಲೆಗಳನ್ನು ಸಾರಿಗೆ ಇಲಾಖೆಗೆ ಹಸ್ತಾಂತರ ಮಾಡಿ ತೆರಿಗೆ ವಿನಾಯಿತಿ ಪಡೆಯಲು ಅವಕಾಶ ಇದೆ. ಈ ರೀತಿಯ ಅವಕಾಶ ಟ್ಯಾಕ್ಸಿ ಮತ್ತು ಮ್ಯಾಕ್ಸಿ ಕ್ಯಾಬ್ ಮಾಲೀಕರಿಗೆ ಇಲ್ಲ. ಮನೆ ಮುಂದೆ ನಿಲ್ಲಿಸಿಕೊಂಡರೂ ತೆರಿಗೆ ಪಾವತಿಸುವುದು ಕಡ್ಡಾಯ. ಈ ನಿಯಮವೇ ತಮಗೆ ಸಂಕಷ್ಟವನ್ನು ತಂದೊಡ್ಡಿದೆ ಎನ್ನುತ್ತಾರೆ ಟ್ಯಾಕ್ಸಿ, ಕ್ಯಾಬ್ ಚಾಲಕರು.

ತೆರಿಗೆ ವಿನಾಯಿತಿ ನೀಡಬೇಕು ಎಂಬ ಮನವಿಯನ್ನು ಸರ್ಕಾರಕ್ಕೆ ಕರ್ನಾಟಕ ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘ ಸಲ್ಲಿಸಿದೆ. ಆದರೆ, ಸರ್ಕಾರ ಒಂದು ತಿಂಗಳ ತೆರಿಗೆ ವಿನಾಯಿತಿ ನೀಡಿದೆ. ಕರ್ಫ್ಯೂ ಸೇರಿ ಎರಡು ತಿಂಗಳ ಕಾಲ ಟ್ಯಾಕ್ಸಿ ಮತ್ತು ಮ್ಯಾಕ್ಸಿಕ್ಯಾಬ್‌ಗಳು ಮನೆ ಮುಂದೆಯೇ ನಿಂತಿವೆ. ದುಡಿಮೆಯೂ ಇಲ್ಲದೆ ಬದುಕು ನಡೆಸುವುದೇ ಕಷ್ಟವಾಗಿರುವ ಸಂದರ್ಭದಲ್ಲಿ ತೆರಿಗೆ ಪಾವತಿಸುವುದು ಹೇಗೆ ಎಂದು ಟ್ಯಾಕ್ಸಿ ಮಾಲೀಕರು ಪ್ರಶ್ನಿಸುತ್ತಾರೆ.

2ನೇ ಪುಟ ನೋಡಿ

## ವಿನಾಯಿತಿ ಸಿಕ್ಕರೆ 5 ಲಕ್ಷ ಜನರಿಗೆ ಅನುಕೂಲ

'ರಾಜ್ಯ ಸರ್ಕಾರ ತೆರಿಗೆ ವಿನಾಯಿತಿಯನ್ನು ಎರಡು ತಿಂಗಳಿಗೆ ವಿಸ್ತರಿಸಿದರೆ ಕನಿಷ್ಠ 5 ಲಕ್ಷ ಟ್ಯಾಕ್ಸಿ ಮತ್ತು ಮ್ಯಾಕ್ಸಿಕ್ಯಾಬ್ ಮಾಲೀಕರು ಮತ್ತು ಚಾಲಕರಿಗೆ ಅನುಕೂಲ ಆಗಲಿದೆ' ಎಂದು ಕರ್ನಾಟಕ ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘದ ಅಧ್ಯಕ್ಷ ಕೆ. ರಾಧಾಕೃಷ್ಣ ಹೊಳ್ಳ ತಿಳಿಸಿದರು. 'ವಾಹನಗಳಿಗೆ ತೆರಿಗೆ ವಿನಾಯಿತಿ ಒದಗಿಸಿದರೆ ದೊಡ್ಡ ಮಟ್ಟದ ಆರ್ಥಿಕ ಹೊರೆ ಸರ್ಕಾರಕ್ಕೆ ಆಗುವುದಿಲ್ಲ. ತಿಂಗಳಿಗೆ ₹104 ಕೋಟಿ ತೆರಿಗೆ ಖೋತಾ ಉಂಟಾಗುತ್ತದೆ. ಕಳೆದ ವರ್ಷದ ಲಾಕ್‌ಡೌನ್ ಸಂದರ್ಭದಲ್ಲಿ ಮೂರು ತಿಂಗಳ ವಿನಾಯಿತಿ ದೊರೆತಿತ್ತು' ಎಂದು ಹೇಳಿದರು.



'ತೆರಿಗೆ ವಿನಾಯಿತಿ ನೀಡಿದರೆ ಲಾಕ್‌ಡೌನ್ ಸಡಿಲವಾದ ಕೂಡಲೇ ವಾಹನಗಳು ರಸ್ತೆಗೆ ಇಳಿಯುತ್ತವೆ. ಇಂಧನ ಇನ್ನಿತರ ಚಟುವಟಿಕೆಗಳ ಮೂಲಕ ಸರ್ಕಾರಕ್ಕೆ ₹800 ಕೋಟಿಗೂ ಅಧಿಕ ಪರೋಕ್ಷ ತೆರಿಗೆ ಬರಲಿದೆ' ಎಂದರು.

ಭಾರತೀಯರನ್ನೇ ನಿರ್ದೇಶಕರನ್ನಾಗಿಸಿ ಕಂಪನಿ ಸೃಷ್ಟಿ • ಚೀನಾ ಮಹಿಳೆ ಭಾಗಿ

# ₹ 300 ಕೋಟಿ ಆನ್‌ಲೈನ್ ವಂಚನೆ

• ಸಂತೋಷ ಜಿಗಳಿಕೊಪ್ಪ

**ಬೆಂಗಳೂರು:** 'ಪವರ್ ಬ್ಯಾಂಕ್' ಸೇರಿದಂತೆ ವಿವಿಧ ಆ್ಯಪ್ ಮೂಲಕ ಲಾಭದ ಆಮಿಷವೊಡ್ಡಿ ಜನರಿಂದ ಅಂದಾಜು ₹ 250 ಕೋಟಿಯಿಂದ ₹ 300 ಕೋಟಿಯಷ್ಟು ಹಣ ಸಂಗ್ರಹಿಸಿ ವಂಚಿಸಿವೆ ಎನ್ನಲಾದ ಕಂಪನಿಗಳ ಕೃತ್ಯದಲ್ಲಿ ಚೀನಾ ಪ್ರಜೆ ಭಾಗಿಯಾಗಿದ್ದಾರೆ.

ದಿನ ಹಾಗೂ ವಾರ ಲೆಕ್ಕದ ಲಾಭ ಆಮಿಷವೊಡ್ಡಿ ರಾಜ್ಯದ ಸಾವಿರಾರು ಜನರಿಂದ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸಿರುವ ಆರೋಪದಡಿ 13 ಕಂಪನಿಗಳ ವಿರುದ್ಧ 'ರೇಜೋರ್‌ಪೇ' ಕಂಪನಿಯ ಕಾನೂನು ವಿಭಾಗದ ಪ್ರತಿನಿಧಿ ಅಭಿಷೇಕ್ ಅಭಿನವ್ ಆನಂದ್ ಎಂಬುವರು ಸಿಐಡಿ ಸೈಬರ್ ಕ್ರೈಂ ವಿಭಾಗಕ್ಕೆ ದೂರು ನೀಡಿದ್ದಾರೆ.

'ಡಬ್ಲ್ಯುಪಿ ರಮ್ಮಿ' ಕಂಪನಿ ನಿರ್ದೇಶಕ ಅನಸ್ ಅಹ್ಮದ್, ಇಬ್ರಾಹಿಂ ಅಮೀರ್, ಧೋನ್‌ಡುಪ್ ವಂಗ್ಯಾಲ್, ಆರೋಕಿಯನಾಥನ್, ರಾಮ್ ಉಜಫರ್, ಪ್ರಕಾಶ್ ವೈರಾಗಿ, ಹರೇಶ್‌ಬಾಯ್ ಗೋಬರಪಬಾಯ್, ವನಜಾರ್ ವಿಜಯ್ ಬಾಯ್, ವನಜಾರ್ ಮಮತಾ ಬೆನ್, ಪರ್ಪಿಲೆಹ್ಯುಸ್ ಸನ್ನಿ, ಜ್ಯೋತಿ ತಿವಾರಿ, ಭಗವತಿ ಪಂತ್ ಎಂಬುವರ ವಿರುದ್ಧ ವಂಚನೆ (ಐಪಿಸಿ 420) ಆರೋಪ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿದೆ.

ಆರೋಪಿ ಅನಸ್ ಅಹ್ಮದ್ ಕೃತ್ಯದಲ್ಲಿ ಆತನ ಪತ್ನಿ, ಚೀನಾ ಪ್ರಜೆ ಹು ಕ್ಸಿಯೋಲಿನ್ ಭಾಗಿಯಾಗಿರುವ ಮಾಹಿತಿ ಇದೆ. ನೋಟಿಸ್ ನೀಡಿದರೂ ವಿಚಾರಣೆಗೆ ಬಂದಿಲ್ಲ. ತಲೆಮರೆಸಿಕೊಂಡಿರುವ ದಂಪತಿಗಾಗಿ ಸಿಐಡಿ ಹುಡುಕಾಟ ನಡೆಸುತ್ತಿದೆ.

8ನೇ ಪುಟ ನೋಡಿ

## ಕೃತ್ಯ ಭೇದಿಸಿರುವ ದೆಹಲಿ, ಉತ್ತರಾಖಂಡ ಪೊಲೀಸರು

'ಪವರ್ ಬ್ಯಾಂಕ್', ಸನ್‌ಫ್ಯಾಕ್ಟರಿ, ಈಜಿಪ್ಲಾನ್ ಆ್ಯಪ್ ಮೂಲಕ ದೆಹಲಿಯಲ್ಲಿ ₹150 ಕೋಟಿ ಹಾಗೂ ಉತ್ತರಾಖಂಡನಲ್ಲಿ ₹ 250 ಕೋಟಿ ವಂಚನೆ ಆಗಿದೆ. ಎರಡೂ ರಾಜ್ಯಗಳ ಪೊಲೀಸರು ಪ್ರಕರಣ ಭೇದಿಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಕರ್ನಾಟಕದ ಸಿಐಡಿ ಸೈಬರ್ ಕ್ರೈಂ ಪೊಲೀಸರು ಸಹ ಪ್ರಕರಣದ ಬೆನ್ನು ಬಿದ್ದಿದ್ದಾರೆ.

### 'ಪವರ್ ಬ್ಯಾಂಕ್' ಏಕಾಏಕಿ ಬಂದ್

'ಸರ್ಕಾರಿ ನೌಕರರು, ಖಾಸಗಿ ಕಂಪನಿ ಉದ್ಯೋಗಿಗಳು, ಆಟೊ ಚಾಲಕರು, ವ್ಯಾಪಾರಿಗಳು, ಪತ್ರಕರ್ತರು, ಬರಹಗಾರರು, ಬೀದಿ ಬದಿ ವ್ಯಾಪಾರಿಗಳು, ಗಾರ್ಮೆಂಟ್ಸ್ ಉದ್ಯೋಗಿಗಳು ಸೇರಿ ಹಲವರು ಪವರ್ ಬ್ಯಾಂಕ್‌ನಲ್ಲಿ ಹಣ ಹೂಡಿಕೆ ಮಾಡಿದ್ದರು' ಎಂದೂ ಮೂಲಗಳು ಹೇಳಿವೆ.

ಸಿಐಡಿ ಸೈಬರ್ ಕ್ರೈಂ ವಿಭಾಗ ಮಾತ್ರವಲ್ಲದೇ ಬೆಂಗಳೂರು ಹಾಗೂ ರಾಜ್ಯದ ವಿವಿಧ ನಗರಗಳಲ್ಲೂ ವಂಚನೆ ಬಗ್ಗೆ ಎಫ್‌ಐಆರ್ ದಾಖಲಾಗಿವೆ.

> ತನಿಖಾಧಿಕಾರಿಯಿಂದ ಮಾಹಿತಿ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿ, ಆರೋಪಿಗಳ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸುವಂತೆ ವಾದ ಮಂಡಿಸಲಾಗುವುದು
> **ಬಿ.ಎಸ್. ಪಾಟೀಲ**
> ಪಬ್ಲಿಕ್ ಪ್ರಾಸಿಕ್ಯೂಟರ್

**ಚಿನಕುರಳಿ**
ಪ್ರಕಾಶ್ ಶೆಟ್ಟಿ

## ನಗರದಲ್ಲಿ ಇಂದು

**200 ಮಂದಿ ಹವ್ಯಾಸಿ ರಂಗ ಕಲಾವಿದರಿಗೆ ಆಹಾರದ ಕಿಟ್ ವಿತರಣೆ:** ಅತಿಥಿಗಳು–ನಟಿ ಪ್ರೇಮಾ ಹಾಗೂ ಬೊಮ್ಮನಹಳ್ಳಿ ಶಾಸಕ ಎಂ. ಸತೀಶ್ ರೆಡ್ಡಿ, ಆಯೋಜನೆ–ರಂಗಚಂದಿರ ಟ್ರಸ್ಟ್ ಮತ್ತು ರೂಪಾಂತರ, ಸ್ಥಳ: ರವೀಂದ್ರ ಕಲಾಕ್ಷೇತ್ರದ ಆವರಣ–ಬೆಳಿಗ್ಗೆ 10.

**ವೈಜ್ಞಾನಿಕವಾಗಿ ಮಾಗಿಸಿದ ಮಾವಿನ ಹಣ್ಣುಗಳನ್ನು ರಟ್ಟಿನ ಬಾಕ್ಸ್‌ನಲ್ಲಿಟ್ಟು ಗ್ರಾಹಕರಿಗೆ ಮಾರಾಟ ಮಾಡುವ ಕಾರ್ಯಕ್ರಮಕ್ಕೆ ಚಾಲನೆ:** ಚಾಲನೆ ನೀಡುವವರು–ಹಾಪ್‌ಕಾಮ್ಸ್ ಅಧ್ಯಕ್ಷ ಎನ್.ದೇವರಾಜು, ಆಯೋಜನೆ–ಹಾಪ್‌ಕಾಮ್ಸ್, ಸ್ಥಳ–ಹಾಪ್‌ಕಾಮ್ಸ್, ಲಾಲ್‌ಬಾಗ್–ಮಧ್ಯಾಹ್ನ 12.

## ನೀರು ಪೂರೈಕೆಯಲ್ಲಿ ವ್ಯತ್ಯಯ ನಾಳೆ

**ಬೆಂಗಳೂರು:** ನಗರದ ಶಿವಾನಂದ ವೃತ್ತದಲ್ಲಿ ಕೊಳವೆ ಮಾರ್ಗದ ಸಂಪರ್ಕ ಕಲ್ಪಿಸುವ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶದಲ್ಲಿ ಇದೇ 12ರಂದು ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಹೇಳಿದೆ.

ಎಂ.ಎಸ್.ಬಿಲ್ಡಿಂಗ್, ವಿಕಾಸಸೌಧ, ವಿಧಾನಸೌಧ, ಶಾಸಕರ ಭವನದ ಕಟ್ಟಡಗಳು, ವಸಂತನಗರ, ಗಾಂಧಿನಗರ, ಸಂಪಂಗಿರಾಮನಗರ, ಚಿಕ್ಕಪೇಟೆ ಮತ್ತು ಕಾಟನ್‌ಪೇಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

### ರಾಜ್ಯವ್ಯಾಪಿ ಕರ್ನಾಟಕ ರಕ್ಷಣಾ ವೇದಿಕೆಯಿಂದ ಪ್ರತಿಭಟನೆ

# ‘ಮನೆಗಳಿಗೆ ತೆರಳಿ ಲಸಿಕೆ ನೀಡಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಎಲ್ಲರಿಗೂ ಉಚಿತವಾಗಿ ಹಾಗೂ ಕಾಲಮಿತಿಯೊಳಗೆ ಲಸಿಕೆ ನೀಡಬೇಕೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ರಾಜ್ಯವ್ಯಾಪಿ ಗುರುವಾರ ಪ್ರತಿಭಟನೆ ನಡೆಸಿತು.

‘ಕನ್ನಡಿಗರನ್ನು ಕೋವಿಡ್ ಎರಡನೇ ಅಲೆಯಿಂದ ರಕ್ಷಿಸಿ, ಇಲ್ಲವೇ ಅಧಿಕಾರದಿಂದ ತೊಲಗಿ’, ‘ಲಸಿಕೆ ಪಡೆಯುವುದು ಪ್ರತಿಯೊಬ್ಬರ ಹಕ್ಕು’, ‘ಜಾತಿ ಆಧಾರದಲ್ಲಿ ಲಸಿಕೆ ನೀಡುವುದನ್ನು ನಿಲ್ಲಿಸಿ’.. ಹೀಗೆ ವಿವಿಧ ಬರಹಗಳನ್ನು ಹೊಂದಿದ್ದ ಭಿತ್ತಿಪತ್ರಗಳನ್ನು ಹಿಡಿದು ಸಂಘಟನೆಯ ಕಾರ್ಯಕರ್ತರು ಪ್ರತಿಭಟಿಸಿದರು.

ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿ, ತಹಶೀಲ್ದಾರ್, ಗ್ರಾಮ ಪಂಚಾಯಿತಿ ಹಾಗೂ ನಾಡ ಕಚೇರಿಗಳ ಎದುರು ಸೇರಿದ್ದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

‘ರಾಜ್ಯದ ಪ್ರತಿಯೊಬ್ಬ ನಾಗರಿಕರಿಗೂ ಕೋವಿಡ್ ಲಸಿಕೆ ಉಚಿತವಾಗಿ ನೀಡಬೇಕು. ಖಾಸಗಿ ಆಸ್ಪತ್ರೆಗಳಿಗೆ ಶೇ 25ರಷ್ಟು ಲಸಿಕೆ ಕೊಳ್ಳಲು ಅವಕಾಶ ನೀಡಲಾಗಿದ್ದು, ಇದನ್ನು ಕೂಡಲೇ ರದ್ದುಪಡಿಸಬೇಕು. ಶೇ 100ರಷ್ಟು ಲಸಿಕೆಯನ್ನು ಸರ್ಕಾರದ ವತಿಯಿಂದಲೇ ಉಚಿತವಾಗಿ ನೀಡಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

‘ಅಕ್ಟೋಬರ್‌ನಲ್ಲಿ ಕೋವಿಡ್ ಮೂರನೇ ಅಲೆ ಶುರುವಾಗಬಹುದೆಂದು ತಜ್ಞರು ಎಚ್ಚರಿಸಿದ್ದಾರೆ. ಹೀಗಾಗಿ ಸೆಪ್ಟೆಂಬರ್ ಒಳಗೆ ಎಲ್ಲರಿಗೂ ಲಸಿಕೆಯ ಎರಡೂ ಡೋಸ್‌ಗಳನ್ನು ನೀಡುವ ನಿಟ್ಟನಲ್ಲಿ ಕ್ರಮ ಕೈಗೊಳ್ಳಬೇಕು. ರಾಜ್ಯದೆಲ್ಲೆಡೆ ಕೋವಿಡ್ ಲಸಿಕೆ ಬೂತ್ ಸ್ಥಾಪಿಸಬೇಕು. ಮನೆ ಮನೆಗೆ ತೆರಳಿ ಲಸಿಕೆ ನೀಡುವ ವ್ಯವಸ್ಥೆ ಮಾಡಬೇಕು. ಲಸಿಕೆ ನೋಂದಣಿ ಪ್ರಕ್ರಿಯೆಯನ್ನು ಇನ್ನಷ್ಟು ಸರಳಗೊಳಿಸಬೇಕು. ಹಳ್ಳಿಗಳಲ್ಲಿ ವಾಸಿಸುತ್ತಿರುವ ಬಹುತೇಕ ಕುಟುಂಬಗಳಿಗೆ ಸ್ಮಾರ್ಟ್‌ಫೋನ್‌ಗಳ ಬಳಕೆ ಗೊತ್ತಿಲ್ಲ. ಹೀಗಾಗಿ ಅವರು ಆನ್‌ಲೈನ್ ನೋಂದಣಿ ಮಾಡುವುದು ಕಷ್ಟ. ಅಂತಹವರ ಬವಣೆ ನೀಗಿಸಬೇಕು’ ಎಂದು ಆಗ್ರಹಿಸಿದರು.

‘ಕೇಂದ್ರ ಸರ್ಕಾರವು ಮೊದಲ ಹಂತದ ಲಸಿಕೆ ಹಂಚಿಕೆ ವೇಳೆ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವೆಸಗಿದೆ. ಆಮ್ಲಜನಕ, ವೆಂಟಿಲೇಟರ್, ರೆಮ್‌ಡಿಸಿವಿರ್ ಹಂಚಿಕೆ ವೇಳೆಯೂ ತಾರತಮ್ಯ ನೀತಿ ಅನುಸರಿಸಿದೆ. ಇನ್ನು ಮುಂದೆ ಲಸಿಕೆಯು ವೈಜ್ಞಾನಿಕ ಹಾಗೂ ಜನಸಂಖ್ಯೆ ಆಧಾರದಲ್ಲಿ ಹಂಚಿಕೆಯಾಗಬೇಕು’ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಸಣ್ಣೀರಪ್ಪ ತಿಳಿಸಿದರು.

ಕರವೇ ಕಾರ್ಯಕರ್ತರು ಬೆಂಗಳೂರಿನಲ್ಲಿ ಗುರುವಾರ ಭಿತ್ತಿಪತ್ರ ಹಿಡಿದು ಪ್ರತಿಭಟನೆ ನಡೆಸಿದರು

## ನಟ ಚೇತನ್ ವಿರುದ್ಧ ಎಫ್‌ಐಆರ್

**ಬೆಂಗಳೂರು:** ‘ಬ್ರಾಹ್ಮಣ್ಯ ಹಾಗೂ ಬ್ರಾಹ್ಮಣರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ’ ಎನ್ನಲಾದ ಆರೋಪದಡಿ ನಟ ಚೇತನ್ ವಿರುದ್ಧ ಬಸವನಗುಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ವಿಪ್ರ ಯುವ ವೇದಿಕೆ ಅಧ್ಯಕ್ಷ ಪವನ್ ಕುಮಾರ್ ಶರ್ಮಾ ಎಂಬುವರು ದೂರು ನೀಡಿದ್ದಾರೆ. ಧಾರ್ಮಿಕ ಭಾವನೆ ಕೆರಳಿಸುವುದು (ಐಪಿಸಿ 129(ಎ) ಹಾಗೂ ದ್ವೇಷ ಭಾವನೆ ಹೆಚ್ಚಿಸುವ (ಐಪಿಸಿ 153 (ಬಿ) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

## ಸರ್ಕಾರದ ನೀತಿ: ಚಾಲಕರ ಫಜೀತಿ

ಒಂದನೇ ಪುಟದಿಂದ

‘ಲಾಕ್‌ಡೌನ್ ಘೋಷಣೆ ಮಾಡಿರುವ ಸರ್ಕಾರವು ಕನಿಷ್ಠ ತೆರಿಗೆ ವಿನಾಯಿತಿ ನೀಡದಿದ್ದರೆ, ವಾಹನಗಳ ಮಾಲೀಕರು ಎಲ್ಲಿಂದ ಹಣ ತಂದು ತೆರಿಗೆ ಪಾವತಿ ಮಾಡಬೇಕು?’ ಎಂದು ಅವರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

‘ಕೆಲವು ಜಿಲ್ಲೆಗಳಲ್ಲಿ ಲಾಕ್‌ಡೌನ್ ಸಡಿಲಗೊಳಿಸಿದರೂ ಪ್ರಯಾಣಿಕರ ಸಂಖ್ಯೆಗೆ ನಿರ್ಬಂಧ ವಿಧಿಸಲಾಗಿದೆ. ಇದರ ನಡುವೆ ಡೀಸೆಲ್ ದರ ಏರಿಕೆಯ ಬರೆಯೂ ನಮ್ಮನ್ನು ಕಾಡುತ್ತಿದೆ. ಹೊಟ್ಟೆ ಪಾಡಿಗೂ ಕಷ್ಟಪಡಬೇಕಾದ ಸ್ಥಿತಿಯಲ್ಲಿ ಟ್ಯಾಕ್ಸಿ ಚಾಲಕರಿದ್ದಾರೆ’ ಎಂದರು.

‘ಲಾಕ್‌ಡೌನ್ ಸಮಯದಲ್ಲಿ ಮನೆಯಲ್ಲೇ ಕುಳಿತಿರುವ ಚಾಲಕರು ಮತ್ತು ಮಾಲೀಕರು ಸಾಲದ ಕಂತು ಪಾವತಿಗೆ ಏನು ಮಾಡಬೇಕು ಎಂಬ ಚಿಂತೆಯಲ್ಲಿದ್ದಾರೆ. ಕಂತು ಬಾಕಿ ಉಳಿದಷ್ಟು ಹೊರೆಯ ಭಾರ ಹೆಚ್ಚುತ್ತದೆ. ಇದರ ನಡುವೆ, ಡೀಸೆಲ್ ದರ ಏರಿಕೆಯ ಬರೆಯನ್ನೂ ಸರ್ಕಾರ ಎಳೆದಿದೆ. ಈ ಸಂದರ್ಭದಲ್ಲಿ ತೆರಿಗೆ ವಿನಾಯಿತಿಯನ್ನಾದರೂ ಸರ್ಕಾರ ನೀಡಬೇಕು’ ಎಂದು ಟ್ಯಾಕ್ಸಿ ಮತ್ತು ಆಟೋರಿಕ್ಷಾ ಮಾಲೀಕರ ಸಂಘದ ಅಧ್ಯಕ್ಷ ಜವರೇಗೌಡ ಮನವಿ ಮಾಡಿದರು.

## ಸುದ್ದಿ 2 ನಿಮಿಷ

### ಅರ್ಚಕರ ಕುಟುಂಬದವರಿಗೆ ಲಸಿಕೆ ವಿತರಣೆ ಇಂದು

**ಬೆಂಗಳೂರು:** ಮುಜರಾಯಿ ಹಾಗೂ ಖಾಸಗಿ ದೇವಾಲಯಗಳಲ್ಲಿ ಸೇವೆ ಸಲ್ಲಿಸುವ ಅರ್ಚಕರು, ಪರಿಚಾರಕರು, ಸೇವಾ ಸಿಬ್ಬಂದಿ, ಮಂಗಳವಾದ್ಯ ನುಡಿಸುವವರು ಮತ್ತು ಅವರ ಕುಟುಂಬದ 18 ವರ್ಷ ಮೇಲ್ಪಟ್ಟ ಸದಸ್ಯರಿಗೆ ಶುಕ್ರವಾರ ಕೋವಿಡ್ ಲಸಿಕೆ ವಿತರಿಸಲಾಗುತ್ತದೆ.

ಕರ್ನಾಟಕ ಅರಣ್ಯ ನಿಗಮದ ಅಧ್ಯಕ್ಷೆ ತಾರಾ ಅನೂರಾಧಾ ಅವರು ರೂಪೇನ ಅಗ್ರಹಾರದಲ್ಲಿರುವ ಶ್ರೀಹರಿ ವೈಕುಂಠ ಕ್ಷೇತ್ರದಲ್ಲಿ ಉಚಿತವಾಗಿ ಲಸಿಕೆ ಒದಗಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಬೆಳಿಗ್ಗೆ 8 ಗಂಟೆಯಿಂದ 10 ಗಂಟೆಯವರೆಗೆ ಲಸಿಕೆ ನೀಡಲಾಗುತ್ತದೆ.

‘ಎಲ್ಲ ದೇವಾಲಯಗಳ ಅರ್ಚಕರು, ಪರಿಚಾರಕರು ಹಾಗೂ ಸೇವಾ ಸಿಬ್ಬಂದಿ ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಲಸಿಕೆ ಕೇಂದ್ರಕ್ಕೆ ಬರುವಾಗ ಕಡ್ಡಾಯವಾಗಿ ಆಧಾರ್ ಅಥವಾ ಛಾಯಾಚಿತ್ರ ಇರುವ ಗುರುತಿನ ಚೀಟಿ ತರಬೇಕು’ ಎಂದು ತಾರಾ ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಂಪರ್ಕಕ್ಕೆ ಮೊ.: 9480620338 ಅಥವಾ 8217737471

### ಕೋವಿಡ್: ಮೃತಪಟ್ಟ ಸಿಬ್ಬಂದಿಗೆ ಪರಿಹಾರ

**ಬೆಂಗಳೂರು:** ಕೋವಿಡ್‌ನಿಂದ ಮೃತಪಟ್ಟ ಸಿಬ್ಬಂದಿಗೆ ತಲಾ ₹ 30 ಲಕ್ಷ ಪರಿಹಾರ ನೀಡುವ ಸಲುವಾಗಿ ಬಿಬಿಎಂಪಿಯು ಅಧಿಕಾರಿಗಳ ತಂಡ ರಚಿಸಿದೆ.

ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಈ ಕುರಿತು ಇದೇ 8ರಂದು ಆದೇಶ ಹೊರಡಿಸಿದ್ದಾರೆ. ಆಯಾ ವಲಯಗಳ ವಲಯ ಆಯುಕ್ತರು, ಜಂಟಿ ಆಯುಕ್ತರು ಹಾಗೂ ಆರೋಗ್ಯಾಧಿಕಾರಿಗಳು ಈ ತಂಡದಲ್ಲಿರಲಿದ್ದಾರೆ. ಕೋವಿಡ್‌ನಿಂದ ಸತ್ತ ಕಾಯಂ ನೌಕರರ ವಿವರಗಳನ್ನು ಪರಿಶೀಲಿಸಿ ಈ ತಂಡವು ಪರಿಹಾರ ಬಿಡುಗಡೆಗೆ ಕ್ರಮಕೈಗೊಳ್ಳಬೇಕು. ಪಿ–3558 ಭತ್ಯೆ ಮತ್ತು ಸೌಲಭ್ಯ ಲೆಕ್ಕ ಶೀರ್ಷಿಕೆಯಡಿ ಪರಿಹಾರದ ಮೊತ್ತ ಪಾವತಿಸಬೇಕು ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಬಿಬಿಎಂಪಿ ಸಿಬ್ಬಂದಿ ಮುಂಚೂಣಿಯಲ್ಲಿದ್ದಾರೆ. ಕೋವಿಡ್ ನಿಯಂತ್ರಣ ಕಾರ್ಯದ ವೇಳೆ ಕರ್ತವ್ಯದಲ್ಲಿ ತೊಡಗಿದ್ದ 40ಕ್ಕೂ ಅಧಿಕ ಸಿಬ್ಬಂದಿಯನ್ನು ಬಿಬಿಎಂಪಿ ಕಳೆದುಕೊಂಡಿದೆ. ಯಾವ ಸಂತ್ರಸ್ತ ಕುಟುಂಬಕ್ಕೂ ಪರಿಹಾರ ಕೈಸೇರಿಲ್ಲ.

‘ಪ್ರಜಾವಾಣಿ’ಯು ಮೇ 18ರ ಸಂಚಿಕೆಯಲ್ಲಿ ‘10 ತಿಂಗಳು ಅಲೆದರೂ ಸಿಕ್ಕಿಲ್ಲ ಕೋವಿಡ್ ಪರಿಹಾರ’ ಎಂಬ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು. ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳುವುದಾಗಿ ಗೌರವ್ ಗುಪ್ತ ಭರವಸೆ ನೀಡಿದ್ದರು.

# ಆಫ್ರಿಕಾ ಆನೆ ದತ್ತು ಪಡೆದ ಉಪೇಂದ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೃಗಾಲಯದಲ್ಲಿರುವ ಪ್ರಾಣಿ, ಪಕ್ಷಿಗಳನ್ನು ದತ್ತು ಪಡೆಯಲು ನಟ ದರ್ಶನ್ ಅವರು ಕರೆ ನೀಡಿದ ಬೆನ್ನಲ್ಲೇ ನಟ ಉಪೇಂದ್ರ, ಮೈಸೂರು ಮೃಗಾಲಯದಲ್ಲಿನ ಆಫ್ರಿಕನ್ ಆನೆಯೊಂದನ್ನು ದತ್ತು ಪಡೆದಿದ್ದಾರೆ.

ಈ ಕುರಿತು ಟ್ವಿಟರ್‌ನಲ್ಲಿ ದತ್ತು ಪಡೆದ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡಿರುವ ಉಪೇಂದ್ರ, ‘ಪ್ರಾಣಿಗಳೇ ಗುಣದಲಿ ಮೇಲು..ನನ್ನ ಮೆಚ್ಚಿನ ಚಾಲೆಂಜಿಂಗ್ ಸ್ಟಾರ್ ದರ್ಶನ್‌ರವರ ಕರೆಯಂತೆ ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಮೃಗಾಲಯದಿಂದ ಆಫ್ರಿಕನ್ ಆನೆ ಒಂದನ್ನು ದತ್ತು ಪಡೆದು, ದರ್ಶನ್‌ರವರ ಮಹತ್ಕಾರ್ಯಕ್ಕೆ ಕೈಜೋಡಿಸಿದ್ದೇವೆ’ ಎಂದು ಉಲ್ಲೇಖಿಸಿದ್ದಾರೆ.

ಜೊತೆಗೆ, ಇದೇ ಮೃಗಾಲಯದ ಚಾಮುಂಡಿ ಹೆಸರಿನ ಆನೆ ಮರಿಯನ್ನು ನಿರ್ಮಾಪಕರಾದ ಉಮಾಪತಿ ಶ್ರೀನಿವಾಸ ಗೌಡ ಅವರು ದತ್ತು ಪಡೆದಿದ್ದಾರೆ ಎಂದು ದರ್ಶನ್ ತಮ್ಮ ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

### ದರ್ಶನ್ ಕರೆಗೆ ಮೃಗಾಲಯಗಳಿಗೆ ಆರು ಪಟ್ಟು ಹೆಚ್ಚು ದೇಣಿಗೆ

**ಬೆಂಗಳೂರು:** ಮೃಗಾಲಯದಲ್ಲಿರುವ ಪ್ರಾಣಿ,ಪಕ್ಷಿಗಳನ್ನು ದತ್ತು ಪಡೆಯಲು ನಟ ದರ್ಶನ್ ಅವರು ನೀಡಿರುವ ಕರೆಗೆ ರಾಜ್ಯದ ಒಂಬತ್ತು ಮೃಗಾಲಯಗಳಿಗೆ ಕೇವಲ ಐದು ದಿನಗಳಲ್ಲಿ ₹1 ಕೋಟಿಗೂ ಅಧಿಕ ದೇಣಿಗೆ ಹರಿದುಬಂದಿದೆ. ಇದು ಕಳೆದ ಒಂದು ವರ್ಷದಲ್ಲಿ ಸಂಗ್ರಹವಾದ ಒಟ್ಟು ದತ್ತು ಹಾಗೂ ದೇಣಿಗೆಗಿಂತ ಸುಮಾರು ಆರು ಪಟ್ಟು ಹೆಚ್ಚು.

2020 ಜುಲೈ 20ರಿಂದ 2021 ಜೂನ್ 4ರವರೆಗೆ ಮೈಸೂರು, ಬನ್ನೇರುಘಟ್ಟ, ಬೆಳಗಾವಿ ಸೇರಿದಂತೆ 9 ಮೃಗಾಲಯಗಳಿಗೆ ದತ್ತು ಹಾಗೂ ದೇಣಿಗೆ ರೂಪದಲ್ಲಿ ₹17.96 ಲಕ್ಷ ಸಂಗ್ರಹವಾಗಿತ್ತು. ಜೂನ್ 5ರಂದು ಮೈಸೂರು ಮೃಗಾಲಯಕ್ಕೆ ಭೇಟಿ ನೀಡಿ ಸಸಿ ನೆಡುವ ಮುಖಾಂತರ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿದ್ದ ನಟ ದರ್ಶನ್, ‘ಕೋವಿಡ್ ಮಹಾಮಾರಿಯಿಂದ ಮಾನವಕುಲಕ್ಕೆ ಎಷ್ಟು ತೊಂದರೆ ಆಗಿದೆಯೋ ಅಷ್ಟೇ ತೊಂದರೆ ಪ್ರಾಣಿಸಂಕುಲಕ್ಕೂ ಆಗಿದೆ. ಹೀಗಾಗಿ ಪ್ರಾಣಿ,ಪಕ್ಷಿಗಳನ್ನು ದತ್ತುಪಡೆದು ಪ್ರಾಣಿಸಂಕುಲ ಉಳಿಸಿ, ಮೃಗಾಲಯ ಬೆಳೆಸಿ’ ಎಂದು ಕರೆ ನೀಡಿದ್ದರು.

ಜೂನ್ 5ರಿಂದ ಜೂನ್ 10ರವರೆಗೆ ಕೇವಲ 5 ದಿನದಲ್ಲಿ 9 ಮೃಗಾಲಯಗಳಲ್ಲಿನ ಪ್ರಾಣಿಗಳನ್ನು ಸಾವಿರಾರು ಜನರು ದತ್ತು ಪಡೆದಿದ್ದು, ₹1 ಕೋಟಿಗೂ ಅಧಿಕ ಹಣ ದತ್ತು ಹಾಗೂ ದೇಣಿಗೆ ರೂಪದಲ್ಲಿ ಬಂದಿದೆ. ಇದರಲ್ಲಿ ಮೈಸೂರು ಮೃಗಾಲಯಕ್ಕೆ ಅತಿ ಹೆಚ್ಚು(₹51.75 ಲಕ್ಷ) ದೇಣಿಗೆ ಬಂದಿದೆ. ಬನ್ನೇರುಘಟ್ಟ ಮೃಗಾಲಯಕ್ಕೆ ₹29.83 ಲಕ್ಷ ಹಾಗೂ ಶಿವಮೊಗ್ಗ ಮೃಗಾಲಯಕ್ಕೆ ₹7.24 ಲಕ್ಷ ಬಂದಿದೆ.

## ಹಾಸಿಗೆ ಲಭ್ಯತೆಯ ಮಾಹಿತಿ ಕೇಳಿದ ಹೈಕೋರ್ಟ್

ಒಂದನೇ ಪುಟದಿಂದ

‘22,050 ಡೋಸ್ ಚುಚ್ಚುಮದ್ದನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ಹಂಚಿಕೆ ಮಾಡಿದೆ. ಅದರಲ್ಲಿ 19,950 ಚುಚ್ಚುಮದ್ದನ್ನು ಪಡೆಯಲಾಗಿದೆ. ಪ್ರತಿ ರೋಗಿಗೆ 30 ಡೋಸ್ ಚುಚ್ಚುಮದ್ದು ಅಗತ್ಯವಿದೆ’ ಎಂದು ಸರ್ಕಾರ ವಿವರಿಸಿತು.

ಕೋವಿಡ್ ಕೇಂದ್ರ ಮುಚ್ಚಬಾರದು: ಕೋವಿಡ್ ಮೂರನೇ ಅಲೆಯ ಸಂಭವ ಇರುವ ಕಾರಣ ಬಿಬಿಎಂಪಿ ಕೋವಿಡ್ ಕೇಂದ್ರಗಳನ್ನು ಮುಚ್ಚಬಾರದು ಎಂದು ಪೀಠ ಸೂಚನೆ ನೀಡಿತು.

‘ಮೊದಲನೇ ಅಲೆಯ ಬಳಿಕ ಕೆಲ ಕೋವಿಡ್ ಕೇಂದ್ರಗಳನ್ನು ಮುಚ್ಚಿ ಎರಡನೇ ಅಲೆಯಲ್ಲಿ ಮತ್ತೆ ತೆರೆಯಬೇಕಾಯಿತು. ಈ ಬಾರಿ ಹಾಗೆ ಮಾಡದೆ ಕೋವಿಡ್ ಕೇಂದ್ರಗಳನ್ನು ಕಾಯ್ದಿರಿಸಿಕೊಳ್ಳಬೇಕು’ ಎಂದು ತಿಳಿಸಿತು.


**ನೈರುತ್ಯ ರೈಲ್ವೆ**

**Tender Notice No: 06 UBL 2021**
**Dated: 07.06.2021**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕಾಮಗಾರಿಯ ಹೆಸರು | ಅಂದಾಜು ವೆಚ್ಚ |
|---|---|
| ಹುಬ್ಬಳ್ಳಿ ನಿಲ್ದಾಣದಲ್ಲಿ ಯಾರ್ಡ್ ರಿವಾಡೆಲಿಂಗ್ ಮತ್ತು ದ್ವಿಪಥೀಕರಣಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಪ್ಲಾಟ್‌ಫಾರ್ಮ್ ಮತ್ತು ಹೊಸ ಮೂರನೇ ಪ್ರವೇಶದಲ್ಲಿ ಎಸ್‌ಎಸ್ ಒದಗಿಸುವುದು. | Rs.54,48,191/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06–07–2021, 11:00 ಗಂಟೆಯವರೆಗೆ

ಮಾಹಿತಿಗಾಗಿ www.ireps.gov.in ಗೆ ಲಾಗಾನ್ ಆಗಿ

ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯೂನಿಕೇಷನ್ ಇಂಜಿನೀಯರ್, ಹುಬ್ಬಳ್ಳಿ

PUB/67/AASP/PRB/SWR/2021-22

**SOBHA LIMITED**

CIN: L45201KA1995PLC018475

Registered & Corporate Office: ‘SOBHA’, Sarjapur – Marathahalli Outer Ring Road (ORR), Devarabisanahalli, Bellandur Post

**BANGALORE - 560 103**

Phone: 080-4932 0000

**NOTICE**

NOTICE pursuant to Regulation 29 and 47 of the SEBI (Listing Obligations and Disclosure Requirements) Regulations, 2015 is hereby given that, the proposal of approval of Audited Standalone and Consolidated Financial Results for the quarter and financial year ended 31st March, 2021 and recommendation of dividend if any, on the equity shares of the Company will be considered by the Board of Directors of the Company at the meeting scheduled to be held on Tuesday, June 22, 2021 instead of the originally scheduled meeting on Saturday, June 12, 2021.

Further details may be accessed from the website of the Company www.sobha.com or the website of Stock Exchanges where the securities of the Company are listed viz. www.nseindia.com or www.bseindia.com.

For Sobha Limited
Vighneshwar G Bhat
Company Secretary and Compliance Officer

Place: Bangalore
Date : June 10, 2021

“All the Investor Queries / Complaints / Grievances may be addressed to investors@sobha.com.”



**ಭಾವಪೂರ್ಣ ಶ್ರದ್ಧಾಂಜಲಿ**

**ಕೋಟೆ ಎನ್. ಜಿ. ಚಂದ್ರರೆಡ್ಡಿ**

ಕೋಟೆ ಎನ್.ಸಿ. ಗುರುಮೂರ್ತಿರೆಡ್ಡಿರವರ ಮಗ, ದೊಡ್ಡನೆಕ್ಕುಂದಿ, ಬೆಂಗಳೂರು-37

ಇವರು ದಿ: 10.06.2021 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಯನ್ನು ದಿ:11.06.2021 ಶುಕ್ರವಾರ ಮಧ್ಯಾಹ್ನ 1.00 ಗಂಟೆಗೆ ದೊಡ್ಡನೆಕ್ಕುಂದಿ ರುದ್ರಭೂಮಿಯಲ್ಲಿ ನಡೆಸಲಾಗುವುದು

ದುಃಖತಪ್ತರು: ಕುಟುಂಬವರ್ಗದವರು ಹಾಗೂ ಬಂಧು-ಮಿತ್ರರು


## ಬ್ಯಾಕ್‌ಲಾಗ್: ಶೀಘ್ರ ಸಂದರ್ಶನ?

**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಶೀಘ್ರವೇ ಸಂದರ್ಶನ ನಡೆಯಲಿದೆ. ಯಾವುದೇ ಹುದ್ದೆಗೆ ಅರ್ಹ ಅಭ್ಯರ್ಥಿಗಳು ಇಲ್ಲದಿದ್ದರೆ ಮಾತ್ರ ಮರುಅಧಿಸೂಚನೆ ಹೊರಡಿಸಲು ನಿರ್ಧರಿಸಲಾಗಿದೆ.

’ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸದ್ಯ 20 ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ. ಇವುಗಳ ಭರ್ತಿಗೆ ಅನುಸರಿಸಬೇಕಾದ ಕ್ರಮಗಳ ಕುರಿತು ಸಮಾಜ ಕಲ್ಯಾಣ ಇಲಾಖೆಗೆ ಪತ್ರ ಬರೆಯಲಾಗಿತ್ತು. ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳ ಈ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಹ ಅಭ್ಯರ್ಥಿಗಳಿದ್ದಲ್ಲಿ ಸಂದರ್ಶನ ನಡೆಸಿ ನೇಮಕ ಮಾಡಿಕೊಳ್ಳಿ. ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳು ಇರದಿದ್ದರೆ, ಆ ಹುದ್ದೆಗಳಿಗೆ ಮರು ಅಧಿಸೂಚನೆ ಹೊರಡಿಸಿ ಎಂದು ಇಲಾಖೆ ಸಲಹೆ ನೀಡಿದೆ’ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರಾದ (ಆಡಳಿತ) ಕೆ. ಜ್ಯೋತಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬ್ಯಾಕ್‌ಲಾಗ್ ಹುದ್ದೆಗಳ ವಿಶೇಷ ನೇಮಕಾತಿ ನಿಯಮಗಳ ಬಗ್ಗೆ ಕೆಲವು ಗೊಂದಲಗಳೂ ಇದ್ದವು. ಇಂಗ್ಲಿಷ್ ಪ್ರಾಧ್ಯಾಪಕ ಹುದ್ದೆಯ ನೇಮಕಾತಿಯ ವಿಷಯ ಕುರಿತು ಅಭ್ಯರ್ಥಿಯೊಬ್ಬರು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಈ ಹುದ್ದೆ ಬಿಟ್ಟು ಉಳಿದ ಹುದ್ದೆಗಳ ನೇಮಕಾತಿ ನಡೆಯಲಿದೆ’ ಎಂದರು.

**ಮೊದಲಿನಿಂದಲೂ ಗೊಂದಲ:** ಖಾಲಿ ಇರುವ 55 ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಸಮಾಜ ಕಲ್ಯಾಣ ಇಲಾಖೆ 2018ರ ಫೆ. 26ರಂದು ವಿಶ್ವವಿದ್ಯಾಲಯಕ್ಕೆ ಸೂಚಿಸಿತ್ತು. ಅದೇ ವರ್ಷ ಮಾರ್ಚ್ 21ರಂದು ಅಧಿಸೂಚನೆ ಹೊರಡಿಸಲಾಗಿತ್ತು. 35 ಹುದ್ದೆಗಳಿಗೆ 2019ರ ಜುಲೈ 25, ಡಿ. 27 ಮತ್ತು 2020ರ ಆಗಸ್ಟ್ 3ರಂದು ನೇಮಕಾತಿ ನಡೆಸಲಾಗಿತ್ತು.

# ಡ್ರಗ್ಸ್ ಮಾರಾಟ; ಐವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲಾಕ್‌ಡೌನ್ ಜಾರಿಯಲ್ಲಿರುವ ನಗರದಲ್ಲಿ ಅಗತ್ಯ ವಸ್ತುಗಳ ಖರೀದಿಗಾಗಿ ವಿನಾಯಿತಿ ನೀಡಿದ್ದ ಅವಧಿಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಪ್ರಕರಣದಲ್ಲಿ ಮತ್ತೆ ಐವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ನಗರದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ಕಾಡುಗೋಡಿ ಠಾಣೆ ವ್ಯಾಪ್ತಿಯ ಕನ್ನಮಂಗಲದಲ್ಲಿ ನೈಜೀರಿಯಾ ಪ್ರಜೆ ಸೇರಿ ಆರು ಮಂದಿಯನ್ನು ಇತ್ತೀಚೆಗಷ್ಟೇ ಬಂಧಿಸಲಾಗಿತ್ತು. ಈಗ ಅದೇ ಜಾಲದ ಐವರು ಆರೋಪಿಗಳನ್ನು ಸೆರೆಹಿಡಿಯಲಾಗಿದೆ’ ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಬಯಾನ್ ಅನ್ಸಾರಿ (26), ಅರ್ನಾಲ್ಡ್ ಪಸ್ಕಲ್ ಡಿಸೋಜ (27), ಅನಿರುದ್ಧ ವೆಂಕಟಾಚಲಂ (23), ಕನಿಷ್ಕ್ ರೆಡ್ಡಿ (23) ಹಾಗೂ ಕೆ. ಸಂತೋಷ್ (28) ಬಂಧಿತರು. ಅವರಿಂದ ₹ 30 ಲಕ್ಷ ಮೌಲ್ಯದ ಡ್ರಗ್ಸ್ (ಎಂಡಿಎಂಎ, ಎಕ್ಸ್‌ಟೆಸಿ ಮಾತ್ರೆಗಳು, ಎಲ್‌ಎಸ್‌ಡಿ ಕಾಗದ ಚೂರು) ಜಪ್ತಿ ಮಾಡಲಾಗಿದೆ’ ಎಂದೂ ಅವರು ತಿಳಿಸಿದರು.

ಡಾರ್ಕ್ ವೆಬ್ ಮೂಲಕ ಖರೀದಿ; ‘ತಂತ್ರಜ್ಞಾನ ಬಳಕೆಯಲ್ಲಿ ಪರಿಣಿತರಾಗಿದ್ದ ಆರೋಪಿಗಳು, ಡಾರ್ಕ್ ವೆಬ್ ಹಾಗೂ ಆ್ಯಪ್‌ಗಳ ಮೂಲಕ ಅಂತರರಾಷ್ಟ್ರೀಯ ಪೆಡ್ಲರ್‌ಗಳನ್ನು ಸಂಪರ್ಕಿಸಿ ಡ್ರಗ್ಸ್ ಖರೀದಿಸುತ್ತಿದ್ದರು. ಇದಕ್ಕಾಗಿ ಬಿಟ್ ಕಾಯಿನ್ ಬಳಸುತ್ತಿದ್ದರು’ ಎಂದೂ ಅಧಿಕಾರಿ ಹೇಳಿದರು.

‘ಲಾಕ್‌ಡೌನ್ ಇರುವುದರಿಂದ ನಿತ್ಯವೂ ಬೆಳಿಗ್ಗೆ 6ರಿಂದ 10 ಗಂಟೆವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗಿದೆ. ಇದೇ ಅವಧಿಯಲ್ಲಿ ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಡ್ರಗ್ಸ್ ಮಾರುತ್ತಿದ್ದರು’ ಎಂದೂ ತಿಳಿಸಿದರು.

### ಅಪರಾಧ ಸುದ್ದಿ

### ಮಕ್ಕಳ ಮೇಲೆ ಹಲ್ಲೆ: ಇಬ್ಬರ ಬಂಧನ

**ಬೆಂಗಳೂರು:** ಮನೆಯ ವಿಷಯಗಳನ್ನು ತಂದೆಗೆ ಹೇಳಿದರೆಂಬ ಕಾರಣಕ್ಕೆ ಮಕ್ಕಳಿಬ್ಬರ ಮೇಲೆ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ತಾಯಿ ಸೇರಿ ಇಬ್ಬರನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಯಮ್ಮ (25) ಹಾಗೂ ಹೇಮಂತ್ (27) ಬಂಧಿತರು.

‘ಆಸ್ಪತ್ರೆಯೊಂದರಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದ ಜಯಮ್ಮ, ಇಬ್ಬರು ಮಕ್ಕಳ ಜೊತೆ ವಾಸವಿದ್ದರು. ಅವರ ಪತಿ ಅಪರಾಧ ಪ್ರಕರಣವೊಂದರಲ್ಲಿ ಹಾಸನ ಜೈಲಿನಲ್ಲಿದ್ದಾರೆ. ಹೀಗಾಗಿ, ಮೂವರೇ ಮನೆಯಲ್ಲಿದ್ದರು’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

### ವ್ಹೀಲಿಂಗ್ ಮಾಡಲು ವಾಹನ ಕಳವು

**ಬೆಂಗಳೂರು:** ವ್ಹೀಲಿಂಗ್ ಮಾಡಲೆಂದು ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ತಿಲಕನಗರ ಪೊಲೀಸರು ಬಂಧಿಸಿದ್ದಾರೆ. ‘ಗುರಪ್ಪನಪಾಳ್ಯ ನಿವಾಸಿ ಅರ್ಬಾನ್ ಖಾನ್ ಅಲಿಯಾಸ್ ಶಕ್ತಿಮಾನ್ ಹಾಗೂ ಮೊಹಮ್ಮದ್ ಅನೀಸ್ ಬಂಧಿತರು. ಅವರಿಂದ ₹ 8 ಲಕ್ಷ ಮೌಲ್ಯದ 13 ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.


ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

**REAL ESTATE SELLING**

**Industrial & Factory**

**Jigani**

SALE 5.5 acres Industrial land with 2,75,000 sqft building. Ready to occupy in Jigani industrial area Contact 9900083763

**Flat**

**Vijayanagar**

**1500 SQFT** 3 BHK flats, Chickpet Society Layout behind RNS school, 1.25 crores. 9901759955/ 9035288117.

**JOB OPPORTUNITIES**

**Multiple Vacancy**

**OPPORTUNITY FOR** Retd Officials, Bankers, VRS,NRI, Teachers, Professionals, CAs. Earn Salary +Incentives. CT: 8095301555

**Part-Time Jobs**

**PANDEMIC SITUATION** lost job. will provide work from home earn Rs. 35K- 40K Call: 7019215243/ 9886641282

**General**

CAREER OPPORTUNITY for Unemployed Techies, Teachers, Retired Bankers, Homemakers on Fixed Income with Huge Incentives. Dial:9341838235

"LIVE-IN PARTNER" for Senior Citizen J.P.Nagar 1st Phase Independent Girl belw 40years without Encumbrance on Montly salary basis. Contact: 8088174438

**PERSONAL**

**Change of Name**

**MAMTA DEVI** W/o JC674147H- NK/Sub-DEVARAJ PANDEY R/a Devara Thana Kondhiyara, Karchhana, Prayagraj, Uttar Pradesh changed name from MAMTA DEVI to MAMTA PANDEY notary KV Mani Bangalore.

**I, SMT.** Anitha Jaganathan, residing at No. 11, 1st Main, 5th Cross, Mallathalli Post, Bangalore-560056 have changed my son name from 'PRUTHVI.K' to 'PRUTHVI SWAMINATHAN.K' Vide affidavit dated 10-06-2021 sworn before notary, B.A. Lakshminarayana Rao, Bangalore.

**CAUTION NOTICE**

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

DH Classifieds

BOOK YOUR AD FOR SUNDAY & GET 50% OFF ON WEEKDAYS

For Lineage & Single/ Multi Column Classifieds Display ads

For more information contact: 9880856233 /9845114560 9886213331


## ಸಂಕ್ಷಿಪ್ತ ಸುದ್ದಿ

### 13ರಂದು ವೆಬಿನಾರ್

**ಬೆಂಗಳೂರು:** ಮಾತಾ ಅಮೃತಾನಂದಮಯಿ ಮಠದ ಯುವ ಘಟಕವಾಗಿರುವ ಆಯುಧ್, ಇದೇ 13 ರಂದು ಬೆಂಗಳೂರಿನಲ್ಲಿ ವೆಬಿನಾರ್ ಹಮ್ಮಿಕೊಂಡಿದೆ.

ಅಮೃತ ಕ್ಲಿನಿಕ್ ಮತ್ತು ಮದರ್‌ಹುಡ್ ಆಸ್ಪತ್ರೆಯ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞೆ ಡಾ.ಗೌರಿ ‘ಗರ್ಭಿಣಿಯರಾದಾಗ ಹಾಗೂ ಸ್ತನ್ಯಪಾನ ಮಾಡಿಸುವ ಕಾಲದಲ್ಲಿ ಕೋವಿಡ್ 19 ತಡೆಗಟ್ಟುವಿಕೆ ಮತ್ತು ನಿರ್ವಹಣೆ’ ಕುರಿತು ಮಾತನಾಡಲಿದ್ದಾರೆ.

ಈ ಕಾರ್ಯಕ್ರಮವು ಯೂಟ್ಯೂಬ್‌ನಲ್ಲಿ ನೇರ ಪ್ರಸಾರವಾಗಲಿದ್ದು, ವೀಕ್ಷಕರು ಕನ್ನಡ, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಶ್ನೆಗಳನ್ನು ಕೇಳಬಹುದು. ಕಾರ್ಯಕ್ರಮ ವೀಕ್ಷಿಸಲು http://bit.ly/pregnancycovid1 ಯೂಟ್ಯೂಬ್ ಲಿಂಕ್ ಬಳಸಬಹುದು.

### ಅಸಂಘಟಿತ ಕಾರ್ಮಿಕರು: ನೆರವಿಗೆ ಅರ್ಜಿ

**ಬೆಂಗಳೂರು:** ‘ಸರ್ಕಾರ ಘೋಷಿಸಿರುವ ₹ 2 ಸಾವಿರ ಆರ್ಥಿಕ ನೆರವಿಗೆ ಅರ್ಹ ಅಸಂಘಟಿತ ಕಾರ್ಮಿಕರು ಜು.31ರೊಳಗೆ ಅರ್ಜಿ ಸಲ್ಲಿಸಬೇಕು’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಮನವಿ ಮಾಡಿದ್ದಾರೆ.

‘ಅಗಸರು, ಕ್ಷೌರಿಕರು, ಗೃಹ ಕಾರ್ಮಿಕರು, ಟೈಲರ್‌ಗಳು, ಮೆಕ್ಯಾನಿಕ್, ಚಿಂದಿ ಆಯುವವರು, ಹಮಾಲರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಸೇರಿದಂತೆ ಒಟ್ಟು 11 ವರ್ಗಗಳಲ್ಲಿ ಗುರುತಿಸಲಾದ 3.30 ಲಕ್ಷ ಕಾರ್ಮಿಕರಿಗೆ ಆರ್ಥಿಕ ನೆರವು ದೊರೆಯಲಿದೆ. ಪರಿಹಾರ ಪಡೆಯ ಬಯಸುವವರು 18ರಿಂದ 65 ವರ್ಷ ಒಳಗಿನವರಾಗಿರಬೇಕು. ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಪರಿಹಾರ ನೀಡಲಾಗುತ್ತದೆ. ವಲಸೆ ಕಾರ್ಮಿಕರು ಸಹ ಪರಿಹಾರಕ್ಕೆ ಅರ್ಹರು’ ಎಂದು ತಿಳಿಸಿದ್ದಾರೆ.

‘ಅರ್ಹ ಫಲಾನುಭವಿಗಳು ಸೇವಾಸಿಂಧು ಪೋರ್ಟಲ್ (sevasindhu.karnataka.gov.in) ಮೂಲಕ ಅರ್ಜಿ ಸಲ್ಲಿಸಬೇಕು’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

### ದೇಗುಲಮಠ: ಉಚಿತ ಶಿಕ್ಷಣಕ್ಕೆ ಪ್ರವೇಶ

**ಬೆಂಗಳೂರು:** ಕನಕಪುರದಲ್ಲಿರುವ ಶ್ರೀ ದೇಗುಲ ಮಠವು 1 ರಿಂದ 10ನೇ ತರಗತಿವರೆಗಿನ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಸತಿ ಮತ್ತು ದಾಸೋಹ ವ್ಯವಸ್ಥೆ ಕಲ್ಪಿಸಿದೆ.

2020-21ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆ ಹಾಗೂ ವಿದ್ಯಾರ್ಥಿ ನಿಲಯಕ್ಕೆ ಉಚಿತ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದ್ದು ಆಸಕ್ತರು ಹೆಸರು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ 9663689989 ಅಥವಾ 9902607206.

## 46,448 ವಾಹನ ಜಪ್ತಿ

**ಬೆಂಗಳೂರು:** ನಗರದಲ್ಲಿ ಲಾಕ್‌ಡೌನ್ ವೇಳೆ ನಿಯಮ ಉಲ್ಲಂಘಿಸಿದ್ದಕ್ಕಾಗಿ ಇದುವರೆಗೆ 46,448 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

‘ಪ್ರತಿಯೊಂದು ರಸ್ತೆಯಲ್ಲಿ ಚೆಕ್‌ಪೋಸ್ಟ್ ನಿರ್ಮಿಸಲಾಗಿದ್ದು, ಸಿಬ್ಬಂದಿ ವಾಹನಗಳ ತಪಾಸಣೆ ಮಾಡುತ್ತಿದ್ದಾರೆ. ಇದುವರೆಗೂ 41,376 ದ್ವಿಚಕ್ರ ವಾಹನ, 2,264 ಮೂರು ಚಕ್ರ ವಾಹನ ಹಾಗೂ 2,808 ನಾಲ್ಕು ಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

‘ದಂಡ ಕಟ್ಟಿಸಿಕೊಂಡು ಕೆಲ ವಾಹನಗಳನ್ನು ಬಿಡುಗಡೆ ಮಾಡಲಾಗಿದೆ. ಬಹುತೇಕ ವಾಹನಗಳನ್ನು ಆಯಾ ಠಾಣೆ ವ್ಯಾಪ್ತಿಯಲ್ಲೇ ನಿಲ್ಲಿಸಲಾಗಿದ್ದು, ನ್ಯಾಯಾಲಯದ ಮೂಲಕವೇ ಅವುಗಳನ್ನು ಬಿಡಿಸಿಕೊಳ್ಳಬೇಕು. ವಾಹನ ಬಿಡುಗಡೆ ಸಂಬಂಧ ಹೈಕೋರ್ಟ್ ಕೆಲ ನಿರ್ದೇಶನಗಳನ್ನು ನೀಡಿದ್ದು, ಅವುಗಳನ್ನು ಪಾಲಿಸಲಾಗುವುದು’ ಎಂದೂ ತಿಳಿಸಿದರು.

**₹ 4.37 ಕೋಟಿ ದಂಡ:** ‘ಅಂತರ ಪಾಲಿಸದ ಹಾಗೂ ಮಾಸ್ಕ್ ಹಾಕಿಕೊಳ್ಳದವರ ವಿರುದ್ಧ 1.79 ಲಕ್ಷ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರಿಂದ ₹ 4.37 ಕೋಟಿ ದಂಡ ಸಂಗ್ರಹಿಸಲಾಗಿದೆ’ ಎಂದು ಅಧಿಕಾರಿ ಮಾಹಿತಿ ನೀಡಿದರು.

**1,754 ಪೊಲೀಸರಿಗೆ ಸೋಂಕು:** ‘ನಗರ ಕಮಿಷನರೇಟ್ ವ್ಯಾಪ್ತಿಯ 1,754 ಪೊಲೀಸರಿಗೆ ಎರಡನೇ ಅಲೆಯಲ್ಲಿ ಕೊರೊನಾ ಸೋಂಕು ತಗುಲಿದೆ. ಅದರಲ್ಲಿ 16 ಮಂದಿ ಮೃತಪಟ್ಟಿದ್ದಾರೆ. 1,554 ಪೊಲೀಸರು ಗುಣಮುಖವಾಗಿದ್ದು, ಸದ್ಯ 184 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದೂ ಅಧಿಕಾರಿ ತಿಳಿಸಿದರು.

## ‘1ಎಂಜಿ’ ಖರೀದಿಸಲಿರುವ ಟಾಟಾ

**ನವದೆಹಲಿ (ಪಿಟಿಐ):** ಟಾಟಾ ಸನ್ಸ್‌ನ ಅಂಗಸಂಸ್ಥೆಯಾಗಿರುವ ಟಾಟಾ ಡಿಜಿಟಲ್ ಲಿಮಿಟೆಡ್ ಕಂಪನಿಯು ‘1ಎಂಜಿ ಟೆಕ್ನಾಲಜೀಸ್ ಲಿಮಿಟೆಡ್’ ಕಂಪನಿಯಲ್ಲಿನ ಬಹುಪಾಲು ಷೇರುಗಳನ್ನು ಖರೀದಿಸುವುದಾಗಿ ಹೇಳಿದೆ. ‘1ಎಂಜಿ’ ಕಂಪನಿಯು ಆರೋಗ್ಯಸೇವಾ ಪರಿಕರಗಳನ್ನು ಆನ್‌ಲೈನ್ ಮೂಲಕ ಮಾರಾಟ ಮಾಡುತ್ತದೆ. ಖರೀದಿಯ ಮೊತ್ತ ಎಷ್ಟು ಎಂಬುದನ್ನು ಟಾಟಾ ಬಹಿರಂಗಪಡಿಸಿಲ್ಲ. ಕ್ಯೂರ್‌ಫಿಟ್ ಹೆಲ್ತ್‌ಕೇರ್ ಕಂಪನಿಯಲ್ಲಿ ₹ 550 ಕೋಟಿ ಹೂಡಿಕೆ ಮಾಡುವುದಾಗಿ ಟಾಟಾ ಡಿಜಿಟಲ್ ಕೆಲವು ದಿನಗಳ ಹಿಂದೆ ಹೇಳಿತ್ತು.

## ಎಟಿಎಂ ಶುಲ್ಕ ಹೆಚ್ಚಿಸಲು ಸಮ್ಮತಿ

**ಮುಂಬೈ (ಪಿಟಿಐ):** ಎಟಿಎಂ ಮೂಲಕ ನಗದು ಪಡೆಯುವುದು ಹಾಗೂ ಇತರ ಸೇವೆಗಳಿಗೆ ವಿಧಿಸುವ ಶುಲ್ಕವನ್ನು ಹೆಚ್ಚಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬ್ಯಾಂಕ್‌ಗಳಿಗೆ ಅನುಮತಿ ನೀಡಿದೆ. ಪ್ರತಿ ತಿಂಗಳು ನಿರ್ದಿಷ್ಟ ಸಂಖ್ಯೆಗಿಂತ ಹೆಚ್ಚು ಬಾರಿ ಎಟಿಎಂನಿಂದ ಹಣ ಪಡೆದರೆ ಅಥವಾ ಇತರ ಸೇವೆಗಳನ್ನು ಪಡೆದರೆ ಶುಲ್ಕ ವಿಧಿಸಲಾಗುತ್ತದೆ.

2022ರ ಜನವರಿ 1ರಿಂದ ಶುಲ್ಕ ಹೆಚ್ಚಿಸಲು ಆರ್‌ಬಿಐ ಒಪ್ಪಿಗೆ ಸೂಚಿಸಿದೆ. ತಿಂಗಳ ಉಚಿತ ವಹಿವಾಟಿನ ನಂತರ ಪ್ರತಿ ವಹಿವಾಟಿಗೆ ₹ 21 ಶುಲ್ಕ ವಿಧಿಸಲು ಬ್ಯಾಂಕ್‌ಗಳಿಗೆ ಅವಕಾಶ ದೊರೆತಿದೆ. ಈಗ ₹ 20 ಶುಲ್ಕ ವಿಧಿಸಲಾಗುತ್ತಿದೆ.

‘ಬ್ಯಾಂಕ್‌ಗಳ ವೆಚ್ಚಗಳು ಹೆಚ್ಚಾಗಿರುವ ಕಾರಣ, ಡೆಬಿಟ್ ಕಾರ್ಡ್ ನೀಡಿರುವ ಬ್ಯಾಂಕ್‌ನಿಂದ ಎಟಿಎಂ ನಿರ್ವಹಿಸುವ ಬ್ಯಾಂಕ್‌ಗೆ ನೀಡಬೇಕಿರುವ ಶುಲ್ಕ ಕೂಡ ಜಾಸ್ತಿ ಇರುವುದರಿಂದ ಗ್ರಾಹಕರಿಂದ ಪಡೆಯುವ ಸೇವಾ ಶುಲ್ಕ ಹೆಚ್ಚಿಸಲು ಅನುಮತಿ ನೀಡಲಾಗಿದೆ’ ಎಂದು ಆರ್‌ಬಿಐ ಹೇಳಿದೆ.

ಗ್ರಾಹಕರು ತಮ್ಮ ಖಾತೆ ಇರುವ ಬ್ಯಾಂಕ್‌ನ ಎಟಿಎಂ ಮೂಲಕ ತಿಂಗಳಿಗೆ ಐದು ಉಚಿತ ವಹಿವಾಟು, ಬೇರೆ ಬ್ಯಾಂಕ್ ಎಟಿಎಂ ಮೂಲಕ ತಿಂಗಳಿಗೆ ಮೂರು ಉಚಿತ ವಹಿವಾಟು ನಡೆಸಲು ಈಗಿನಂತೆಯೇ ಅವಕಾಶ ಇರಲಿದೆ.

### ಕೋವಿಡ್: ಪ್ರಕರಣಗಳ ಸಂಖ್ಯೆ ಗಣನೀಯ ಕಡಿಮೆ– ಹಾಸಿಗೆಗಳನ್ನು ಆಸ್ಪತ್ರೆಗಳಿಗೆ ಬಿಟ್ಟುಕೊಡಲು ಬಿಬಿಎಂಪಿ ನಿರ್ಧಾರ

# ಶೇ 20ರಷ್ಟು ಹಾಸಿಗೆ ಮಾತ್ರ ಸರ್ಕಾರಿ ಕೋಟಾಕ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಕಡಿಮೆ ಆಗಿರುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಸರ್ಕಾರಿ ಕೋಟಾದಡಿ ಗೊತ್ತುಪಡಿಸಲಾದ ಹಾಸಿಗೆಗಳನ್ನು ಬಿಟ್ಟುಕೊಡಲು ಬಿಬಿಎಂಪಿ ನಿರ್ಧರಿಸಿದೆ.

ಇದುವರೆಗೆ ಚಾಲ್ತಿಯಲ್ಲಿದ್ದ ನಿಯಮದ ಪ್ರಕಾರ ಎಲ್ಲ ಖಾಸಗಿ ಆಸ್ಪತ್ರೆಗಳು ಶೇ 50ರಷ್ಟು ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳು ಶೇ 75ರಷ್ಟು ಹಾಸಿಗೆಗಳನ್ನು ಸರ್ಕಾರಿ ಕೋಟಾದಡಿ ಚಿಕಿತ್ಸೆಗೆ ಮೀಸಲಿಡಬೇಕಿತ್ತು.

‘ಇನ್ನು ಸಾಮಾನ್ಯ ಹಾಸಿಗೆಗಳಲ್ಲಿ ಶೇ 20ರಷ್ಟನ್ನು ಮಾತ್ರ ಸರ್ಕಾರಿ ಕೋಟಾದಡಿ ಉಳಿಸಿಕೊಂಡು ಉಳಿದವನ್ನು ಆಸ್ಪತ್ರೆಯವರಿಗೆ ಬಿಟ್ಟುಕೊಡಲಿದ್ದೇವೆ. ತೀವ್ರ ನಿಗಾ ಘಟಕಗಳಲ್ಲೂ ಈಗ ಸಾಕಷ್ಟು ಹಾಸಿಗೆಗಳು ಲಭ್ಯ ಇವೆ. ಅವುಗಳೆಲ್ಲವೂ ಈಗ ನಮಗೆ ಅಗತ್ಯ ಇಲ್ಲ. ಅವುಗಳಲ್ಲೂ ಸ್ವಲ್ಪ ಪ್ರಮಾಣದ ಹಾಸಿಗೆಗಳನ್ನು ಆಸ್ಪತ್ರೆಯವರಿಗೆ ಮರಳಿಸಬಹುದು. ಯಾವೆಲ್ಲ ಹಾಸಿಗೆಗಳನ್ನು ಉಳಿಸಿಕೊಳ್ಳಬೇಕು ಎಂಬ ಬಗ್ಗೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಜೊತೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುತ್ತೇವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಸುದ್ದಿಗಾರರಿಗೆ ತಿಳಿಸಿದರು.

‘ಕೋವಿಡ್ ಎರಡನೇ ಅಲೆ ಎದುರಿಸಲು ವ್ಯವಸ್ಥೆ ಮಾಡಿರುವ ಆರೋಗ್ಯ ಮೂಲಸೌಕರ್ಯಗಳನ್ನು ಮುಂದುವರಿಸುತ್ತೇವೆ. 3ನೇ ಅಲೆ ಎದುರಾದರೆ ಅವುಗಳ ಅಗತ್ಯ ಬೀಳಲಿದೆ. ಅಗತ್ಯ ಬಿದ್ದರೆ ಇನ್ನಷ್ಟು ಆರೋಗ್ಯ ಮೂಲಸೌಕರ್ಯವನ್ನು ಸೇರ್ಪಡೆಗೊಳಿಸುತ್ತೇವೆ’ ಎಂದರು.

## ಸಾವಿನ ಸಂಖ್ಯೆ ಇಳಿಕೆ

ಮೂರು ದಿನಗಳಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆಯೂ ಗಣನೀಯ ಇಳಿಕೆ ಕಂಡಿದೆ. ಕಳೆದ ವಾರದವರೆಗೂ ದಿನಕ್ಕೆ 200ಕ್ಕೂ ಅಧಿಕ ಮಂದಿ ಕೊರೊನಾದಿಂದ ಸಾವಿಗೀಡಾಗುತ್ತಿದ್ದರು. ಕೋವಿಡ್ ಸಾವಿನ ದರ ಶೇ 7.89ರವರೆಗೂ ಏರಿಕೆ ಕಂಡಿತ್ತು. ಮೂರು ದಿನಗಳಿಂದ ಕೋವಿಡ್‌ನಿಂದ ಸತ್ತವರ ಸಂಖ್ಯೆ 50 ದಾಟಿಲ್ಲ. ಸಾವಿನ ದರವೂ ಶೇ 5.38ಕ್ಕೆ ಇಳಿಕೆ ಕಂಡಿದೆ.

‘ನಗರದಲ್ಲಿ ಕೋವಿಡ್‌ನಿಂದ ಸಾಯುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಹಾಗಾಗಿ, ತೆರೆದ ಪ್ರದೇಶಗಳಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸ್ಥಾಪಿಸಿರುವ ಸ್ಮಶಾನಗಳನ್ನು ಸ್ಥಗಿತಗೊಳಿಸಿದ್ದೇವೆ. ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆ ಚಿತಾಗಾರಗಳಲ್ಲಿ ಮುಂದುವರಿಯಲಿವೆ’ ಎಂದು ಗೌರವ್ ಗುಪ್ತ ತಿಳಿಸಿದರು.

### ಅಂಕಿ–ಅಂಶ

**13,458**
ಕೋವಿಡ್ ರೋಗಿಗಳ ಉಚಿತ ಚಿಕಿತ್ಸೆಗೆ ನಗರದ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದಡಿ ಮೀಸಲಿಟ್ಟ ಹಾಸಿಗೆಗಳು

**2,650**
ಚಿಕಿತ್ಸೆಗೆ ಬಳಕೆಯಾಗುತ್ತಿರುವ ಹಾಸಿಗೆಗಳು

## 500ರ ಗಡಿಯೊಳಗೆ 24 ಜಿಲ್ಲೆಗಳು

**ಬೆಂಗಳೂರು:** ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 11,042 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಲ್ಲಿ 24 ಜಿಲ್ಲೆಗಳಲ್ಲಿ 500ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿವೆ.

ಕಳೆದ ಕೆಲ ದಿನಗಳಿಂದ ಸೋಂಕು ದೃಢ ಪ್ರಮಾಣವು ಇಳಿಮುಖದ ಹಾದಿ ಹಿಡಿದಿದ್ದು, ಗುರುವಾರ ಶೇ 6.58ಕ್ಕೆ ತಗ್ಗಿದೆ. ಜೂನ್‌ನ 10 ದಿನಗಳಲ್ಲಿ 1,34,859 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಕಳೆದ ತಿಂಗಳು ಕಡೆಯ 10 ದಿನಗಳಲ್ಲಿ 2,50,993 ಮಂದಿ ಕೋವಿಡ್ ಪೀಡಿತರಾಗಿದ್ದರು. ಎರಡು ವಾರಗಳಿಂದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 27.39 ಲಕ್ಷ ದಾಟಿದೆ.

ಬೆಂಗಳೂರಿನಲ್ಲಿ 24 ಗಂಟೆಗಳ ಅವಧಿಯಲ್ಲಿ 2,191 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 1,011 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಸಾವಿರಕ್ಕಿಂತ ಕಡಿಮೆ ವರದಿಯಾಗಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 2.10 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 15,721 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 25 ಲಕ್ಷದತ್ತ (24.96 ಲಕ್ಷ) ದಾಪುಗಾಲು ಇರಿಸಿದೆ.

**ಮರಣ ಪ್ರಕರಣ ವರದಿ ವಿಳಂಬ:** ಕೊರೊನಾ ಸೋಂಕಿತರಲ್ಲಿ 194 ಮಂದಿ ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಮರಣ ಪ್ರಮಾಣ ದರ ಶೇ 1.75 ರಷ್ಟು ವರದಿಯಾಗಿದೆ. ಕೆಲ ಪ್ರಕರಣಗಳಲ್ಲಿ ವ್ಯಕ್ತಿ ಮೃತಪಟ್ಟ ಹಲವು ದಿನಗಳ ಬಳಿಕ ಕೋವಿಡ್ ಮರಣ ಎಂದು ದೃಢಪಡುತ್ತಿದೆ. ಮೇ 19, ಮೇ 20ಕ್ಕೆ ಮೃತಪಟ್ಟವರ ವಿವರವನ್ನು ಕೂಡ ಆರೋಗ್ಯ ಇಲಾಖೆಯು ಗುರುವಾರ ದೃಢಪಟ್ಟ ಮರಣ ಪ್ರಕರಣಗಳ ಪಟ್ಟಿಯಲ್ಲಿ ಸೇರಿಸಿದೆ. ಇದೇ ರೀತಿ, ಕೆಲ ದಿನಗಳಿಂದ ಬಹುತೇಕ ಪ್ರಕರಣಗಳಲ್ಲಿ 2 ದಿನಗಳಿಂದ ಒಂದು ತಿಂಗಳವರೆಗಿನ ಅಂತರ ಕೂಡ ಕಾಣಿಸಿಕೊಳ್ಳುತ್ತಿದೆ.

ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 32,485ಕ್ಕೆ ಏರಿಕೆಯಾಗಿದೆ. ರಾಜ್ಯದ 29 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 47 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 18 ಮಂದಿ, ಬೆಳಗಾವಿಯಲ್ಲಿ 12 ಮಂದಿ, ಹಾಸನದಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ.

## ಪ್ರಜಾವಾಣಿ
### ಓದುಗರಲ್ಲಿ ಮನವಿ

ಕೋವಿಡ್ ಸಂಕಷ್ಟದ ನಡುವೆಯೂ ಮಳೆ, ಗಾಳಿ, ಚಳಿಯ ಪರಿವಿಲ್ಲದೆ ಪ್ರತಿದಿನ ಓದುಗರು ನಿದ್ದೆಯಿಂದ ಎದ್ದೇಳುವ ಮುಂಚೆಯೇ ಅವರ ಮನೆ ಬಾಗಿಲಿಗೆ ‘ಪ್ರಜಾವಾಣಿ’ ಪತ್ರಿಕೆಯನ್ನು ಮುಟ್ಟಿಸುವ ಕೆಲಸವನ್ನು ವಿತರಕರು ಮಾಡುತ್ತಿದ್ದಾರೆ. ಪ್ರಸ್ತುತ ಹಲವೆಡೆ ಲಾಕ್‌ಡೌನ್, ನಿರ್ಬಂಧ ಜಾರಿಯಲ್ಲಿರುವ ಪರಿಣಾಮ ಪತ್ರಿಕೆಯ ತಿಂಗಳ ಬಿಲ್ ಕಲೆಕ್ಷನ್ ಕಷ್ಟಕರವಾಗಿದೆ. ಹಾಗಾಗಿ, ಓದುಗರೇ ವಿತರಕರನ್ನು ನೇರವಾಗಿ ಸಂಪರ್ಕಿಸಿ ಡಿಜಿಟಲ್ ಪೇಮೆಂಟ್ ಮೂಲಕ ಹಣ ಪಾವತಿಸಲು ಮನವಿ.

## ಚಾಮರಾಜನಗರ: ಆಯೋಗದ ವರದಿ ಪಡೆದು ಪರಿಹಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಚಾಮರಾಜನಗರದ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಮೃತಪಟ್ಟ ಕುಟುಂಬಗಳಿಗೆ ಪರಿಹಾರ ನೀಡುವ ಸಂಬಂಧ ವಿಚಾರಣಾ ಆಯೋಗದ ವರದಿ ಪಡೆದು ಮುಂದುವರಿಯಲಾಗುವುದು’ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

‘ರಾಜ್ಯ ಸರ್ಕಾರ ನೇಮಿಸಿದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ ಅವರ ಏಕಸದಸ್ಯ ಆಯೋಗ ವಿಚಾರಣೆ ನಡೆಸುತ್ತಿದೆ. ಸತ್ಯಾಂಶ ಹೊರಬಿದ್ದ ನಂತರ ಕ್ರಮ ಕೈಗೊಳ್ಳಲಾಗುವುದು’ ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವಡಗಿ ತಿಳಿಸಿದರು.

‘ಕಾನೂನು ಸೇವೆಗಳ ಪ್ರಾಧಿಕಾರದ ಸಮಿತಿ ನೀಡಿದ್ದ ವರದಿಯಲ್ಲಿ ಕೆಲ ಲೋಪಗಳಿವೆ. ಆದರೂ, ಪೀಠದ ಅಭಿಪ್ರಾಯ ಮತ್ತು ಮಾನವೀಯ ನೆಲೆಯಲ್ಲಿ ₹2 ಲಕ್ಷ ಮಧ್ಯಂತರ ಪರಿಹಾರ ಘೋಷಿಸಿತು’ ಎಂದು ಅವರು ಪ್ರತಿಪಾದಿಸಿದರು.

‘ಸಮಿತಿಯ ತನಿಖೆ ಬಗ್ಗೆ ಆಕ್ಷೇಪ ಇದ್ದರೆ ತಿಳಿಸಬಹುದು’ ಎಂದು ಮುಖ್ಯನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಸರ್ಕಾರಕ್ಕೆ ತಿಳಿಸಿತು. ಸರ್ಕಾರ ರಚಿಸಿರುವ ವಿಚಾರಣಾ ಆಯೋಗದ ವರದಿ ಬಂದ ಬಳಿಕವೇ ಪೀಠದ ಮುಂದೆ ರಾಜ್ಯದ ಸರ್ಕಾರದ ನಿಲುವನ್ನು ತಿಳಿಸುವುದಾಗಿ ಅಡ್ವೊಕೇಟ್ ಜನರಲ್ ಹೇಳಿದರು.

ಪೀಠವು ಈ ವಿಚಾರಣೆಯನ್ನು ಜೂ.17ಕ್ಕೆ ಮುಂದೂಡಿತು.

### ನೂತನ ವ್ಯವಸ್ಥೆಗೆ ಚಾಲನೆ ನೀಡಿದ ಸಚಿವ ಅರವಿಂದ ಲಿಂಬಾವಳಿ

# ಹಾಸಿಗೆ ಕಾಯ್ದಿರಿಸಲು ಸರದಿ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಆಸ್ಪತ್ರೆಗಳಲ್ಲಿ ಹಾಸಿಗೆ ಹಂಚಿಕೆಯ ಕೇಂದ್ರೀಕೃತ ವ್ಯವಸ್ಥೆ (ಸಿಎಚ್‌ಬಿಎಂಎಸ್) ತಂತ್ರಾಂಶದ ಮೂಲಕ ಬಿಬಿಎಂಪಿ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಸರ್ಕಾರಿ ಕೋಟಾದ ಹಾಸಿಗೆಯನ್ನು ಸರದಿ ಆಧಾರದಲ್ಲಿ ಕಾಯ್ದಿರಿಸುವ ಪದ್ಧತಿ ಗುರುವಾರದಿಂದ ಜಾರಿಗೆ ಬಂದಿದೆ.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಾರ್ ರೂಂ, ಕಾಲ್ ಸೆಂಟರ್ ನಿರ್ವಹಣೆ ಮತ್ತು ಸೋಂಕಿತರಿಗೆ ವೈದ್ಯಕೀಯ ಸಲಹೆ ವ್ಯವಸ್ಥೆ ಮೇಲ್ವಿಚಾರಣೆಯ ನೋಡಲ್ ಸಚಿವ ಅರವಿಂದ ಲಿಂಬಾವಳಿ ಅವರು ನೂತನ ವ್ಯವಸ್ಥೆಯನ್ನು ಲೋಕಾರ್ಪಣೆ ಮಾಡಿದರು.

‘ಸಿಎಚ್‌ಬಿಎಂಎಸ್ ತಂತ್ರಾಂಶದಡಿ ಸರದಿ ವ್ಯವಸ್ಥೆಯನ್ನು ಸದ್ಯ ಬಿಬಿಎಂಪಿ ವ್ಯಾಪ್ತಿಯಲ್ಲಿ ಮಾತ್ರ ಜಾರಿಗೆ ತರಲಾಗಿದೆ. ಕ್ರಮೇಣ ಇಡೀ ರಾಜ್ಯಕ್ಕೆ ವಿಸ್ತರಿಸಲಾಗುತ್ತದೆ. ಹಾಸಿಗೆ ಕಾಯ್ದಿರಿಸುವಿಕೆ ಪ್ರಕ್ರಿಯೆಯನ್ನು ಅತ್ಯಂತ ಪಾರದರ್ಶಕವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಇದು ನೆರವಾಗುತ್ತದೆ. ಇದು ಸಂಯೋಜಿತ ವ್ಯವಸ್ಥೆಯನ್ನು ಹೊಂದಿದ್ದು, ಆಸ್ಪತ್ರೆ ದಾಖಲಾತಿ ಪಡೆಯುವ ಎಲ್ಲ ರೋಗಿಗಳಿಗೆ ಸುಲಭವಾಗಿ ಲಭ್ಯವಾಗಲಿದೆ’ ಎಂದು ಲಿಂಬಾವಳಿ ತಿಳಿಸಿದರು.

ಹಾಸಿಗೆ ಕಾಯ್ದಿರಿರುವ ಸರದಿ ವ್ಯವಸ್ಥೆಗೆ ಅರವಿಂದ ಲಿಂಬಾವಳಿ ಚಾಲನೆ ನೀಡಿದರು. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಸಂಸದ ತೇಜಸ್ವಿ ಸೂರ್ಯ ಇದ್ದಾರೆ – ಪ್ರಜಾವಾಣಿ ಚಿತ್ರ

**ಡಿಜಿಟಲ್ ರೂಪದಲ್ಲಿ ದಾಖಲು:** ‘ಚಿಕಿತ್ಸೆ ನಿರ್ಧಾರ ಕೇಂದ್ರಗಳಲ್ಲಿ (ಟ್ರಯಾಜಿಂಗ್ ಸೆಂಟರ್) ಸೋಂಕಿತರ ದೈಹಿಕ ತಪಾಸಣೆ ನಡೆಸಿ, ಹಾಸಿಗೆಗಳನ್ನು ಹಂಚಿಕೆ ಮಾಡಲಾಗುತ್ತದೆ. ತಪಾಸಣೆಯ ವಿವರವನ್ನು ಡಿಜಿಟಲ್ ರೂಪದಲ್ಲಿ ದಾಖಲು ಮಾಡಲಾಗುತ್ತದೆ. ವ್ಯಕ್ತಿಯ ಆರೋಗ್ಯ ಸ್ಥಿತಿಯ ಆಧಾರದ ಮೇಲೆ ಆಸ್ಪತ್ರೆ ಅಥವಾ ಕೋವಿಡ್ ಆರೈಕೆ ಕೇಂದ್ರಗಳ ಚಿಕಿತ್ಸೆಗೆ ಶಿಫಾರಸು ಮಾಡಲಾಗುತ್ತದೆ. ಬಳಿಕ ಸೋಂಕಿತರಿಗೆ ನಿರ್ದಿಷ್ಟ ಹಾಸಿಗೆ ಮತ್ತು ವಲಯದ ಪ್ರಕಾರ ಸರದಿ ಸಂಖ್ಯೆಯನ್ನು ನಿಗದಿ ಮಾಡಲಾಗುತ್ತದೆ. ಬಿ.ಯು ಸಂಖ್ಯೆ ಇಲ್ಲದವರು ನೇರವಾಗಿ ಚಿಕಿತ್ಸೆ ನಿರ್ಧಾರ ಕೇಂದ್ರಗಳಿಗೆ ತೆರಳಿ, ಈ ವ್ಯವಸ್ಥೆಯ ಪ್ರಯೋಜನ ಪಡೆಯಬಹುದು’ ಎಂದು ಅವರು ಹೇಳಿದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. ಸೋಂಕಿತರಿಗೆ ಆಸ್ಪತ್ರೆಗಳಲ್ಲಿ ಹಾಸಿಗೆಗಳು ಸುಲಭವಾಗಿ ಸಿಗುತ್ತಿವೆ. ಐಸಿಯು ಹಾಸಿಗೆಗಳ ಕೊರತೆಯೂ ಇಲ್ಲ. ಮೂರನೇ ಅಲೆ ನಿಯಂತ್ರಣಕ್ಕೆ ಈ ವ್ಯವಸ್ಥೆ ಹೆಚ್ಚು ಪ್ರಯೋಜನಕಾರಿಯಾಗಲಿದೆ’ ಎಂದರು.

ಸಂಸದ ತೇಜಸ್ವಿ ಸೂರ್ಯ, ‘ಹಾಸಿಗೆ ಕಾಯ್ದಿರಿಸುವಿಕೆ ವ್ಯವಸ್ಥೆಯಲ್ಲಿದ್ದ ಲೋಪಗಳನ್ನು ಸರಿಪಡಿಸಲಾಗಿದೆ. ಹಾಸಿಗೆ ಹಂಚಿಕೆಯಲ್ಲಿ ಪಾರದರ್ಶಕತೆ ತರಲಾಗಿದೆ’ ಎಂದು ತಿಳಿಸಿದರು.

### ‘ಮಕ್ಕಳು, ಗರ್ಭಿಣಿಯರಿಗೆ ಆದ್ಯತೆ’

‘ನೂತನ ತಂತ್ರಾಂಶದಡಿ ಸರದಿ ವ್ಯವಸ್ಥೆಯಲ್ಲಿ ಹಾಸಿಗೆ ಕಾಯ್ದಿರಿಸುವಾಗ ಸೋಂಕಿತ ಮಕ್ಕಳು ಮತ್ತು ಗರ್ಭಿಣಿಯರಿಗೆ ವಿಶೇಷ ಆದ್ಯತೆ ನೀಡಲಾಗುತ್ತದೆ. ವಿಶೇಷ ಪ್ರಕರಣಗಳಲ್ಲಿ ಸೆಂಟರ್ ಕಮಾಂಡ್ ಕೊಠಡಿಯ ಮೂಲಕ ತುರ್ತುಚಿಕಿತ್ಸೆ ಕೋಟಾದಡಿ ಹಾಸಿಗೆ ಒದಗಿಸಲಾಗುತ್ತದೆ. ಗಂಭೀರವಾಗಿ ಅಸ್ವಸ್ಥರಾಗಿದ್ದವರು, ಅಂಗವಿಕಲರು, ಕ್ಯಾನ್ಸರ್ ಮತ್ತಿತರ ಆರೋಗ್ಯ ಸಮಸ್ಯೆ ಇರುವವರಿಗೆ ತಕ್ಷಣ ಚಿಕಿತ್ಸೆ ಒದಗಿಸಲು ಸರದಿ ವ್ಯವಸ್ಥೆಯಲ್ಲಿ ಅವಕಾಶವಿದೆ’ ಎಂದು ಅರವಿಂದ ಲಿಂಬಾವಳಿ ತಿಳಿಸಿದರು.

ಶ್ರೀರಾಮಪುರದ ಬಿಬಿಎಂಪಿ ಶಾಲೆಯಲ್ಲಿ ಬಿಪಿಎಲ್ ಕುಟುಂಬಗಳ ಸದಸ್ಯರಿಗೆ ಲಸಿಕೆ ನೀಡಲಾಯಿತು. ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಇದ್ದಾರೆ

## ಮಲ್ಲೇಶ್ವರ: ಸಾವಿರ ಮಂದಿಗೆ ಉಚಿತ ಲಸಿಕೆ

**ಬೆಂಗಳೂರು:** ಡಾ.ಸಿ.ಎನ್.ಅಶ್ವತ್ಥನಾರಾಯಣ ಫೌಂಡೇಷನ್ ವತಿಯಿಂದ ಮಲ್ಲೇಶ್ವರ ಕ್ಷೇತ್ರದ ಶ್ರೀರಾಮಪುರ ಮತ್ತು ಸುಬ್ರಹ್ಮಣ್ಯಪುರದಲ್ಲಿ 1,000 ಮಂದಿಗೆ ಗುರುವಾರ ಉಚಿತವಾಗಿ ಲಸಿಕೆ ನೀಡಲಾಯಿತು.

ಸುಬ್ರಹ್ಮಣ್ಯಪುರದ ಬಾಲಾಜಿ ಸಮುದಾಯ ಭವನ, ಶ್ರೀರಾಮಪುರದ ಬಿಬಿಎಂಪಿ ಶಾಲೆಯಲ್ಲಿ ನಡೆದ ಲಸಿಕೆ ಅಭಿಯಾನದಲ್ಲಿ ವಿದ್ಯಾರ್ಥಿಗಳು, ಬಿಪಿಎಲ್ ಕಾರ್ಡ್ ಹೊಂದಿರುವ ಜನರಿಗೆ ಲಸಿಕೆ ನೀಡಲಾಯಿತು.

ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಎರಡೂ ಕಡೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಫೌಂಡೇಷನ್ ವತಿಯಿಂದ ಕ್ಷೇತ್ರದ ಹಲವು ಕಡೆ ನಾಗರಿಕರಿಗೆ ಉಚಿತವಾಗಿ ಲಸಿಕೆ ನೀಡಲಾಗಿದೆ. ಈವರೆಗೆ ಸಾವಿರ ವಿದ್ಯಾರ್ಥಿಗಳು ಸೇರಿದಂತೆ 6,000 ಜನರು ಲಸಿಕೆ ಹಾಕಿಸಿಕೊಂಡಿದ್ದಾರೆ ಎಂದು ಅಶ್ವತ್ಥನಾರಾಯಣ ತಿಳಿಸಿದರು.

ಯಶವಂತಪುರದಲ್ಲಿಯೂ ಲಸಿಕೆ ಅಭಿಯಾನ ನಡೆಯುತ್ತಿದ್ದು, ಅಲ್ಲಿ ಸರ್ಕಾರ ನೀಡಿರುವ ಲಸಿಕೆ ಕೊಡಲಾಗುತ್ತಿದೆ. ಸ್ಥಳಕ್ಕೆ ಭೇಟಿ ನೀಡಿದ ಅಶ್ವತ್ಥನಾರಾಯಣ, ಅಲ್ಲಿನ ವ್ಯವಸ್ಥೆಯನ್ನು ಪರಿಶೀಲನೆ ನಡೆಸಿದರು

ನಮ್ಮ ಕ್ಲಿನಿಕ್ ಮಾಲೀಕ ಡಾ.ಸೂರಜ್, ಭೌಜೋತ್ ಈ ಲಸಿಕೆ ಅಭಿಯಾನಕ್ಕೆ ಕೈಜೋಡಿಸಿದ್ದಾರೆ.

### ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 17.53 ಕೋಟಿ ▲ | 2.92 ಕೋಟಿ ▲ |
| ಸಕ್ರಿಯ ಪ್ರಕರಣ | 1.26 ಕೋಟಿ ▼ | 11.19 ಲಕ್ಷ ▼ |
| ಗುಣಮುಖ | 15.89 ಕೋಟಿ ▲ | 2.77 ಕೋಟಿ ▲ |
| ಸಾವು | 37.82 ಲಕ್ಷ ▲ | 3.63 ಲಕ್ಷ ▲ |

ದಿನದ ಮಾಹಿತಿ

| | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 4.21 ಲಕ್ಷ ▲ | 91,211 ▼ |
| ಗುಣಮುಖ | 5.31 ಲಕ್ಷ ▼ | 1.33 ಲಕ್ಷ ▼ |
| ಸಾವು | 14,097 ▲ | 3,401 ▲ |

**ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)**
29,757 ▼ ಅರ್ಜೆಂಟಿನಾ | 87,097 ▲ ಬ್ರೆಜಿಲ್ | 24,233 ▲ ಕೊಲಂಬಿಯಾ

**ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)**
53.97 ▼ ಅಮೆರಿಕ | 10.48 ▼ ಬ್ರೆಜಿಲ್ | 3.46 ▲ ಅರ್ಜೆಂಟಿನಾ

(* ರಾತ್ರಿ 12 ಗಂಟೆವರೆಗಿನ ಮಾಹಿತಿ)

**ಎಲ್ಲಿ ಹೆಚ್ಚು ಸಾವು**
1.03 ಲಕ್ಷ ▲ ಮಹಾರಾಷ್ಟ್ರ
24,748 ▲ ದೆಹಲಿ
28,528 ▲ ತಮಿಳುನಾಡು

**ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)**
58.76 ಮಹಾರಾಷ್ಟ್ರ ▲
26.88 ಕೇರಳ ▲
23.08 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

## ಕೋವಿಡ್ ಲಸಿಕೆಗೆ ತೆರಿಗೆ ವಿನಾಯಿತಿ: ಸಭೆ ನಾಳೆ

**ನವದೆಹಲಿ (ಪಿಟಿಐ):** ಕೋವಿಡ್ ನಿರ್ವಹಣೆಯಲ್ಲಿ ಅಗತ್ಯವಾಗಿರುವ ಕೆಲವು ವಸ್ತುಗಳು ಹಾಗೂ ಕಪ್ಪು ಶಿಲೀಂಧ್ರದ ಚಿಕಿತ್ಸೆಗೆ ಬಳಸುವ ಔಷಧಕ್ಕೆ ತೆರಿಗೆ ಪ್ರಮಾಣ ತಗ್ಗಿಸುವ ಬಗ್ಗೆ ಚರ್ಚಿಸಲು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯು ಶನಿವಾರ ಸಭೆ ಸೇರಲಿದೆ.

ಪಿಪಿಇ ಕಿಟ್‌ಗಳು, ಮುಖಗವಸು, ಲಸಿಕೆ ಸೇರಿದಂತೆ ಕೋವಿಡ್ ನಿರ್ವಹಣೆಗೆ ಅಗತ್ಯವಿರುವ ವಸ್ತುಗಳ ಮೇಲಿನ ತೆರಿಗೆ ಪ್ರಮಾಣ ತಗ್ಗಿಸುವ ಬಗ್ಗೆ ಪರಿಶೀಲಿಸಿ, ಶಿಫಾರಸು ಮಾಡಲು ಸಚಿವರ ಸಮಿತಿಯೊಂದನ್ನು ಮೇ 28ರಂದು ನಡೆದ ಜಿಎಸ್‌ಟಿ ಮಂಡಳಿ ಸಭೆಯು ರಚಿಸಿತ್ತು. ಸಚಿವರ ಸಮಿತಿಯು ಈಚೆಗೆ ವರದಿ ಸಲ್ಲಿಸಿದೆ.

ವರದಿಯ ಬಗ್ಗೆ ಚರ್ಚಿಸಿ, ತೆರಿಗೆ ಪ್ರಮಾಣ ತಗ್ಗಿಸುವ ಬಗ್ಗೆ ಪರಿಶೀಲನೆ ನಡೆಸಲು ಜಿಎಸ್‌ಟಿ ಮಂಡಳಿಯು ಶನಿವಾರ ಸಭೆ ನಡೆಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತೆರಿಗೆ ಪ್ರಮಾಣವನ್ನು ತಗ್ಗಿಸಬೇಕು ಎಂದು ಸಮಿತಿಯ ಭಾಗವಾಗಿದ್ದ ಕೆಲವು ರಾಜ್ಯಗಳ ಹಣಕಾಸು ಸಚಿವರು ಸಲಹೆ ಮಾಡಿದ್ದಾರೆ ಎಂದು ಗೊತ್ತಾಗಿದೆ.

## ‘ಭಾವನಾತ್ಮಕ ಬೆಸುಗೆಯ ಬಂಧವಾದ ಚಿಕಿತ್ಸೆ’

**ಬೆಂಗಳೂರು:** ‘ಕೋವಿಡ್ ಎರಡನೇ ಅಲೆಯ ವೇಳೆ ಆತಂಕ-ಭೀತಿಯ ವಾತಾವರಣವಿದ್ದ ಅವಧಿಯಲ್ಲಿ ನಾನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಂಡೆ. ವೃತ್ತಿ ಬದುಕೆಂಬ ಬುತ್ತಿಯಲ್ಲಿ ಭಾವನಾತ್ಮಕ ಬೆಸುಗೆಯ ಬಂಧದ ಹೊಸ ಅನುಭವವು ಒಂದು ತಿಂಗಳ ಅವಧಿಯಲ್ಲಿ ದೊರೆಯಿತು.’

‘ಮಕ್ಕಳ ದಂತವೈದ್ಯ ತಜ್ಞೆಯಾದ ನನ್ನನ್ನು ಮೇ 4ರಂದು ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಳಿಸಲಾಯಿತು. ಬಳಿಕ ಆಪ್ತ ಸಮಾಲೋಚಕಿಯಾಗಿ, ವೈದ್ಯೆಯಾಗಿ, ಸ್ನೇಹಿತೆಯಾಗಿ, ಸಹೋದರಿಯಾಗಿ, ಮಗಳಾಗಿ ವಿವಿಧ ಆಯಾಮಗಳಲ್ಲಿ ಕರ್ತವ್ಯ ನಿರ್ವಹಿಸಿದೆ. ರೋಗಿಯ ಕಡೆಯವರು ಪ್ರತಿನಿತ್ಯ ಕರೆಮಾಡಿ, ಸೋಂಕಿತರ ಸ್ಥಿತಿಗತಿಯ ಬಗ್ಗೆ ವಿಚಾರಿಸುತ್ತಿದ್ದರು. ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ನಿರ್ಗಮಿಸುವುದನ್ನು ಕಂಡಾಗ ಖುಷಿಯಾಗುತ್ತಿತ್ತು. ಇನ್ನೊಂದೆಡೆ, ತೀವ್ರ ನಿಗಾ ಘಟಕದಲ್ಲಿರುವ ರೋಗಿಗಳ ಸ್ಥಿತಿಯನ್ನು ನೋಡಿದಾಗ ಕಣ್ಣಾಲಿಗಳು ತುಂಬಿ ಬರುತ್ತಿದ್ದವು.’

‘ಕೆಲ ರೋಗಿಗಳ ಸಂಬಂಧಿಕರು ಸಣ್ಣ ಸಣ್ಣ ವಿಷಯಕ್ಕೂ ಪದೇ ಪದೇ ಕರೆ ಮಾಡುತ್ತಿದ್ದರು. ಆ ವೇಳೆ ಕಿರಿಕಿರಿಯಾದರೂ ತೋರ್ಪಡಿಸದೆ, ಅವರ ಮನಸ್ಸಿನ ಇಂಗಿತದಂತೆ ವಾರ್ಡ್‌ನ ವೈದ್ಯರಿಗೆ ಸಂದೇಶ ಮುಟ್ಟಿಸುತ್ತಿದ್ದೆ’

‘ಕೋವಿಡ್ ಸೇವೆಯನ್ನು ಪ್ರಾರಂಭಿಸಿದ ಬಳಿಕ ಬೆಳಿಗ್ಗೆಯಿಂದ ರಾತ್ರಿಯವರೆಗೆ ನೂರಾರು ಕರೆಗಳು ಬರುತ್ತಿದ್ದವು. ಇದರಿಂದಾಗಿ ರಾತ್ರಿ ಮಲಗಿದ ಬಳಿಕವೂ ಮೊಬೈಲ್ ಫೋನ್ ರಿಂಗಣಿಸಿದ ಅನುಭವವಾಗುತ್ತಿತ್ತು. ಸೋಂಕಿತರ ಕುಟುಂಬದವರ ನೋವಿನ ನುಡಿಗಳು ಮನಸ್ಸಿನಲ್ಲಿ ಮಾರ್ದನಿಸುತ್ತಿದ್ದವು. ಅನಂತರದ ದಿನಗಳಲ್ಲಿ ಕರ್ತವ್ಯಕ್ಕೆ ಒಗ್ಗಿಕೊಂಡಾಗ ಮನಸ್ಸು ಸಶಕ್ತಗೊಂಡಿತು.’

**–ಡಾ.ಜೆ. ನಾಗರತ್ನಾ,** ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್ ಸೇವೆ ನೀಡಿದ ವೈದ್ಯೆ

### ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

**11,91,732** ▲ ಒಟ್ಟು ಸೋಂಕಿತರು
(11,89,541 ನಿನ್ನೆಯ ವಿವರ)

| 95,423 ▼ | 10,81,093 ▲ | 15,215 ▲ |
|---|---|---|
| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |

ಮಂಗಳವಾರದ ಏರಿಕೆ

| | |
|---|---|
| ಹೊಸ ಪ್ರಕರಣ | 2,191 ▼ |
| ಗುಣಮುಖ | 4,846 ▼ |
| ಸಾವು | 47 ▼ |

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ನೆಲಮಂಗಲ ಸಮೀಪದ ಬೊಮ್ಮಶೆಟ್ಟಿಹಳ್ಳಿ ಹಿತಚಿಂತನ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ವಿ.ರಾಮಸ್ವಾಮಿ ಅವರು ನಿರಾಶ್ರಿತರಿಗೆ ಬಟ್ಟೆ, ಹೊದಿಕೆ, ಆಹಾರ ಪೊಟ್ಟಣಗಳನ್ನು ವಿತರಿಸಿದರು. ಟ್ರಸ್ಟ್‌ನ ಬೈಲಮೂರ್ತಿ, ಮಂಜುನಾಥ್, ಅಕ್ಷಯ್ ಇದ್ದಾರೆ

### ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ ಬಿಡುಗಡೆ ● ರಾಜ್ಯದಲ್ಲಿ ಗರಿಷ್ಠ ಸಂಖ್ಯೆಯ ಕಾಲೇಜು

# ಉನ್ನತ ಶಿಕ್ಷಣ ಸೌಲಭ್ಯ: ರಾಜ್ಯಕ್ಕೆ 3ನೇ ಸ್ಥಾನ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಉನ್ನತ ಶಿಕ್ಷಣ ಬೋಧಿಸುವ 4,407 ಕಾಲೇಜುಗಳನ್ನು ಹೊಂದಿರುವ ಕರ್ನಾಟಕ, ದೇಶದಲ್ಲೇ 3ನೇ ಸ್ಥಾನದಲ್ಲಿದೆ. ಇಲ್ಲಿ ಉನ್ನತ ಶಿಕ್ಷಣಕ್ಕೆ ಅರ್ಹರಿರುವ ಪ್ರತಿ ಲಕ್ಷ ವಿದ್ಯಾರ್ಥಿಗಳಿಗೆ 59 ಕಾಲೇಜುಗಳಿವೆ.

ಬೆಂಗಳೂರು ನಗರವು 1,009 ಕಾಲೇಜುಗಳನ್ನು ಹೊಂದಿದ್ದು, ಗರಿಷ್ಠ ಸಂಖ್ಯೆಯ ಕಾಲೇಜುಗಳನ್ನು ಹೊಂದಿರುವ ಜಿಲ್ಲೆಗಳ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ.ನಂತರದಸ್ಥಾನದಲ್ಲಿರುವಜೈಪುರದಲ್ಲಿ 606 ಕಾಲೇಜುಗಳಿವೆ ಎಂದು ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ (ಎಐಎಸ್‌ಎಚ್‌ಇ) 2019-20 ತಿಳಿಸಿದೆ.

ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಅವರು ಗುರುವಾರ ಸಮೀಕ್ಷಾ ವರದಿಯನ್ನು ಬಿಡುಗಡೆ ಮಾಡಿದ್ದಾರೆ.

ದೇಶದ ಶೇ 16.6ರಷ್ಟು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ 100ಕ್ಕಿಂತ ಕಡಿಮೆ ಇದ್ದರೆ, ಶೇ48.9ರಷ್ಟುಕಾಲೇಜುಗಳಲ್ಲಿವಿದ್ಯಾರ್ಥಿಗಳ ಸಂಖ್ಯೆ 100ರಿಂದ 500ರಷ್ಟಿದೆ. ಕೇವಲ ಶೇ 4ರಷ್ಟು ಕಾಲೇಜುಗಳಲ್ಲಿ 3,000ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿ ಇದೆ.

**ಉನ್ನತ ಶಿಕ್ಷಣ ದಾಖಲಾತಿಯಲ್ಲಿ ಏರಿಕೆ:** ದೇಶದಲ್ಲಿ ಉನ್ನತ ಶಿಕ್ಷಣ ದಾಖಲಾತಿ ಪ್ರಮಾಣ ಐದು ವರ್ಷಗಳಲ್ಲಿ ಶೇ 11.4 ರಷ್ಟು ಏರಿಕೆ ಕಂಡಿದೆ. ಈ ಅವಧಿಯಲ್ಲಿ ಉನ್ನತ ಶಿಕ್ಷಣ ಪ್ರವೇಶಿಸುತ್ತಿರುವ ಮಹಿಳೆಯರ ಪ್ರಮಾಣ ಶೇ 18.2ರಷ್ಟು ಏರಿಕೆಯಾಗಿದೆ ಎಂದು ಸಮೀಕ್ಷೆ ತಿಳಿಸಿದೆ.

ಭಾರತದಲ್ಲಿ ಉನ್ನತ ಶಿಕ್ಷಣ ದಾಖಲಾತಿ ಅನುಪಾತ (ಜಿಇಆರ್) 27.1ರಷ್ಟಿದೆ (2018-19ರಲ್ಲಿ 26.3ರಷ್ಟಿತ್ತು). ಪುರುಷರ ದಾಖಲಾತಿ ಪ್ರಮಾಣ 26.9ರಷ್ಟಿದ್ದರೆ, ಮಹಿಳೆಯರ ದಾಖಲಾತಿ ಪ್ರಮಾಣ 27.3 ರಷ್ಟಿದೆ. ಉನ್ನತ ಶಿಕ್ಷಣ ಪ್ರವೇಶಿಸುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಜಿಇಆರ್ 23.4 ರಷ್ಟಿದ್ದರೆ, ಪರಿಶಿಷ್ಟ ಪಂಗಡದವರ ಜಿಇಆರ್ 18ರಷ್ಟಿದೆ ಎಂದು ಸಮೀಕ್ಷೆ ಅಂಕಿ ಅಂಶಗಳನ್ನು ಒದಗಿಸಿದೆ.

ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಸುಮಾರು 3.85 ಕೋಟಿ ಇದೆ (2018-19ರಲ್ಲಿ 3.74 ಕೋಟಿ ಇತ್ತು). ಇದರಲ್ಲಿ 1.96 ಕೋಟಿ ಪುರುಷರಾಗಿದ್ದರೆ, 1.89 ಕೋಟಿ ಮಹಿಳೆಯರಾಗಿದ್ದಾರೆ. ಒಟ್ಟು ದಾಖಲಾತಿಯಲ್ಲಿ ಮಹಿಳೆಯರು ಶೇ 49ರಷ್ಟಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ. ಶೇಕಡ 79.5ರಷ್ಟು ವಿದ್ಯಾರ್ಥಿಗಳು ಪದವಿ ಕೋರ್ಸ್‌ಗಳ ವ್ಯಾಸಂಗ ಮಾಡುತ್ತಿದ್ದರೆ, ಶೇ 11.2 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

### ಶೇ 2.7ರಷ್ಟು ಕಾಲೇಜುಗಳಲ್ಲಿ ಪಿಎಚ್‌.ಡಿ

ದೇಶದ ಶೇ 35.04 ಕಾಲೇಜುಗಳು ಸ್ನಾತಕೋತ್ತರ ಕೋರ್ಸ್‌ಗಳನ್ನು (ಪಿ.ಜಿ) ನಡೆಸುತ್ತಿವೆ . ಆದರೆ, ಶೇ 2.7ರಷ್ಟು ಕಾಲೇಜುಗಳು ಮಾತ್ರ ಪಿಎಚ್‌.ಡಿ ಕೋರ್ಸ್‌ಗಳನ್ನು ನಡೆಸುತ್ತಿವೆ.

ಪ್ರಜಾವಾಣಿ ಸೆಲೆಬ್ರಿಟಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಶನಿವಾರದ ವಿಶೇಷ
ರಿಯಲ್ ಸ್ಟಾರ್ ಉಪೇಂದ್ರ ಜೊತೆಗೆ
ಮುಖಾಮುಖಿ
12-06-2021 ಮಧ್ಯಾಹ್ನ 12ರಿಂದ 12.45

## 'ಖನಿಜ ಸಂಪತ್ತಿನ ಸಮಗ್ರ ಸಮೀಕ್ಷೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದಲ್ಲಿರುವ ಖನಿಜ ಸಂಪತ್ತಿನ ಸಮಗ್ರ ಸಮೀಕ್ಷೆಗೆ ಅಂತರ-ರಾಷ್ಟ್ರೀಯ ಟೆಂಡರ್ ಕರೆಯಲಾಗಿದೆ' ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಗುರುವಾರ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, 'ಸಮೀಕ್ಷೆಯಿಂದ, ರಾಜ್ಯದ ಒಟ್ಟು ಖನಿಜ ಸಂಪತ್ತಿನ ನಿಖರ ಮಾಹಿತಿ ಸಿಗಲಿದ್ದು, ಸಮರ್ಪಕ ಬಳಕೆಯ ಯೋಜನೆ ರೂಪಿಸಬಹುದು' ಎಂದರು.

'ಗ್ರೇಡ್ ಪ್ರಕಾರ ಮರಳು ವಿಂಗಡಿಸಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳ ಮೂಲಕ ವಿತರಣೆಗೆ 'ಮರಳು ನಿಗಮ' (ಸ್ಯಾಂಡ್ ಕಾರ್ಪೋರೇಷನ್) ಸ್ಥಾಪನೆಯನ್ನು ಶೀಘ್ರವೇ ಕಾರ್ಯಗತಗೊಳಿಸಲಾಗುವುದು' ಎಂದು ಹೇಳಿದರು.

13ರೊಳಗೆ ವರದಿ ಸಲ್ಲಿಸಲು ಪ್ರಾದೇಶಿಕ ಆಯುಕ್ತರ ಸೂಚನೆ

# ರಾಜಕಾಲುವೆ ಒತ್ತುವರಿ ಆರೋಪ: ತನಿಖಾ ತಂಡ ರಚನೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ದಟ್ಟಗಳ್ಳಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿ ಶಾಸಕ ಸಾ.ರಾ.ಮಹೇಶ್ ಅವರು ಕಲ್ಯಾಣಮಂಟಪ ನಿರ್ಮಿಸಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಹೆಚ್ಚುವರಿ ಜಿಲ್ಲಾಧಿಕಾರಿ ಮಂಜುನಾಥಸ್ವಾಮಿ ನೇತೃತ್ವದಲ್ಲಿ ಗುರುವಾರ ತಂಡವನ್ನು ರಚಿಸಲಾಗಿದೆ.

ಭೂದಾಖಲೆಗಳ ಉಪನಿರ್ದೇಶಕರಾದ ಜಿ.ಸೀಮಂತಿನಿ, ಸಹಾಯಕ ನಿರ್ದೇಶಕ ಎಚ್.ಮಂಜುನಾಥ್ ಸೇರಿದಂತೆ 7 ಮಂದಿ ತಂಡದಲ್ಲಿದ್ದಾರೆ. ಸ್ಥಳ ಪರಿಶೀಲನೆ ನಡೆಸಿ ರಾಜಕಾಲುವೆ ಒತ್ತುವರಿ ಆಗಿದೆಯೇ ಇಲ್ಲವೇ ಎಂಬುದರ ಕುರಿತು ಜೂನ್ 13ರ ಒಳಗೆ ವರದಿ ಸಲ್ಲಿಸುವಂತೆ ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ ಆದೇಶಿಸಿದ್ದಾರೆ.

**ರೋಹಿಣಿ ತನಿಖಾಧಿಕಾರಿಯಾದರೂ ಅಭ್ಯಂತರ ಇಲ್ಲ- ಸಾ.ರಾ. ಮಹೇಶ್:** ಗುರುವಾರ ಬೆಳಿಗ್ಗೆ ತಮ್ಮ ಬೆಂಬಲಿಗರೊಂದಿಗೆ, ಪ್ರಾದೇಶಿಕ ಆಯುಕ್ತರ ಕಚೇರಿ ಮುಂಭಾಗದಲ್ಲಿ ಧರಣಿ ನಡೆಸಿದ ಶಾಸಕ ಸಾ.ರಾ. ಮಹೇಶ್, ಕಲ್ಯಾಣಮಂಟಪ ನಿರ್ಮಾಣದ ವೇಳೆ ರಾಜಕಾಲುವೆ ಒತ್ತುವರಿಯಾಗಿರುವುದು ಸಾಬೀತಾದರೆ ಸಾರ್ವಜನಿಕ ಜೀವನದಿಂದ ನಿವೃತ್ತಿ ಪಡೆಯುವುದಾಗಿ ಪುನರುಚ್ಚರಿಸಿದರು.

ಈ ಪ್ರಕರಣ ಕುರಿತು ತನಿಖಾಧಿಕಾರಿಯನ್ನಾಗಿ ರೋಹಿಣಿಸಿಂಧೂರಿಅವರನ್ನೇ ನೇಮಕ ಮಾಡಿದರೂ ತಮ್ಮ ಅಭ್ಯಂತರ ಇಲ್ಲ ಎಂದು ಸ್ಪಷ್ಟಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಬಂದ ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್, ಈ ಬಗ್ಗೆ ತನಿಖೆ ನಡೆಸಿ, ವರದಿ ನೀಡುವುದಾಗಿ ಭರವಸೆ ನೀಡುವ ಮೂಲಕ ಸಾ.ರಾ.ಮಹೇಶ್ ಅವರ ಮನವೊಲಿಸಿದರು.

ಜಿಲ್ಲೆಯಲ್ಲಿನ ಭೂ ಮಾಫಿಯಾ ವಿಚಾರವಾಗಿ ಜಿಲ್ಲಾಧಿಕಾರಿ ತನಿಖೆ ನಡೆಸಿ, ಕ್ರಮ ಕೈಗೊಳ್ಳುತ್ತಾರೆ. ತನಿಖೆಗೆ ನಾವು ಯಾವುದೇ ರೀತಿಯಲ್ಲಿ ಅಡ್ಡಿಪಡಿಸುವುದಿಲ್ಲ

**ಎಸ್.ಟಿ.ಸೋಮಶೇಖರ್,** ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

ತಮ್ಮ ವಿರುದ್ಧ ರೋಹಿಣಿ ಸಿಂಧೂರಿ ಮಾಡಿರುವ ಆರೋಪಗಳ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿ, ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿ ಮುಂದೆ ಗುರುವಾರ ಪ್ರತಿಭಟನೆ ನಡೆಸಿದ ಶಾಸಕ ಸಾ.ರಾ.ಮಹೇಶ್

## 'ತನಿಖಾಧಿಕಾರಿಯಾಗಿ ಸಿಂಧೂರಿ ನೇಮಿಸಲಿ'



ಎಚ್.ವಿಶ್ವನಾಥ್

ಮೈಸೂರು ನಗರ ಹಾಗೂ ಸುತ್ತಮುತ್ತ ಆಗಿರುವ ಭೂ ಹಗರಣಗಳನ್ನು ಬಯಲಿಗೆಳೆಯಲು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ವಿಶೇಷ ತನಿಖಾಧಿಕಾರಿಯನ್ನಾಗಿ ನೇಮಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಜಿಲ್ಲೆಯಲ್ಲಿ ಎಲ್ಲೆಲ್ಲಿ ಒತ್ತುವರಿ ಆಗಿದೆ ಎಂಬ ನಿಖರ ಮಾಹಿತಿ ಅವರಲ್ಲಿದೆ. ಆದ್ದರಿಂದ ಆರು ತಿಂಗಳ ಅವಧಿಗೆ ಅವರನ್ನೇ ವಿಶೇಷಾಧಿಕಾರಿಯನ್ನಾಗಿ ನೇಮಿಸಬೇಕು ಎಂದು ಒತ್ತಾಯಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, 'ಸಿಂಧೂರಿ ಅವರನ್ನೇ ನೇಮಿಸಲಿ. ಅದು ಸಂತೋಷದ ವಿಚಾರ. ವಿಶ್ವನಾಥ್ ಹಿರಿಯ ನಾಯಕ. ಅವರ ಸಲಹೆ ಸ್ವೀಕಾರವಾಗುವಂಥದ್ದು' ಎಂದರು.

## ಸಮಗ್ರ ತನಿಖೆ ಆಗಬೇಕು: ಸಿಂಧೂರಿ ಒತ್ತಾಯ

ರೋಹಿಣಿ ಸಿಂಧೂರಿ

ಶಾಸಕ ಸಾ.ರಾ.ಮಹೇಶ್ ಅವರ ಸಾ.ರಾ.ಚೌಲ್ಟ್ರಿ ಕುರಿತ ಕೇವಲ ಒಂದೇ ಒಂದು ಅಂಶವನ್ನಿಟ್ಟುಕೊಂಡು ತನಿಖೆ ನಡೆಸುವುದು ಸೂಕ್ತವಲ್ಲ. ಸಮಗ್ರ ತನಿಖೆ ನಡೆಸಬೇಕು ಎಂದು ನಿರ್ಗಮಿತ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಪ್ರಾದೇಶಿಕ ಆಯುಕ್ತರನ್ನು ಒತ್ತಾಯಿಸಿದ್ದಾರೆ.

ಗೋಮಾಳದ ಭೂಮಿ ಹೇಗೆ ಖಾಸಗಿ ಸ್ವತ್ತಾಗುತ್ತದೆ ಎಂದು ಪ್ರಶ್ನಿಸಿದ್ದಾರೆ. ಲಿಂಗಾಂಬುದಿ ಕೆರೆ ಸಮೀಪ ಇರುವ ಭೂಮಿಯ ಕುರಿತೂ ತನಿಖೆ ಕೈಗೊಳ್ಳಬೇಕು ಎಂದು ಅವರು ಇದೇ ವೇಳೆ ಹೇಳಿದ್ದಾರೆ.

'ಭೂಪರಿವರ್ತನೆಯಾಗಿರುವುದೇ ಸರಿಯಲ್ಲ. ಮಾಸ್ಟರ್‌ಪ್ಲಾನ್‌ಗೆ ವಿರುದ್ಧವಾಗಿ ಕಟ್ಟಡವನ್ನು ನಿರ್ಮಿಸಲಾಗಿದೆ. ಆದರೆ, ತನಿಖೆ ಸಾ.ರಾ.ಮಹೇಶ್ ಅವರು ಹೇಳಿದಂತೆ ಕೇವಲ ಒಂದು ಅಂಶಕ್ಕೆ ಮಾತ್ರವೇ ಸೀಮಿತಗೊಂಡಿದೆ' ಎಂದಿದ್ದಾರೆ.

# ಬ್ಯಾಂಕ್ ನೇಮಕಾತಿ: ಕನ್ನಡದಲ್ಲೇ ಪರೀಕ್ಷೆ

ಆರ್‌ಆರ್‌ಬಿ ಪೂರ್ವಭಾವಿ–ಮುಖ್ಯಪರೀಕ್ಷೆ: ಕರ್ನಾಟಕದ ಶಾಖೆಗಳಲ್ಲಿ ಹುದ್ದೆಗಳೇ ಇಲ್ಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐಬಿಪಿಎಸ್ ನಡೆಸುವ ಪ್ರಾದೇಶಿಕ, ಗ್ರಾಮೀಣ ಬ್ಯಾಂಕಿಂಗ್ (ಆರ್‌ಆರ್‌ಬಿ) ನೇಮಕಾತಿಯ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳೆರಡೂ ಇದೇ ಮೊದಲ ಬಾರಿಗೆ ಕನ್ನಡದಲ್ಲಿಯೂ ನಡೆಯಲಿವೆ.

ಆದರೆ, 11,687ಕ್ಕೂ ಹೆಚ್ಚು ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ್ದರೂ, ರಾಜ್ಯದಲ್ಲಿರುವ ಬ್ಯಾಂಕ್ ಶಾಖೆಗಳಲ್ಲಿ ಒಂದೂ ಹುದ್ದೆ ಇಲ್ಲ. ಈ ಬಾರಿ ಪರೀಕ್ಷೆಯಲ್ಲಿ ಆಯ್ಕೆಯಾದ ಕನ್ನಡಿಗರು ಬೇರೆ ರಾಜ್ಯದಲ್ಲಿ ಕೆಲಸ ಮಾಡಬೇಕಾಗುತ್ತದೆ.

'ರಾಜ್ಯದ ಪ್ರತಿ ತಾಲ್ಲೂಕು, ಜಿಲ್ಲಾ ಕೇಂದ್ರದಲ್ಲಿಯೂ ಕೆವಿಜಿ, ಕೆವಿಜಿಬಿ ಬ್ಯಾಂಕ್‌ಗಳು ಇವೆ. ಆದರೆ, ಒಂದೇ ಒಂದು ಹುದ್ದೆಯನ್ನೂ ಇಲ್ಲಿ ನಿಗದಿ ಮಾಡಿಲ್ಲ. ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶವಿದ್ದರೂ, ರಾಜ್ಯದಲ್ಲಿ ಕೆಲಸ ಮಾಡಲು ಅವಕಾಶವಿಲ್ಲದಂತಾಗಿದೆ. ರಾಜ್ಯದ ಪ್ರಾದೇಶಿಕ, ಗ್ರಾಮೀಣ ಬ್ಯಾಂಕ್‌ಗಳಲ್ಲಿಯೂ ನಿಗದಿ ಮಾಡಿ ಮತ್ತೊಮ್ಮೆ ಅರ್ಜಿ ಆಹ್ವಾನಿಸಬೇಕು. ರಾಜ್ಯದ ಪ್ರತಿನಿಧಿಗಳು ಈ ನಿಟ್ಟಿನಲ್ಲಿ ಒತ್ತಡ ಹೇರಬೇಕು' ' ಎಂದು ಅಭ್ಯರ್ಥಿ ಬಿ.ಎಚ್. ಕಿರಣ್‌ಕುಮಾರ್ ಒತ್ತಾಯಿಸಿದರು.

'ಈ ಬಾರಿ ನಿರಾಸೆಯಾದರೂ ಮುಂದಿನ ಬಾರಿ ಕನ್ನಡಿಗರು ಇಲ್ಲಿಯೇ ಕೆಲಸ ಮಾಡುವ ಅವಕಾಶ ಸಿಗಬಹುದು. ಈ ಬಾರಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರು, ಆಯ್ಕೆಯಾದ ರಾಜ್ಯದ ಭಾಷಾ ಪರೀಕ್ಷೆಯನ್ನು ಮೂರು ಅಥವಾ ಆರು ತಿಂಗಳಲ್ಲಿ ಉತ್ತೀರ್ಣಗೊಳಿಸಬೇಕಾಗುತ್ತದೆ' ಎಂದು ಧಾರವಾಡದ ಬುಲಬುಲೆ ಸ್ಕೂಲ್ ಆಫ್ ಬ್ಯಾಂಕಿಂಗ್‌ನ ಮುಖ್ಯಸ್ಥ ಡಾ. ಗುರುರಾಜ ಬುಲಬುಲೆ 'ಪ್ರಜಾವಾಣಿ'ಗೆ ತಿಳಿಸಿದರು.

**ಪಠ್ಯಕ್ರಮ ಬದಲಾಗಬೇಕು:** 'ಎಸ್‌ಎಸ್‌ಸಿ ಪರೀಕ್ಷೆ ಸೇರಿದಂತೆ ಕೇಂದ್ರ ಸರ್ಕಾರದ ಪ್ರಮುಖ ಪರೀಕ್ಷೆಗಳಿಗಿರುವ ಪಠ್ಯಕ್ರಮದ ಮಾದರಿಯಲ್ಲಿಯೇ ಆಯಾ ರಾಜ್ಯದ ಲೋಕಸೇವಾ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮವೂ ಇರುತ್ತದೆ. ಆದರೆ, ನಮ್ಮ ರಾಜ್ಯದಲ್ಲಿನ ಪಠ್ಯಕ್ರಮ ಮತ್ತು ಬ್ಯಾಂಕಿಂಗ್ ಪರೀಕ್ಷೆಗಳ ಪಠ್ಯಕ್ರಮದಲ್ಲಿ ತುಂಬಾ ವ್ಯತ್ಯಾಸವಿದೆ. ಹೊರ ರಾಜ್ಯದ ಅಭ್ಯರ್ಥಿಗಳಿಗೆ ಈ ಎರಡೂ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲು ಅನುಕೂಲಕರವಾದ ವ್ಯವಸ್ಥೆ ಇದೆ. ಆದರೆ, ಇಲ್ಲಿ ಕೆಎಎಸ್‌ಗೆ ಸಿದ್ಧವಾಗುತ್ತಿರುವ ಅಭ್ಯರ್ಥಿ, ಬ್ಯಾಂಕಿಂಗ್‌ಗೂ ಪ್ರತ್ಯೇಕವಾಗಿಯೇ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ರಾಜ್ಯದ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮ, ಕೇಂದ್ರದ ಪರೀಕ್ಷೆಗಳ ಮಾದರಿಯಂತೆಯೇ ಬದಲಿಸುವ ಅವಶ್ಯಕತೆ ಇದೆ' ಎಂದು ಹೇಳಿದರು.

**ದೋಷ ಸರಿಪಡಿಸಬೇಕು:** '2008ರಲ್ಲಿ ಆರ್‌ಆರ್‌ಬಿ (ರೈಲ್ವೆ ರಿಕ್ರೂಟ್‌ಮೆಂಟ್ ಬೋರ್ಡ್) ಪರೀಕ್ಷೆ ಕನ್ನಡದಲ್ಲಿಯೇ ನಡೆದಿತ್ತು. ಆದರೆ, ಅದರಲ್ಲಿ ಮುದ್ರಣ ಮತ್ತು ವಾಕ್ಯರಚನೆ ದೋಷಗಳೇ ತುಂಬಿಕೊಂಡಿದ್ದವು. ಪ್ರಶ್ನೆ ಪತ್ರಿಕೆ ಅರ್ಥ ಮಾಡಿಕೊಳ್ಳಲು ಇಂಗ್ಲಿಷ್ ಪ್ರಶ್ನೆಗಳನ್ನೇ ನೋಡಬೇಕಾಗಿತ್ತು. ಐಬಿಪಿಎಸ್ ಆದರೂ ಈ ನಿಟ್ಟಿನಲ್ಲಿ ಹೆಚ್ಚು ಗಮನ ಹರಿಸಿ, ತಪ್ಪಿಲ್ಲದ ಕನ್ನಡ ಪ್ರಶ್ನೆಪತ್ರಿಕೆ ನೀಡಬೇಕು' ಎಂದು ಅವರು ಗುರುರಾಜ ಒತ್ತಾಯಿಸಿದರು.

ಅರ್ಜಿ ಸಲ್ಲಿಕೆಗೆ ಕೊನೆಯ ದಿನ ಜೂನ್ 28. ಆಗಸ್ಟ್ ಮೂರನೇ ವಾರದಲ್ಲಿ ಪರೀಕ್ಷೆ ನಡೆಯಬಹುದು. ಮಾಹಿತಿಗೆ, www.ibps.in ಸಂಪರ್ಕಿಸಬಹುದು.

## ವಿಜಯೇಂದ್ರ ಪೂಜೆ: ಡಿ.ಸಿ ವರದಿ ಮಂಡಿಸಲು ಸೂಚನೆ

ಬೆಂಗಳೂರು: ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ನಂಜನಗೂಡು ದೇವಸ್ಥಾನಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ವಿಜಯೇಂದ್ರ ಭೇಟಿ ನೀಡಿದ್ದ ಪ್ರಕರಣದ ಕುರಿತು ಮೈಸೂರು ಜಿಲ್ಲಾಧಿಕಾರಿ ನೀಡಿರುವ ವರದಿ ಮಂಡಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ರಾಜ್ಯ ಸರ್ಕಾರ ಸಲ್ಲಿಸಿದ ಮೆಮೊ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಮಾರ್ಗಸೂಚಿಗಳ ಸ್ಪಷ್ಟ ಉಲ್ಲಂಘನೆಆಗಿರುವುದನ್ನುಗಮನಿಸಲಾಗಿದೆ. ಮೈಸೂರು ಜಿಲ್ಲಾಧಿಕಾರಿ ವರದಿ ಪರಿಶೀಲಿಸಿದ ಬಳಿಕ ಸೂಕ್ತ ಆದೇಶ ನೀಡಲಾಗುವುದು' ಎಂದು ತಿಳಿಸಿತು.

'ದೇವಸ್ಥಾನಕ್ಕೆ ಭೇಟಿ ನೀಡಿದ್ದರ ಬಗ್ಗೆ ವಿಜಯೇಂದ್ರ ಅವರಿಂದ ವಿವರಣೆ ಕೇಳಿ ಮೈಸೂರು ಜಿಲ್ಲಾಧಿಕಾರಿ ಮೇ 27ರಂದು ನೋಟಿಸ್ ನೀಡಿದ್ದರು. ಮೇ 29ರಂದು ವಿಜಯೇಂದ್ರ ಉತ್ತರಿಸಿದ್ದಾರೆ. ಕೋವಿಡ್ ಕೆಲಸದ ಮೇಲೆ ಅವರು ನಂಜನಗೂಡಿಗೆ ತೆರಳಿದ್ದರು' ಎಂದು ಅಡ್ವೊಕೇಟ್ ಜನರಲ್ ತಿಳಿಸಿದರು.

## ಭಟ್ಕಳ: ಪಾಕಿಸ್ತಾನದ ಮಹಿಳೆ ಬಂಧನ

ಕಾರವಾರ: ಭಟ್ಕಳದಲ್ಲಿ ಆರು ವರ್ಷಗಳಿಂದ ಅಕ್ರಮವಾಗಿ ವಾಸವಿದ್ದ ಪಾಕಿಸ್ತಾನದ ಖತೀಜಾ ಮೆಹೆರಿನ್ ಎಂಬ ಮಹಿಳೆಯನ್ನು ಸ್ಥಳೀಯ ಪೊಲೀಸರು ಬುಧವಾರ ಬಂಧಿಸಿದ್ದಾರೆ. ಅವರಿಂದ ಪಡಿತರ ಚೀಟಿ, ಜನನ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಅವರು ಎಂಟು ವರ್ಷದ ಹಿಂದೆ ಭಟ್ಕಳದ ಜಾವೀದ್ ಮೊಹಿದ್ದೀನ್ ರುಕ್ನುದ್ದೀನ್ ಎಂಬವರನ್ನು ದುಬೈನಲ್ಲಿ ಮದುವೆಯಾಗಿದ್ದರು. 2014ರಲ್ಲಿ ಮೂರು ತಿಂಗಳ ಪ್ರವಾಸಿ ವೀಸಾದಲ್ಲಿ ಭಟ್ಕಳಕ್ಕೆ ಬಂದು ದುಬೈಗೆ ಮರಳಿದ್ದರು. 2015ರಲ್ಲಿ ಭಾರತಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಭಟ್ಕಳದ ನವಾಯತ ಕಾಲೊನಿಯಲ್ಲಿರುವ ಪತಿಯ ಮನೆಯಲ್ಲಿ ನೆಲೆಸಿದ್ದರು. ಅವರಿಗೆ ಮೂವರು ಮಕ್ಕಳಿದ್ದಾರೆ. ಮಹಿಳೆಯು ಸದ್ಯ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

## ಸುದ್ದಿ 2 ನಿಮಿಷ

### ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಜ್ಞಾನ ಪದವಿ ಕೋರ್ಸ್?

ಬೆಂಗಳೂರು: ರಾಜ್ಯದಲ್ಲಿ ಅತ್ಯುತ್ತಮ ಮೂಲಸೌಕರ್ಯಗಳಿರುವ 100 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಬಿ.ಎಸ್‌ಸಿ ಮಾದರಿಯಲ್ಲಿ ನಾಲ್ಕು ವರ್ಷಗಳ ವಿಜ್ಞಾನ ಕೋರ್ಸ್‌ಗಳನ್ನು ಬೋಧಿಸುವ ಕುರಿತು ಜುಲೈ ಅಂತ್ಯದೊಳಗೆ ನಿರ್ದಿಷ್ಟ ಕಾರ್ಯಸೂಚಿ ರೂಪಿಸುವಂತೆ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ತಿಮ್ಮೇಗೌಡ ಅವರಿಗೆ ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಸೂಚಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಹುಶಿಸ್ತೀಯ ಬೋಧನಾ ಕ್ರಮದಂತೆ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಜ್ಞಾನ ಕೋರ್ಸ್ ಬೋಧಿಸುವ ಕುರಿತು ಸಚಿವರು ಗುರುವಾರ ಅಧಿಕಾರಿಗಳು, ತಜ್ಞರ ಜತೆ ಸಮಾಲೋಚನೆ ನಡೆಸಿದರು.

'ಸಾಧ್ಯವಾದರೆ, ವಾರದಲ್ಲೇ ತಾತ್ಕಾಲಿಕ ವರದಿ ನೀಡಬೇಕು. ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನದ ಬೋಧನೆ ಕ್ರಮ ಕುರಿತೂ ಮಾಹಿತಿ ಪಡೆದು, ಲಭ್ಯವಿರುವ ಸೌಲಭ್ಯದಲ್ಲಿಯೇ ಸುಧಾರಣೆ ತರಲು ಸಾಧ್ಯವೇ ಎಂಬ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಬೇಕು' ಎಂದು ಸೂಚಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಈಗಾಗಲೇ ಸಂಪುಟ ಒಪ್ಪಿಗೆ ನೀಡಿದೆ. ಈ ವರ್ಷದಿಂದಲೇ ಕೋರ್ಸ್‌ಗಳನ್ನು ಬೋಧಿಸಲು ಸಾಧ್ಯವೇ ಎಂದು ಪರೀಶೀಲಿಸಬೇಕು. ಕಾನೂನು ತೊಡಕಿದ್ದರೆ ಸುಗ್ರೀವಾಜ್ಞೆ ಜಾರಿಗೆ ತರಬೇಕಾದ ಅಗತ್ಯ ಮತ್ತು ಗಣಿತ, ಅನ್ವಯಿಕ ವಿಜ್ಞಾನ ಸೇರಿ ಯಾವ ಕೋರ್ಸ್ ಅಳವಡಿಸಬೇಕು ಎಂಬ ಬಗ್ಗೆಯೂ ಚರ್ಚೆ ನಡೆಯಿತು.



## ಬಿಎಸ್‌ವೈ, ಹೈಕಮಾಂಡ್ ಎರಡೂ ದುರ್ಬಲ: ಸಿದ್ದರಾಮಯ್ಯ

ಬೆಂಗಳೂರು: 'ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಇಲ್ಲ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿದ್ದಾರೆ. ಆದರೆ, ಬೆಂಕಿ ಇಲ್ಲದೆ ಹೊಗೆಯಾಡುವುದಿಲ್ಲ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಗುರುವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯಡಿಯೂರಪ್ಪ ಅವರನ್ನು ಬದಲಿಸಿ ಎಂದು ನಾವ್ಯಾರೂ ಒತ್ತಾಯ ಮಾಡಿಲ್ಲ. ದೆಹಲಿಯಲ್ಲಿ ಈ ಬಗ್ಗೆ ಚರ್ಚೆ ನಡೆಯುತ್ತಿದೆ ಎಂದಷ್ಟೆ ಹೇಳಿದ್ದೆ. ಒಂದು ವೇಳೆ, ಮುಖ್ಯಮಂತ್ರಿ ಬದಲಾವಣೆ ಇಲ್ಲ ಎಂದಾದರೆ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ್, ಅರವಿಂದ ಬೆಲ್ಲದ್, ವಿಶ್ವನಾಥ್, ರೇಣುಕಾಚಾರ್ಯ, ಸಚಿವ ಯೋಗೀಶ್ವರ್ ವಿರುದ್ಧ ಬಿಜೆಪಿ ಹೈಕಮಾಂಡ್ ಏಕೆ ಕ್ರಮ ಕೈಗೊಂಡಿಲ್ಲ' ಎಂದು ಪ್ರಶ್ನಿಸಿದರು.

'ಬಿಜೆಪಿಯಲ್ಲಿ ಮುಖ್ಯಮಂತ್ರಿ ಮತ್ತು ಹೈಕಮಾಂಡ್ ಎರಡೂ ದುರ್ಬಲ. ನಾಯಕತ್ವ ಬದಲಾವಣೆ ಇಲ್ಲ ಎಂದಾದರೆ, ಬದಲಾವಣೆ ಆಗಬೇಕು ಎಂದವರ ವಿರುದ್ಧ ಏಕೆ ಕ್ರಮ ಇಲ್ಲ. ಇದರ ಸಂದೇಶವಾದರೂ ಏನು. ಯಡಿಯೂರಪ್ಪ ಅವರೇ ಕಳಪೆ ಮುಖ್ಯಮಂತ್ರಿ. ಇನ್ನು ಬೇರೆಯವರು ಹೇಗಿರಬೇಕು' ಎಂದೂ ಅವರು ವ್ಯಂಗ್ಯವಾಗಿ ಪ್ರಶ್ನಿಸಿದರು.

ಪ್ರಜಾವಾಣಿ facebook LIVE fb.com/prajavani.net
ಕಲಾವಿದರ ಬದುಕು ಕಸಿದ ಕೊರೊನಾ
ಚರ್ಚೆ ಭಾಗವಹಿಸುವವರು

ಮುಖ್ಯ ಮಂತ್ರಿ ಚಂದ್ರು, ರಂಗ ಭೂಮಿ ಮತ್ತು ಚಲನ ಚಿತ್ರನಟರು

ವೈ.ಕೆ.ಮುದ್ದುಕೃಷ್ಣ, ಗಾಯಕ ಮತ್ತು ಅಧ್ಯಕ್ಷರು, ಸುಗಮ ಸಂಗೀತ ಪರಿಷತ್

ಪ್ರವೀಣ್ ಡಿ. ರಾವ್ ಸಂಗೀತ ನಿರ್ದೇಶಕರು, ಸಂಯೋಜಕರು

ಕಾಸರಗೋಡು ಚಿನ್ನಾ ಮಾಜಿ ಅಧ್ಯಕ್ಷರು, ಕರ್ನಾಟಕ ಕೊಂಕಣಿ ಅಕಾಡೆಮಿ

ವಿದುಷಿ ವೀಣಾ ಮೂರ್ತಿ ವಿಜಯ್, ಭರತನಾಟ್ಯ, ಕೂಚುಪುಡಿ ನೃತ್ಯ ಗುರುಗಳು

ಶಶಿಧರ್ ಬಾರಿಘಾಟ್, ರಂಗ ನಿರ್ದೇಶಕರು ಮತ್ತು ನಾಟಕಕಾರರು

ಪಿ.ಕಿಶನ್ ಹೆಗ್ಡೆ ಸಾಲಿಗ್ರಾಮ ಸಹಿತ 5 ಮೇಳಗಳ ಮಾಲೀಕರು

ಜೋಗಿಲ ಸಿದ್ದರಾಜು ಜನಪದ ಗಾಯಕರು ಮತ್ತು ಜಾನಪದ ಸಂಘಟಕರು
ನಿರ್ವಹಣೆ: ಶ್ರೀನಿವಾಸ್ ಜಿ ಕಪ್ಪಣ್ಣ
13 ಜೂನ್ 2021 ಭಾನುವಾರ, ಸಂಜೆ 5 ಗಂಟೆಗೆ

ಪ್ರಜಾವಾಣಿ
ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..
ವಿಷ್ಣು ಅಭಿಮಾನಿಗಳಿಗೆ ಏಟು

ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ...
https://bit.ly/3gnfDi7

# ರಾಜ್ಯದ ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ, ಮಲೆನಾಡು ಭಾಗದಲ್ಲಿ ಗುರುವಾರ ಉತ್ತಮ ಮಳೆಯಾಗಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಂಗಳೂರು ನಗರ, ಬೆಳ್ತಂಗಡಿ, ಸುಳ್ಯ, ಪುತ್ತೂರು, ಮೂಡುಬಿದಿರೆ, ಬಂಟ್ವಾಳದಲ್ಲಿ ಬಿರುಸಿನ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ತರೀಕೆರೆ, ಶೃಂಗೇರಿ ಕಡೆ ಮಳೆ ಮುಂದುವರಿದಿದೆ. ತುಂಗಾ ನದಿಯ ನೀರಿನ ಹರಿವು ಸ್ವಲ್ಪ ಹೆಚ್ಚಾಗಿದೆ.

ಮಳೆಯಿಂದಾಗಿ ಕಾಫಿನಾಡಿನಲ್ಲಿ ಕೃಷಿ ಚಟುವಟಿಕೆ ಬಿರುಸುಗೊಂಡಿವೆ. ಅಡಿಕೆ ತೋಟಗಳಿಗೆ ಔಷಧಿ ಸಿಂಪಡಣೆ, ಗದ್ದೆ ಕೆಲಸಗಳಿಗೆ ರೈತರು ಮುಂದಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ 24 ಗಂಟೆಗಳಲ್ಲಿ 9.3 ಸೆಂ.ಮೀ ಮಳೆಯಾಗಿದೆ. ಕಾರವಾರದಲ್ಲಿ ನಾಲ್ಕು ಹಾಗೂ ಅಂಕೋಲಾದಲ್ಲಿ 3.9 ಸೆಂಟಿಮೀಟರ್‌ಗಳಷ್ಟು ಮಳೆ ಬಂದಿದೆ. ಸಿದ್ದಾಪುರ, ಅಂಕೋಲಾದಲ್ಲಿ ಮಳೆಯಾಗಿದೆ.

ಕೊಡಗು ಜಿಲ್ಲೆಯಲ್ಲಿ ಮಡಿಕೇರಿ, ಭಾಗಮಂಡಲ, ಸೋಮವಾರಪೇಟೆ, ಮದೆನಾಡು, ತಲಕಾವೇರಿ, ವ್ಯಾಪ್ತಿಯಲ್ಲಿ ಬಿರುಸಿನ ಮಳೆಯಾಗಿದೆ.

ಜೂನ್ 12ರಿಂದ 14ರ ತನಕ ಜಿಲ್ಲೆಯಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದ್ದು, ಅಪಾಯದ ಸ್ಥಳದಲ್ಲಿ ನೆಲೆಸಿರುವ ನಿವಾಸಿಗಳು ಎಚ್ಚರಿಕೆ ವಹಿಸಲು ಕೊಡಗು ಜಿಲ್ಲಾಡಳಿತ ಮನವಿ ಮಾಡಿದೆ.

ಮೈಸೂರಿನಲ್ಲಿ ಸಂಜೆ ಬಿರುಸಿನ ಮಳೆಯಾಗಿದೆ.

ಬೀದರ್ ನಗರ ಹಾಗೂ ಜಿಲ್ಲೆಯ ವಿವಿಧ ಭಾಗಗಳಲ್ಲಿ ಗುಡುಗು ಸಹಿತ ಮಳೆ ಸುರಿದಿದೆ.

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ, ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು – 560 015.
ದೂರವಾಣಿ : 080–29900992, ಇ–ಮೇಲ್ : dcf.buzp@yahoo.in
ಸಂಖ್ಯೆ: ಎ1/ಬಿಯುಡಿ/ಟೆಂಡರ್/ಸಿ.ಆರ್–01/2021–22 ದಿನಾಂಕ: 09.06.2021
ಇ–ಟೆಂಡರ್ ಪ್ರಕಟಣೆ
2021–22ನೇ ಸಾಲಿನಲ್ಲಿ ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗದ ವಿವಿಧ ವಲಯದಲ್ಲಿ ಸಾಮಾಜಿಕ ಯೋಜನೆಗಳಡಿ ಹೊಸ ಕಾಮಗಾರಿಗಳಾದ ಸಸಿಗಳನ್ನು ಬೆಳೆಸುವ ಹಾಗೂ ಮಾನ್‌ಸೂನ್ ನೆಡುತೋಪು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗದಲ್ಲಿ ನೋಂದಾಯಿತ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರುಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಮರು–ಟೆಂಡರ್ ಆಹ್ವಾನಿಸಲಾಗಿದೆ. ಮರು–ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 21.06.2021, ಸಂಜೆ 5.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 22.06.2021 ರ ಸಂಜೆ 5.00 ಗಂಟೆಗೆ. ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ 23.06.2021ರ ಸಂಜೆ 5.00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.inನಲ್ಲಿ ಮಾಹಿತಿಗಳನ್ನು ಪಡೆಯಬಹುದು.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು.
ವಾಸಾಸಂಇ/ಬೆಂ.ನ./ಜಿಎ/515/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
Ph/Fax: 08194-230102 E-Mail: eeubp.d5cta@gmail.com
ಸಂ.: ಕಾಇಂ/ವಿಜನಿನಿ/ಭಮೇಯೋ/ವಿ–5/ಚಿ/ಪ್ರಕೃತಿ ವಿಕೋಪ/ಟೆಂಡರ್/ತಿದ್ದುಪಡಿ–1/2021–22/179 ದಿನಾಂಕ: 07.06.2021
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ 1ನೇ ತಿದ್ದುಪಡಿ ಪ್ರಕಟಣೆ
ಈ ಕಛೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.: ಕಾಇಂ/ವಿಜನಿನಿ/ಭಮೇಯೋ/ವಿ–5/ಚಿ/ಪ್ರಕೃತಿ ವಿಕೋಪ/ಟೆಂಡರ್/2020–21/1680ರಿಂದ 1683 ದಿನಾಂಕ: 31.03.2021ರಲ್ಲಿ 04 ಕಾಮಗಾರಿಗಳ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. (ಇಂಡೆಂಟ್ ನಂ.: VJNL/2021-22/RT/WORK_INDENT1654, VJNL/2021-22/RT/WORK_INDENT1655, VJNL/2021-22/FP/WORK_INDENT1656, ಮತ್ತು VJNL/2021-22/FP/WORK_INDENT1657) ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್ ಪ್ರಕಟಣೆಯಲ್ಲಿನ ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಮಾರ್ಪಾಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯ ಮಾರ್ಪಾಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತಿವೆ. (1) ಆಕ್ಷೇಪಣೆ, ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 19.06.2021ರ ಸಂಜೆ 5:00 ಗಂಟೆಯವರೆಗೆ (2) ಪ್ರೀ–ಬಿಡ್ ಸಭೆಯ ದಿನಾಂಕ: 21.06.2021ರಂದು ಬೆಳಿಗ್ಗೆ 11:00 ಗಂಟೆಗೆ ಮುಖ್ಯ ಇಂಜಿನಿಯರ್, ವಿಜನಿನಿ, ಭಮೇಯೋ, ವಲಯ ಚಿತ್ರದುರ್ಗ ಕಛೇರಿಯಲ್ಲಿ ನಿಗದಿಪಡಿಸಲಾಗಿದೆ. (3) ಟೆಂಡರ್‌ನ್ನು ದಿನಾಂಕ: 23.06.2021ರಂದು ಸಂಜೆ 04:00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 24.06.2021ರಂದು ಸಂಜೆ 04:30 ಗಂಟೆ ನಂತರ ತೆರೆಯಲಾಗುವುದು. (5) ಆರ್ಥಿಕ ಬಿಡ್‌ನ್ನು "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" ತೆರೆಯಲಾಗುವುದು. ಉಳಿದ ಉಪ ವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಟೆಂಡರ್‌ನಲ್ಲಿನ ಮುಂದಿನ ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು http://eproc.karnataka.gov.in ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.
RO No. 165: DIPR/CTA/MCA/2021-22
ಸಹಿ/– ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ
Tel No.: 08338-275101 | E-Mail: ee.rdws.ckd@gmail.com.
ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು1&2:ಟೆಂಡರ್:2021–22/47/457 ದಿನಾಂಕ:07–06–2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW–3&4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ–ಪ್ರೊಕ್ಯೂರಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.
Indent No:-28784/Call-2, 28725/Call-2, 28253/Call-8, 28732/Call-2, 28272/Call-8, 28684/Call-3, 28280/Call-8, 28689/Call-3, 28666/Call-2, 28883/Call-3, 28895/Call-2, 28394/Call-4, 28397/Call-3, 28904/Call-2, 28399/call-4, 28790/call-3, 28402/Call-4, 28659/Call-4, 28299/Call-5, 28643/Call-4, 28735, 28683/Call-3, 28758, 28279/Call-5, 28416/Call-3, 28680/Call-3, 28681/Call-3, 28682/Call-3, 28840/Call-2, 28764, 28730, 28424/Call-4, 28763, 28755, 28678/Call-2, 28779/Call-2, 28886/Call-2, 28646/Call-3, 28703/Call-4, 28346/Call-2, 28717/Call-2, 28354/Call-2, 28356/Call-2, 28325/Call-2, 28358/Call-2, 28360/Call-2, 28797/Call-2,
ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇಪ್ರೊಕ್ಯೂರ್‌ಮೆಂಟ್ ಪ್ರೊಟಾಲ್ (Viz., http://eproc.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.
1) ಟೆಂಡರ ಪೂರ್ವಭಾವಿ ಸಭೆ:– 10–06–2021 ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ.
2) ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 15–06–2021 ಸಾಯಂಕಾಲ 4.00 ಘಂಟೆವರೆಗೆ.
3) ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 16–06–2021 ಸಂಜೆ 4.30 ಘಂಟೆ ನಂತರ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಗ್ರಾ.ಕು.ನೀ.&ನೈ. ವಿಭಾಗ, ಚಿಕ್ಕೋಡಿ.
DIPO/RO No. 162/2021-22

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ
ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.1
ಕಡೂರು 577548 ಚಿಕ್ಕಮಗಳೂರು(ಜಿ)
Email:eeubpdvn1@gmail.com
Phone-08267-295207
ಸಂಖ್ಯೆ:ಕಾಇಂ/ವಿಜನಿನಿ/ಭಮೇಯೋ/ವಿ.ನಂ–1/ಕಡೂರು/ಟೆ–5/ಹನಿ/2021–22/80 ದಿನಾಂಕ:08/06/2021
ಅಲ್ಪಾವಧಿ ಟೆಂಡರ್ ಪ್ರಕಟಣೆ :(ದ್ವಿಲಕೋಟೆ ಪದ್ದತಿ) (ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ
"Survey, Design, Supply, Installation, Testing and Commissioning of Micro Irrigation System under Tumkur Branch Canal comprising Gravity Bulk Feeders, Construction of Sump cum Pump house,Supplying and installation of Pumping machineries, Terminal Bay, Electrical substation, Electrical powerline and other appurtenant works including construction of Pipe Distribution Network and Automated drip irrigation system for providing irrigation facility coming under Tumkur Branch Canal of Upper Bhadra Project with all accessories Operation and Maintenance for 5 years after the date of completion and transfer (BOMT) on Turnkey basis"
1) 12,475 Ha under Block 1, Block 2 and filling up of 34 Nos. tanks (T.B.C Drip Package - 1)
2) 15,115 Ha under Block 3 and filling up of 62 Nos. tanks (T.B.C Drip Package - 2)
ಮೇಲಿನ ಕಾಮಗಾರಿಗಳಿಗೆ ದ್ವಿಲಕೋಟೆ ಪದ್ದತಿ ಮೂಲಕ ವಿಜನಿನಿ ಕೆಟಗೇರಿ–1 ಗುತ್ತಿಗೆದಾರರಿಂದ ಶೇಕಡಾವಾರು ಟರ್ನ ಕೀ ಆಧಾರದ ಮೇಲೆ ಟೆಂಡರ್ ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 09.06.2021 ರಿಂದ ಡೌನ್ ಲೋಡ್ ಮಾಡಬಹುದು. ಟೆಂಡರ್ ಬಗ್ಗೆ ವಿವರಣೆ/ಮಾಹಿತಿ/ಸ್ಪಷ್ಟೀಕರಣ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೋರಲು ಕೊನೆ ದಿನಾಂಕ:11.06.2021ರ 16.00 ಗಂಟೆಗೆ ಹಾಗೂ ಪ್ರೀ ಬಿಡ್ ಸಭೆಯ ದಿನಾಂಕ :14.06.2021 ರಂದು 15.00 ಗಂಟೆಗೆ ವ್ಯವಸ್ಥಾಪಕ ನಿರ್ದೇಶಕರು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಕಛೇರಿಯಲ್ಲಿ ನಿಗಧಿಪಡಿಸಿದೆ. ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ / ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ:21.06.2021 ರ 15.00 ಗಂಟೆಯವರೆಗೆ ಸಂಪರ್ಕಿಸಬಹುದು. ಟಿಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.06.2021 ರಂದು 16.30 ಗಂಟೆಯ ವರೆಗೆ ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ 22.06.2021 ರಂದು 16.30 ಗಂಟೆಯ ನಂತರ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.1 ಕಡೂರು ರವರ ಕಛೇರಿಯಲ್ಲಿ ತೆರೆಯಲಾಗುವುದು.
ಸೂಚನೆ : ಈ ಕಛೇರಿಯಿಂದ ಹಿಂದೆ ಪ್ರಕಟಿಸಿರುವ ಟೆಂಡರ್ ಅಧಿಸೂಚನೆ ಪ್ರಕಟಣೆ ಸಂಖ್ಯೆ 71 ದಿನಾಂಕ : 24.05.2021 ರ ಟೆಂಡರನ್ನು ರದ್ದುಗೊಳಿಸಲಾಗುತ್ತದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್,

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ
"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102.
ದೂರವಾಣಿ: (08472) –256767, 239556, 255564, ಫ್ಯಾಕ್ಸ್: (08472)227527
ಸಂಖ್ಯೆ: KKRDB/TECH/168/2021-22/ ದಿನಾಂಕ:09–06–2021
:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರಮೆಂಟ್ ಮುಖಾಂತರ)
1) ಕಾಮಗಾರಿಯ ಹೆಸರು : Supply of 9 (Nine) Advanced Life Support (ALS) Ambulances to Kalyana Karnataka Region Development Board for Covid-19 Call-2, 2) ಲೆಕ್ಕ ಶೀರ್ಷಿಕೆ: KKRDB ನಿಧಿ, 3) ಗುತ್ತಿಗೆದಾರರ ಅರ್ಹತೆ : ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ ಇದ್ದಂತೆ, 4) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ : 09–06–2021, 5) ಪ್ರಿ–ಬಿಡ್ ಸಭೆ ದಿನಾಂಕ (Online Mode) : 11–06–2021 ಮಧ್ಯಾಹ್ನ 12.00ಕ್ಕೆ 6) ಕ್ಯಾರೀಸ್ ಸಲ್ಲಿಸುವ ದಿನಾಂಕ : 10–06–2021 ಸಂಜೆ 5.00 ವರೆಗೆ, 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 19–06–2021 ಸಂಜೆ 5.00 ವರಗೆ, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21–06–2021 ಬೆಳಿಗ್ಗೆ 11.00ಕ್ಕೆ, 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : 22–06–2021 ಬೆಳಿಗ್ಗೆ 11.00ಕ್ಕೆ, 10) ಟೆಂಡರ್ ಅರ್ಜಿ ಬೆಲೆ : ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ, 11) ಇ.ಎಂ.ಡಿ.ಮೊತ್ತ : ರೂ. 5,00,000/–, 12) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : https://eproc.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬುರಗಿ ರಲ್ಲಿ ಸಂಪರ್ಕಿಸಬಹುದು, 13) ಅಂತರ್‌ಜಾಲ ತಾಣದ ವಿಳಾಸ : https://eproc.karnataka.gov.in, 14) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://eproc.karnataka.gov.in ಕ್ಕೆ ಸಂಪರ್ಕಿಸಬಹುದು.
ಸಹಿ/– ಕಾರ್ಯದರ್ಶಿಗಳು
ಕ.ಕ.ಪ್ರ.ಅ. ಮಂಡಳಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/265/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಎಫ್.ಕೆ.ಸಿ.ಸಿ.ಐ, ಕಟ್ಟಡ, ಫೆಡರೇಶನ್ ಹೌಸ್, 3 ನೇ ಮಹಡಿ. ಕೆ.ಜಿ. ರಸ್ತೆ, ಬೆಂಗಳೂರು.560009.
ದೂರವಾಣಿ: 080–22352044, ಮಿಂಚಂಚೆ–kbada6666@gmail.com,
ಅಂತರ್ಜಾಲ: https://kbada.karnataka.gov.in/
ಸಂ.: ಕಗಪ್ರಅಪ್ರಾ/ಆ/2021–22 ದಿನಾಂಕ: 10.06.2021
2021–22ನೇ ಸಾಲಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವಿವಿಧ ಯೋಜನೆಗಳಿಗೆ ಅರ್ಹ ಕನ್ನಡ ಸರ್ಕಾರಿ ಶಾಲೆ / ಖಾಸಗಿ ಶಾಲೆ / ಕನ್ನಡ ಪರ ಸಂಘ / ಸಂಸ್ಥೆಗಳಿಂದ ಮತ್ತು ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಜಿಗಳನ್ನು ಆಹ್ವಾನಿಸಲು ಉದ್ದೇಶಿಸಿರುವ ಪ್ರಮುಖ ಯೋಜನೆಗಳ ವಿವರ ಈ ಕೆಳಕಂಡಂತಿವೆ.
ಕರ್ನಾಟಕ ರಾಜ್ಯದ 63 ಗಡಿ ತಾಲ್ಲೂಕುಗಳ ಹಾಗೂ ಹೊರ ರಾಜ್ಯಗಳಲ್ಲಿನ ಕನ್ನಡ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯಾ ಸರ್ಕಾರಗಳಿಂದ ಅನುಮತಿ ಪಡೆದ ಕನ್ನಡ ಮಾಧ್ಯಮದ ಸರ್ಕಾರಿ / ಖಾಸಗಿ ಶಾಲಾ / ಕಾಲೇಜುಗಳಿಗೆ – ಶಾಲಾ ಕೊಠಡಿಗಳು, ಗ್ರಂಥಾಲಯಗಳು, ಶೌಚಾಲಯಗಳು ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸರ್ಕಾರದಲ್ಲಿ ನೊಂದಾಯಿತವಾಗಿ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿರುವ ಕನ್ನಡ ಪರ ಸಂಘ / ಸಂಸ್ಥೆಗಳಿಂದ ಗಡಿ ಭಾಗದಲ್ಲಿ ವಿವಿಧ ರೀತಿಯ ಸಾಂಸ್ಕೃತಿಕ ಉತ್ಸವಗಳನ್ನು ಹಾಗೂ ಶೈಕ್ಷಣಿಕ ಯೋಜನೆಗಳಿಗೆ ಪ್ರಾಧಿಕಾರದ ಆರ್ಥಿಕ ಇತಿಮಿತಿಯಲ್ಲಿ ಅನುದಾನವನ್ನು ನೀಡಲಾಗುವುದು. ಅರ್ಹ ಸಂಘ / ಸಂಸ್ಥೆಗಳು ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:05.07.2021 ಆಗಿರುತ್ತದೆ. ಅರ್ಜಿಗಳನ್ನು ಆಹ್ವಾನಿಸಲಾದ ಪ್ರಾಧಿಕಾರದ ಯೋಜನೆಗಳ ಬಗ್ಗೆ ಪೂರ್ಣ ವಿವರಗಳನ್ನು ಅಂತರ್ಜಾಲ https://kbada.karnataka.gov.in/ ದಲ್ಲಿ ಪಡೆದುಕೊಳ್ಳುವುದು. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ದಿನಾಂಕವನ್ನು ಮುಂದೆ ವಿಸ್ತರಿಸಿದಲ್ಲಿ ಪ್ರಾಧಿಕಾರದ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.
ಸಹಿ/–
ಕಾರ್ಯದರ್ಶಿ,
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ವಾಸಾಸಂಇ/ಬೆಂನ/518/ಅಲಕ್‌ನಂದ/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅದಿತಿ ಪ್ರಭುದೇವ

# ಚಂದನವನದಲ್ಲೇ ಅದಿತಿಗೆ ಕೈತುಂಬಾ ಅವಕಾಶ

ಚಂದನವನದಲ್ಲಿ ಪ್ರಸ್ತುತ ಕನ್ನಡತಿಯರದ್ದೇ ದರ್ಬಾರ್. ಇಂತಹ ನಟಿಯರ ಪೈಕಿ ನಾಲ್ಕೈದು ವರ್ಷಗಳ ಹಿಂದಷ್ಟೇ ಚಿತ್ರರಂಗಕ್ಕೆ ಕಾಲಿಟ್ಟ ನಟಿ ಅದಿತಿ ಪ್ರಭುದೇವ ಕೂಡಾ ಇದ್ದಾರೆ. ಅವರ ಕೈಯಲ್ಲಿ ಪ್ರಸ್ತುತ ಏಳೆಂಟು ಚಿತ್ರಗಳಿದ್ದು, ಬಹುನಿರೀಕ್ಷೆಯ ‘ತೋತಾಪುರಿ’ ಚಿತ್ರದ ಎರಡೂ ಭಾಗದ ಚಿತ್ರೀಕರಣ ಪೂರ್ಣಗೊಂಡಿದೆ. ‘ಆನ’ ಚಿತ್ರದಲ್ಲಿ ಸೂಪರ್ ವುಮನ್ ಆಗಿ, ‘5ಡಿ’ ಚಿತ್ರದಲ್ಲಿ ಆಟೊ ಚಾಲಕಿಯಾಗಿ ವಿಭಿನ್ನ ಪಾತ್ರಗಳಿಗೆ ಬಣ್ಣಹಚ್ಚಲು ಲಾಕ್‌ಡೌನ್ ಯಾವಾಗ ಮುಗಿಯುತ್ತದೆ ಎಂದು ಕಾಯುತ್ತಿರುವ ಅದಿತಿ, ತಮ್ಮ ಸಿನಿ ಪಯಣವನ್ನು ‘ಸಿನಿಮಾ ಪುರವಣಿ’ ಜೊತೆಗೆ ಹಂಚಿಕೊಂಡರು.

ಸಂದರ್ಶನ

**ಅಭಿಲಾಷ್ ಪಿ.ಎಸ್.**

- **ಹೇಗಿದೆ ಲಾಕ್‌ಡೌನ್ ಅನುಭವ. ಕುಟುಂಬದ ಕೆಲ ಸದಸ್ಯರಿಗೆ ಕೋವಿಡ್ ಬಂದಾಗ ಹೇಗೆ ಅದನ್ನು ಎದುರಿಸಿದಿರಿ?**

ಕೋವಿಡ್ ಎನ್ನುವುದು ದೈಹಿಕ ಆರೋಗ್ಯದ ಮೇಲೆ ಎಷ್ಟು ಪರಿಣಾಮ ಬೀರುತ್ತದೆಯೋ ಅಷ್ಟೇ ಮನಸ್ಸಿನ ಮೇಲೂ ಪರಿಣಾಮ ಬೀರುತ್ತದೆ. ದೇಹ ಮತ್ತು ಮನಸ್ಸಿನ ಮೇಲೆ ಇದರ ಪರಿಣಾಮ 50–50 ಎನ್ನಬಹುದು. ನಮ್ಮ ಕುಟುಂಬದ ಸದಸ್ಯರಿಗೆ ಮಾನಸಿಕ ಸ್ಥೈರ್ಯ ಹೆಚ್ಚಾಗಿತ್ತು. ಯಾರೂ ಧೃತಿಗೆಡಲಿಲ್ಲ. ಆದರೂ ಸಣ್ಣಮಟ್ಟಿನ ಭಯವಿತ್ತು. ನಮ್ಮದು ಆರೋಗ್ಯಕರ ಆಹಾರ ಹಾಗೂ ಜೀವನ ಪದ್ಧತಿ ಇದ್ದ ಕಾರಣ ಹೆಚ್ಚಿನ ತೊಂದರೆಯಾಗಿಲ್ಲ. ಈ ಕಾಯಿಲೆ ವಿರುದ್ಧ ಹೆದರಿ ಹೋರಾಟ ಮಾಡುವುದಕ್ಕಿಂತ ಆತ್ಮಸ್ಥೈರ್ಯದಿಂದ, ಪ್ರಜ್ಞಾವಂತರಾಗಿ ಎದುರಿಸುವುದು ಮುಖ್ಯ. ಈ ಸಮಯದಲ್ಲಿ ಒಬ್ಬರಿಗೊಬ್ಬರು ನೆರವಾಗಿ ನಿಂತುಕೊಳ್ಳುವುದು ಮುಖ್ಯ. ಈ ಲಾಕ್‌ಡೌನ್‌ನಲ್ಲೂ ನಾನೂ ಇದೇ ಕಾರ್ಯದಲ್ಲಿ ನಿರತಳಾಗಿದ್ದೆ. ನನಗೆ ತಿಳಿದಿದ್ದವರು, ಸಹಾಯ ಕೇಳಿ ಬಂದಾಗ ಕೈಲಾದಷ್ಟು ಸಹಾಯ ಮಾಡಿದ್ದೇನೆ. ಜೊತೆಗೆ ವೈಯಕ್ತಿಕ ಆರೋಗ್ಯದತ್ತ ಹೆಚ್ಚಿನ ಗಮನಹರಿಸಿದ್ದೇನೆ ಹಾಗೂ ಇರುವ ಹವ್ಯಾಸವನ್ನು ಒರೆಹಚ್ಚಿದ್ದೇನೆ.

- **ಚಂದನವನಕ್ಕೆ ಕಾಲಿಟ್ಟು ನಾಲ್ಕೈದು ವರ್ಷವಾಗಿದೆ. ಇಲ್ಲಿಯವರೆಗಿನ ಸಿನಿ ಪಯಣ ಹೇಗಿತ್ತು?**

ಯಾವುದೇ ಕ್ಷೇತ್ರದಲ್ಲಿ ಪುಟ್ಟ ಹೆಜ್ಜೆಗಳನ್ನು ಇಟ್ಟು ಸಾಗುತ್ತಿರುವಾಗ ಸಂಕಷ್ಟಗಳು ಎದುರಾಗುವುದು ಸಹಜ. ಯಾವುದೇ ಕೆಲಸವಿರಲಿ ಅದನ್ನು ಶ್ರದ್ಧೆಯಿಂದ, ಪರಿಶ್ರಮದಿಂದ ಮಾಡುವುದು ನನ್ನ ಅಭ್ಯಾಸ. ಚಿತ್ರೀಕರಣದ ದಿನಗಳಲ್ಲಿ ನಾನು ಸೆಟ್‌ಗೆ ತಡವಾಗಿ ಹೋಗುತ್ತಿರಲಿಲ್ಲ, ಸಂಜೆ 6ಕ್ಕೆ ಹೋಗಬೇಕು ಎಂದು ಪಟ್ಟುಹಿಡಿದದ್ದಿಲ್ಲ. ಹಲವು ಚಿತ್ರಗಳನ್ನು ಒಪ್ಪಿಕೊಂಡಿದ್ದರೂ ಚಿತ್ರೀಕರಣದ ದಿನಗಳ ನಡುವೆ ಗೊಂದಲ, ಸಮಸ್ಯೆ ಇಲ್ಲಿಯವರೆಗೂ ಆಗಿಲ್ಲ. ಇದರಲ್ಲಿ ನಾನು ಅದೃಷ್ಟವಂತೆ. ಅದಕ್ಕಿಂತ ಮಿಗಿಲಾಗಿ ಇಲ್ಲಿಯವರೆಗೂ ಒಳ್ಳೆಯ ತಂಡಗಳ ಜೊತೆಯೇ ಕಾರ್ಯನಿರ್ವಹಿಸಿದ್ದೇನೆ. ಕಷ್ಟಪಟ್ಟು ಕಾರ್ಯನಿರ್ವಹಿಸಿದರೂ ಮಾನಸಿಕ ನೆಮ್ಮದಿ ಇದೆ. ಈ ಕೋವಿಡ್ ಪಿಡುಗು ಬಂದ ನಂತರ ನನ್ನ ಸಿನಿ ಪಯಣದ ಎರಡು ಅದ್ಭುತ ವರ್ಷಗಳನ್ನು ಕಳೆದುಕೊಂಡಿದ್ದೇನೆ ಎನಿಸುತ್ತಿದೆ. ಸಿನಿಮಾ ಕ್ಷೇತ್ರಕ್ಕೆ ಅತಿ ದೊಡ್ಡ ಹೊಡೆತವನ್ನು ಈ ಕೋವಿಡ್ ನೀಡಿದೆ.

- **ಸದ್ಯಕ್ಕೆ ಏಳೆಂಟು ಸಿನಿಮಾಗಳು ಕೈಯಲ್ಲಿವೆ. ಮೂರ್ನಾಲ್ಕು ಚಿತ್ರಗಳ ಚಿತ್ರೀಕರಣ ಮುಗಿದಿದೆ. ಇದನ್ನು ನಿರೀಕ್ಷಿಸಿದ್ರಾ?**

ಖಂಡಿತವಾಗಿಯೂ ಇಲ್ಲ. ಬಂದಂತಹ ಅವಕಾಶಗಳನ್ನು ಒಪ್ಪಿಕೊಂಡು ಕೆಲಸ ಮಾಡುತ್ತಾ ಹೋದೆ. ಪ್ರತಿ ಸಿನಿಮಾವೂ ಹಿಂದಿನ ಸಿನಿಮಾಗಳ ಜೊತೆಗೆ ಸಂಪರ್ಕ ಹೊಂದಿದೆ. ಉದಾಹರಣೆಗೆ ಒಂದು ಸಿನಿಮಾದ ನಿರ್ದೇಶಕರೇ ನನ್ನನ್ನು ಮತ್ತೊಂದು ಸಿನಿಮಾಗೆ ರೆಫರ್ ಮಾಡಿರುತ್ತಾರೆ. ಅವಕಾಶವನ್ನು ನಾನು ಹುಡುಕಿಕೊಂಡು ಹೋಗುವ ಪ್ರಮೇಯವೇ ಬಂದಿಲ್ಲ. ‘ಅದಿತಿ ನಮ್ಮನೆ ಹುಡ್ಗಿ ಇದ್ದಂಗಪ್ಪ, ತಗೋಳೋಣಾ’ ಎನ್ನುವಷ್ಟು ಅವಕಾಶಗಳು ಹುಡುಕಿಕೊಂಡು ಬಂದಿವೆ. ಇದನ್ನು ಉಳಿಸಿಕೊಂಡು ಹೋಗುವುದು ದೊಡ್ಡ ಜವಾಬ್ದಾರಿ ಎನಿಸುತ್ತಿದೆ. ಇಷ್ಟು ಪ್ರೀತಿ, ನಂಬಿಕೆ ಇರಿಸಿಕೊಂಡಾಗ ಭಯವೂ ಆಗುತ್ತದೆ. ನಾನು ಮನೆಯಲ್ಲಿ ಹೇಗಿರುತ್ತೇನೆ, ಸೆಟ್‌ನಲ್ಲೂ ಅದೇ ರೀತಿ ಇರುತ್ತೇನೆ. ಬಹಳ ಖುಷಿಯಲ್ಲಿದ್ದೇನೆ.

- **ಜಗ್ಗೇಶ್ ಅವರ ಜೊತೆಗಿನ ‘ತೋತಾಪುರಿ’ ಸಿನಿಮಾ ಮೇಲೆ ಬಹಳಷ್ಟು ನಿರೀಕ್ಷೆ ಇದೆ ಅಲ್ಲವೇ?**

ಎರಡು ಭಾಗಗಳಲ್ಲಿ ಈ ಚಿತ್ರವು ತೆರೆ ಕಾಣಲಿದ್ದು, ಲಾಕ್‌ಡೌನ್‌ಗಿಂತ ಸ್ವಲ್ಪ ಮುಂಚೆಯಷ್ಟೇ ಎರಡೂ ಭಾಗಗಳ ಚಿತ್ರೀಕರಣ ಮುಗಿಸಿದ್ದೆವು. ಜಗ್ಗೇಶ್ ಅವರ ಚಿತ್ರವನ್ನು ಚಿಕ್ಕಂದಿನಿಂದಲೇ ನೋಡಿಕೊಂಡು ಬಂದವರು ನಾವು. ಯಾರದೇ ಮನೆಯಾಗಲಿ ಅಲ್ಲಿ ಜಗ್ಗೇಶ್ ಅವರ ಸಿನಿಮಾ ಟಿ.ವಿಯಲ್ಲಿ ಬಂದಾಗ ಖಂಡಿತವಾಗಿಯೂ ಚಾನೆಲ್ ಬದಲಾಯಿಸುವುದಿಲ್ಲ. ಕೆಲವು ಕಲಾವಿದರಿಗೆ ಸರಸ್ವತಿ ಪೂರ್ಣವಾಗಿ ಒಲಿದುಬಂದಿರುತ್ತಾಳೆ. ಅಂತಹ ಕಲಾವಿದರಲ್ಲಿ ಜಗ್ಗೇಶ್ ಅವರೂ ಒಬ್ಬರು. ಸಿನಿಮಾ ಮುಖಾಂತರ ಜನರಿಗೆ ಸಂದೇಶ ನೀಡುವ ರೀತಿಯು ಒಬ್ಬೊಬ್ಬ ನಿರ್ದೇಶಕರಿಗೂ ವಿಭಿನ್ನವಾಗಿರುತ್ತದೆ. ‘ನೀರ್‌ದೋಸೆ’ಯ ವಿಜಯ್ ಪ್ರಸಾದ್–ಜಗ್ಗೇಶ್ ಜೋಡಿ ಇದೀಗ ಈ ಸಿನಿಮಾದಲ್ಲಿ ಒಂದಾಗಿದ್ದು, ಇವರದೇ ವಿಶಿಷ್ಟ ಶೈಲಿಯಲ್ಲಿ ಸಂದೇಶ ನೀಡಿದ್ದಾರೆ. ಚಿತ್ರರಂಗದಲ್ಲಿರುವ ಅರ್ಧದಷ್ಟು ಹಿರಿಯ ಕಲಾವಿದರು ಈ ಚಿತ್ರದಲ್ಲಿದ್ದಾರೆ. ಈ ಅನುಭವದ ಲಾಭವನ್ನು ನಾನು ಪಡೆದಿದ್ದೇನೆ.

ಚಿತ್ರದ ಡಬ್ಬಿಂಗ್‌ಗೆ ಹೋದ ಸಂದರ್ಭದಲ್ಲಿ ನನಗೆ ನಾನು ಡಬ್ಬಿಂಗ್ ಮಾಡುತ್ತಿದ್ದೇನೆ ಎಂದು ಅನಿಸಲೇ ಇಲ್ಲ. ಬೇರೆ ಯಾರಿಗೋ ನಾನು ಧ್ವನಿ ನೀಡುತ್ತಿದ್ದೇನೆ ಎನ್ನುವ ಅನುಭವ ನನಗೆ ಮೊದಲ ಬಾರಿ ಆಯಿತು. ‘ಶಕೀಲ ಬಾನು’ ಎನ್ನುವ ಪಾತ್ರವನ್ನು ಈ ಚಿತ್ರದಲ್ಲಿ ನಾನು ಮಾಡುತ್ತಿದ್ದೇನೆ. ಮುಸ್ಲಿಂ ಪಾತ್ರವಾದರೂ ಶುದ್ಧವಾದ ಕನ್ನಡವನ್ನೇ ಆಕೆ ಮಾತನಾಡುತ್ತಾಳೆ. ಇತರೆ ಚಿತ್ರದಲ್ಲಿ ನಿಜಜೀವನದ ಅದಿತಿ ಪ್ರಭುದೇವ ನನ್ನ ಪಾತ್ರದಲ್ಲಿ ಒಂದೆರಡು ಕಡೆ ಕಾಣಿಸಿಕೊಂಡಿದ್ದಿದೆ. ಆದರೆ ‘ತೋತಾಪುರಿ’ಯಲ್ಲಿ ನನ್ನ ಹಾವಭಾವವೇ ಬದಲಾಗಿದೆ. ಹೀಗಾಗಿ ಡಬ್ಬಿಂಗ್ ವೇಳೆ ವಿಭಿನ್ನ ಅನುಭವವಾಯಿತು.

- **ವಿಭಿನ್ನ ಪಾತ್ರಗಳೇ ಅದಿತಿ ಅವರನ್ನು ಅರಸಿಕೊಂಡು ಬರುತ್ತಿವೆಯೇ?**

ಸಿನಿ ಪಯಣದ ಆರಂಭದ ಕಾಲದಲ್ಲಿ ಸೂಪರ್‌ಸ್ಟಾರ್ ಜೊತೆ ಸಿನಿಮಾ ಮಾಡಬೇಕು, ದೊಡ್ಡ ನಿರ್ದೇಶಕರ ಜೊತೆ ಸಿನಿಮಾ ಮಾಡಬೇಕು ಎಂದು ತಲೆಯಲ್ಲಿತ್ತು. ಬಹುತೇಕ ಎಲ್ಲ ಕಲಾವಿದರಿಗೂ ಇಂತಹ ಆಸೆ ಇರುತ್ತದೆ. ಆದರೆ, ಚಿತ್ರರಂಗವನ್ನು ಆಳವಾಗಿ ನೋಡಿದಾಗ ಅದು ಹೊಸ ನಟರಾಗಿರಲಿ, ನಿರ್ದೇಶಕರಾಗಿರಲಿ ಒಬ್ಬ ಕಲಾವಿದ ಎಷ್ಟು ಆಗುತ್ತದೆಯೋ ಅಷ್ಟು ಪಾತ್ರವನ್ನು ಮಾಡುವ ಪ್ರಯತ್ನ ಮಾಡಬೇಕು ಎಂದೆನಿಸಿತು. ‘ಆನ’ ಚಿತ್ರದಲ್ಲಿ ಯುವ ನಿರ್ದೇಶಕರ ಜೊತೆ ಅದೇ ‘5ಡಿ’ ಚಿತ್ರದಲ್ಲಿ ಹಿರಿಯ ನಿರ್ದೇಶಕರಾದ ಎಸ್.ನಾರಾಯಣ್ ಅವರ ಜೊತೆ ಕಾರ್ಯನಿರ್ವಹಿಸುತ್ತಿದ್ದೇನೆ. ಸಿಗುತ್ತಿರುವ ಪ್ರತಿ ಪಾತ್ರವೂ ನನಗೆ ಹೊಂದಿಕೊಳ್ಳುತ್ತಿದೆ. ವಿಭಿನ್ನವಾದ ಪಾತ್ರದ ಆಫರ್ ಬರುವುದೇ ದೊಡ್ಡ ಪ್ರೋತ್ಸಾಹ ಎಂದುಕೊಂಡಿದ್ದೇನೆ.

ಇತರೆ ಭಾಷೆಗಳ ಸಿನಿಮಾಗಳಿಂದಲೂ ಅವಕಾಶಗಳು ಬಂದಿವೆ. ಆದರೆ ಚಂದನವನದಲ್ಲೇ ಹೆಚ್ಚಿನ ಅವಕಾಶ ಇರುವುದರಿಂದ ಸದ್ಯಕ್ಕೆ ಪರಭಾಷಾ ಚಿತ್ರಗಳನ್ನು ಒಪ್ಪಿಕೊಂಡಿಲ್ಲ. ಪ್ರತಿ ಬಾರಿ ಹಣವೇ ಮುಖ್ಯ ಆಗುವುದಿಲ್ಲ. ನನ್ನನ್ನು ನಂಬಿ ಇಲ್ಲಿ ಕೆಲಸ ನೀಡಿರುವಾಗ ಚಂದನವನ ಬಿಟ್ಟು ಹೋಗುವುದಿಲ್ಲ. ಕೈಯಲ್ಲಿರುವ ಸಿನಿಮಾಗಳನ್ನೇ ಪೂರ್ಣಗೊಳಿಸುವುದರತ್ತ ನನ್ನ ಚಿತ್ತವಿದೆ. ❖

## ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ‘777 ಚಾರ್ಲಿ’ ತೆರೆಗೆ

ನಟ ರಕ್ಷಿತ್ ಶೆಟ್ಟಿ ಜನ್ಮದಿನದಂದು ಬಿಡುಗಡೆಯಾದ ‘777 ಚಾರ್ಲಿ’ ಟೀಸರ್ ‘ಲೈಫ್ ಆಫ್ ಚಾರ್ಲಿ’ ಯೂಟ್ಯೂಬ್‌ನಲ್ಲಿ ಹೊಸ ದಾಖಲೆ ಬರೆದಿದೆ. ಐದು ಭಾಷೆಗಳಲ್ಲಿ ತೆರೆ ಕಾಣಲಿರುವ ಈ ಚಿತ್ರದ ಟೀಸರ್ ಅನ್ನು ಪ್ರತಿ ಭಾಷೆಯಲ್ಲೂ 50 ಲಕ್ಷಕ್ಕೂ ಅಧಿಕ ವ್ಯೂವ್ಸ್ ಪಡೆದಿದೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ಚಿತ್ರದ ಬಿಡುಗಡೆಗೆ ಚಿತ್ರತಂಡ ಸಿದ್ಧತೆ ನಡೆಸಿದೆ.

‘ಈ ಚಿತ್ರದ ಅನುಭವವನ್ನು ಚಿತ್ರಮಂದಿರದಲ್ಲೇ ವೀಕ್ಷಕರಿಗೆ ನೀಡಬೇಕು’ ಎಂದಿರುವ ರಕ್ಷಿತ್ ಶೆಟ್ಟಿ, ಬಿಡುಗಡೆ ದಿನಾಂಕ ನಿಗದಿ ಹಾಗೂ ಐದು ಭಾಷೆಗಳಲ್ಲೂ ವಿತರಕರು ಅಂತಿಮಗೊಂಡ ಬಳಿಕವಷ್ಟೇ ಟ್ರೇಲರ್ ಬಿಡುಗಡೆಗೊಳಿಸುವುದಾಗಿ ತಿಳಿಸಿದ್ದಾರೆ. ಜಿ.ಎಸ್.ಗುಪ್ತ ಹಾಗೂ ರಕ್ಷಿತ್ ಶೆಟ್ಟಿ ಚಿತ್ರದ ನಿರ್ಮಾಪಕರಾಗಿದ್ದಾರೆ. ಸಂಗೀತಾ ಶೃಂಗೇರಿ ಚಿತ್ರದ ನಾಯಕಿ. ನಟ, ನಿರ್ದೇಶಕ ರಾಜ್ ಬಿ.ಶೆಟ್ಟಿ, ಡ್ಯಾನಿಶ್ ಸೇಟ್ ತಾರಾಗಣದಲ್ಲಿದ್ದಾರೆ.

‘ಟೀಸರ್‌ಗೆ ಬಹಳಷ್ಟು ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಬೇರೆ ರಾಜ್ಯಗಳಿಂದಲೂ ಹಲವು ವಿತರಕರು ಕರೆ ಮಾಡಿ ವಿಚಾರಿಸುತ್ತಿದ್ದಾರೆ. ಈ ಚಿತ್ರದ ನಿಜವಾದ ಹೀರೋ ನಿರ್ದೇಶಕ ಕಿರಣ್‌ರಾಜ್. ಅವರ ಬದ್ಧತೆ, ಆಸಕ್ತಿ, ಪರಿಶ್ರಮವೇ ಇಂದು ಈ ಸಿನಿಮಾವನ್ನು ಮಾಡಿದೆ. ಒಂದು ಪ್ರಾಣಿಯನ್ನು ಇಟ್ಟುಕೊಂಡು ಚಿತ್ರೀಕರಣ ನಡೆಸುವುದು ಸುಲಭವಲ್ಲ. ಚಿತ್ರದಲ್ಲಿ ಎರಡು ಚಾರ್ಲಿ ಇದ್ದು, ಇವುಗಳಿಗೆ ಮೈಸೂರಿನ ಪ್ರಮೋದ್ ತರಬೇತಿ ನೀಡಿದ್ದಾರೆ. ಪ್ರತಿ ದೃಶ್ಯಕ್ಕೂ 30–40 ಟೇಕ್ ಸಾಮಾನ್ಯವಾಗಿತ್ತು. ಇದು ಸವಾಲಿನಿಂದ ಕೂಡಿತ್ತು’ ಎಂದು ಚಿತ್ರೀಕರಣದ ಅನುಭವ ಹಂಚಿಕೊಳ್ಳುತ್ತಾರೆ ರಕ್ಷಿತ್ ಶೆಟ್ಟಿ.

ಸಿನಿ ಸಂಕ್ಷಿಪ್ತ

ಡಾರ್ಲಿಂಗ್ ಕೃಷ್ಣ ಹಾಗೂ ಸೋನಾಲ್ ಮಾಂಟೆರೊ

## ಡಾರ್ಲಿಂಗ್ ಕೃಷ್ಣ ಜನ್ಮದಿನಕ್ಕೆ ‘ಶುಗರ್ ಫ್ಯಾಕ್ಟರಿ’ ಟೀಸರ್

ನಟ ಡಾರ್ಲಿಂಗ್ ಕೃಷ್ಣ ಅವರ ಜನ್ಮದಿನದಂದು(ಜೂನ್ 12) ‘ಶುಗರ್ ಫ್ಯಾಕ್ಟರಿ’ ಚಿತ್ರದ ವಿಡಿಯೊ ಟೀಸರ್ ಬಿಡುಗಡೆಯಾಗಲಿದೆ.

ಬೆಂಗಳೂರು ಮತ್ತು ಗೋವಾದಲ್ಲಿ ಚಿತ್ರದ ಚಿತ್ರೀಕರಣ ನಡೆದಿದ್ದು, ಬಹುತೇಕ ಚಿತ್ರೀಕರಣ ಪೂರ್ಣಗೊಂಡಿದೆ. ‘ಲಾಕ್‌ಡೌನ್ ಬಳಿಕ, ಚಿತ್ರೀಕರಣಕ್ಕೆ ಅನುಮತಿ ದೊರಕಿದ ಕೂಡಲೇ ಚಿತ್ರೀಕರಣ ಪುನರಾರಂಭವಾಗಲಿದೆ. ಟೀಸರ್‌ನಲ್ಲಿ ಸಾಮಾನ್ಯವಾಗಿ ಪೋಸ್ಟರ್‌ಗಳನ್ನು ಬಳಸಿಕೊಳ್ಳಲಾಗುತ್ತದೆ. ಆದರೆ ನಾವು ವಿಡಿಯೊ ತುಣುಕುಗಳನ್ನು ಬಳಸಿಕೊಂಡು ವಿಭಿನ್ನವಾಗಿ ಟೀಸರ್ ನಿರ್ಮಾಣ ಮಾಡಿದ್ದೇವೆ’ ಎನ್ನುತ್ತಾರೆ ಚಿತ್ರದ ನಿರ್ದೇಶಕ ದೀಪಕ್ ಅರಸ್.

‘ಜೂನ್ 12ರಂದು ಆನಂದ್ ಆಡಿಯೊ ಯೂಟ್ಯೂಬ್ ಚಾನಲ್‌ನಲ್ಲಿ ಟೀಸರ್ ಬಿಡುಗಡೆಯಾಗಲಿದೆ. ಜೂನ್ 11ರಂದು ಸಂಜೆ 5 ಗಂಟೆಗೆ ಇನ್‌ಸ್ಟಾಗ್ರಾಂ ಮೂಲಕ ಲೈವ್‌ನಲ್ಲಿ ಚಿತ್ರತಂಡದ ಸದಸ್ಯರು ಟೀಸರ್ ಹಾಗೂ ಸಿನಿಮಾ ಬಗ್ಗೆ ಅಭಿಮಾನಿಗಳಿಗೆ ಮಾಹಿತಿ ನೀಡಲಿದ್ದಾರೆ’ ಎಂದರು. ಚಿತ್ರದ ನಾಯಕಿಯರಾಗಿ ಸೋನಾಲ್ ಮಾಂಟೆರೊ, ಅದ್ವಿತಿ ಶೆಟ್ಟಿ ಹಾಗೂ ಶಿಲ್ಪಾ ಶೆಟ್ಟಿ ಅಭಿನಯಿಸುತ್ತಿದ್ದಾರೆ. ರಂಗಾಯಣ ರಘು, ‘ಲವ್ ಮಾಕ್ಟೇಲ್’ ಅಭಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಬಾಲಮಣಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ಗಿರೀಶ್ ಆರ್. ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಚಿತ್ರಕ್ಕೆ ಕಬೀರ್ ರಫಿ ಸಂಗೀತ ನಿರ್ದೇಶನ, ಸಂತೋಷ್ ರೈ ಪಾತಾಜೆ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ಅರ್ಜುನ್ ಸಾಹಸ ನಿರ್ದೇಶನ ಹಾಗೂ ಧನಂಜಯ್ ಅವರ ನೃತ್ಯ ನಿರ್ದೇಶನವಿದೆ. ಚೇತನ್ ಕುಮಾರ್ ಹಾಗೂ ಯೋಗಾನಂದ್ ಮುದ್ದಾನ್ ಸಂಭಾಷಣೆ ಬರೆದಿದ್ದಾರೆ. ❖

# ಕನ್ನಡ ವೆಬ್ ಸರಣಿ ಗರಿಗೆದರಿದ ಭರವಸೆ

**ಶರತ್ ಹೆಗ್ಡೆ**

ತೇಜಸ್ವಿನಿ ಶರ್ಮಾ

ಅರವಿಂದ್ ಮೋತಿ

ಸೆಬಾಸ್ಟಿಯನ್ ಡೇವಿಡ್

**ಓವರ್ ದಿ ಟಾಪ್** (ಒಟಿಟಿ) ವೇದಿಕೆಗಳು ಮತ್ತು ವೆಬ್ ಸರಣಿಗಳ ನಿರ್ಮಾಣ ಸಮಾನಾಂತರವಾಗಿ ಸಾಗುತ್ತಿವೆ. ದೇಶದಲ್ಲಿ ಬಂಗಾಳಿ, ಹಿಂದಿ ಮತ್ತು ತೆಲುಗು ಭಾಷೆಗಳಲ್ಲಿ ಒಟಿಟಿ ವೇದಿಕೆಗಳು ಮುಂಚೂಣಿಯಲ್ಲಿವೆ. ಹಾಗೂ ಅದಕ್ಕೆ ಬೇಕಾದ ಸಾಮಗ್ರಿಗಳೂ ಭಾರೀ ಪ್ರಮಾಣದಲ್ಲಿ ಸಿದ್ಧವಾಗುತ್ತಿವೆ.

ಇದನ್ನೆಲ್ಲಾ ನೋಡಿಕೊಂಡು ಕನ್ನಡದಲ್ಲಿಯೂ ಒಟಿಟಿ ಮತ್ತು ವೆಬ್ ಸರಣಿಯ ಪ್ರಯೋಗಗಳು ಮಂದಗತಿಯಲ್ಲಿ ಆರಂಭವಾಗಿವೆ. ಹೆಚ್ಚಿನವರು ಇಲ್ಲಿ ಅನುಸರಿಸುವುದು ಕಾದು ನೋಡುವ ತಂತ್ರ. ಹಾಗಾಗಿ ಸಣ್ಣ ಬಜೆಟ್‌ನ ವೆಬ್ ಸರಣಿಗಳನ್ನು ನಿರ್ಮಿಸಿ ಯೂಟ್ಯೂಬ್‌ನಲ್ಲಿ ಹರಿಯಬಿಟ್ಟು, ಜನರ ಪ್ರತಿಕ್ರಿಯೆ ಗಮನಿಸುತ್ತಾ ಮುಂದುವರಿಯುತ್ತಿದ್ದಾರೆ.

‘ಸೂಪರ್ ಕಪಲ್’ ಸರಣಿಯ ನಿರ್ಮಾಪಕ, ಮಾಧ್ಯಮ ಅನೇಕ ಯೂಟ್ಯೂಬ್ ಚಾನೆಲ್‌ನ ಅರವಿಂದ್ ಮೋತಿ ಅವರು ವೆಬ್ ಸರಣಿಯ ನಿರ್ಮಾಣ ಮತ್ತು ವೀಕ್ಷಕನ ಮನಸ್ಥಿತಿಯ ಬಗ್ಗೆ ಹೇಳಿದ್ದು ಹೀಗೆ: ‘ಕನ್ನಡ ವೀಕ್ಷಕರ ಅಭಿರುಚಿ ತುಂಬಾ ವಿಸ್ತಾರವಾಗಿದೆ. ಅವರು ಮನರಂಜನೆಗಾಗಿ ಯಾವ ಭಾಷೆಗೆ ಬೇಕಾದರೂ ಹೋಗುತ್ತಾರೆ. ಕನ್ನಡದಲ್ಲಿ ವೆಬ್ ಸಿರೀಸ್‌ಗೆ ಒಗ್ಗಿಕೊಳ್ಳುವ ಚಿತ್ರಕಥೆ, ಸಂಭಾಷಣೆ ಬರೆಯುವವರೂ ಬೇಕು. ಏಕೆಂದರೆ ಇದು ಅತ್ತ ಕಿರುತೆರೆಯೂ ಅಲ್ಲ. ಸಿನಿಮಾವೂ ಅಲ್ಲದ ಮಧ್ಯದ ಪ್ರಾಕಾರ. ಅಂಥವರನ್ನು ಸಜ್ಜುಗೊಳಿಸಿ ಪ್ರಯೋಗಕ್ಕಿಳಿದಿದ್ದೇವೆ. ವೆಬ್ ಸಿರೀಸ್‌ಗೆ ನಿರ್ಮಾಣದ ವಾತಾವರಣ ರೂಪಿಸಬೇಕಿತ್ತು. ಈ ಪ್ರಯೋಗದ ಫಲವೇ ‘ಸೂಪರ್ ಕಪಲ್’. ಕನ್ನಡದಲ್ಲಿ ವೆಬ್ ಸರಣಿಗೆ ಒಳ್ಳೆಯ ಮಾರುಕಟ್ಟೆ ಇದೆ. ಆದರೆ ವಿಶೇಷವಾದ ಕಂಟೆಂಟ್ ಬೇಕು’.

‘ಸದ್ಯಕ್ಕೆ ಕನ್ನಡದ ವೆಬ್ ಸರಣಿಗಳು ಇನ್ನೂ ಉದ್ಯಮದ ರೂಪ ಪಡೆದಿಲ್ಲ. ನಾವು ಕಡಿಮೆ ಖರ್ಚಿನಲ್ಲಿ ಒಳ್ಳೆಯ ಕಂಟೆಂಟ್ ತರುವತ್ತ ಹಾಗೂ ಸದೃಢ ನಿರ್ಮಾಣ ಸಂಸ್ಥೆಯನ್ನು ಕಟ್ಟುವತ್ತಲೇ ಗಮನ ಕೊಟ್ಟಿದ್ದೇವೆ. ನಮ್ಮದೇ ಆದ ಒಟಿಟಿ ವೇದಿಕೆ ಸ್ಥಾಪಿಸಿ ಅದರಲ್ಲಿ ಈ ಸರಣಿಗಳನ್ನು ಪ್ರಸಾರ ಮಾಡುವ ಉದ್ದೇಶವಿದೆ. ಕೋವಿಡ್ ಕಾರಣಕ್ಕಾಗಿ ಸರಣಿ ನಿರ್ಮಾಣಗಳು ತುಂಬಾ ನಿಧಾನಗತಿಗೆ ಇಳಿದಿವೆ’ ಎಂದೂ ಅವರು ಹೇಳುತ್ತಾರೆ.

ತರ್ಲೆ ಬಾಕ್ಸ್ ಚಾನೆಲ್‌ನಲ್ಲಿ ಆರಂಭವಾಗಿರುವ ‘ಕ್ಯಾಬರೆ’ ಸರಣಿ ಕೂಡಾ ಇಂಥ ಲಘು ಮನರಂಜನಾ ಅಂಶಗಳನ್ನೇ ಹೊಂದಿದೆ. ಮೂರು ವರ್ಷಗಳ ಹಿಂದೆ ‘ಸಕ್ಕತ್ ಸ್ಟುಡಿಯೋ’ ನಿರ್ಮಾಣದ ‘ಲೂಸ್ ಕನೆಕ್ಷನ್’ ಸರಣಿ ಈಗಲೂ ವೀಕ್ಷಕರ ಪ್ರಮಾಣವನ್ನು ಏರಿಸಿಕೊಳ್ಳುತ್ತಲೇ ಇದೆ. ಕಡಕ್ ಚಾಯ್ ಚಾನೆಲ್‌ನ ‘ಜಸ್ಟ್ ಮ್ಯಾರೀಡ್’ ಸರಣಿಯು ತನ್ನ ಶೀರ್ಷಿಕೆಯ ಕಾರಣಕ್ಕೇ ವೀಕ್ಷಕರನ್ನು ಸೆಳೆದಿತ್ತು ಎನ್ನುತ್ತಾರೆ ಹಲವು ಯೂಟ್ಯೂಬರ್‌ಗಳು. ಇದೇ ಸಾಲಿನಲ್ಲಿ ಕಿರುಚಿತ್ರ ‘ಅಮೃತಾಂಜನ’, ‘ಲವ್ ಸ್ಕ್ವೇರ್’ ಹೀಗೆ ಹಲವು ಸರಣಿಗಳು ನಿಲ್ಲುತ್ತವೆ.

ವೆಬ್ ಸರಣಿಗಳಿಗೆ ಕಾಲಮಿತಿ, ಸೆನ್ಸಾರ್ ನಿಯಮಗಳ ಹಂಗಿಲ್ಲ. ಹಾಗಾಗಿ 10ರಿಂದ 40 ನಿಮಿಷಗಳವರೆಗಿನ ಸರಣಿಗಳನ್ನು ಕಾಣಬಹುದು. ಹೆಚ್ಚಿನ ಸರಣಿಗಳಲ್ಲಿ ಒಂದೇ ಜಾಗದಲ್ಲಿ ನಡೆಯುವ ಕಡಿಮೆ ಸಂಖ್ಯೆಯ ಪಾತ್ರಗಳಿರುವ ಕಥೆಗಳೇ ಇರುತ್ತವೆ. ಹಾಗಾಗಿ ನಿರ್ಮಾಣ ವೆಚ್ಚ ಕಡಿಮೆ. ಹಂಚಿಕೆಗೆ ಯೂಟ್ಯೂಬ್ ಅಂತೂ ಮುಕ್ತ ವೇದಿಕೆ.

**ಕಲಾವಿದರಿಗೆ ಸಿನಿಮಾ ಅವಕಾಶ:** ‘ಸೂಪರ್ ಕಪಲ್’ ನಟಿ ತೇಜಸ್ವಿನಿ ಶರ್ಮಾ ಅವರು ಹೇಳುವಂತೆ, ‘ಹೆಚ್ಚು ದೀರ್ಘ ಅಲ್ಲದ, ನವಿರು ಅಂಶಗಳ ಕಥೆಯನ್ನು ಜನ ಸ್ವೀಕರಿಸುತ್ತಾರೆ. ಅವರ ಸಣ್ಣ ವಿರಾಮದ ಅವಧಿಯಲ್ಲಿ ಫೋನ್/ ಕಂಪ್ಯೂಟರ್ ಮೇಲೆ ಕಣ್ಣು ಹಾಯಿಸಿದಾಗ ತಕ್ಷಣಕ್ಕೆ ಸಿಗುವ ಮನರಂಜನೆಗೆ ಆದ್ಯತೆ ಕೊಡುತ್ತಾರೆ. ಅವರ ಆ ಅವಧಿಯನ್ನು ನಮ್ಮ ಕಂಟೆಂಟ್ ಸೆಳೆಯುವಂತಿರಬೇಕು. ಇದರಲ್ಲಿ ‘ಸೂಪರ್ ಕಪಲ್’ ಯಶಸ್ವಿಯಾಗಿದೆ. ಅದರಿಂದ ಗುರುತಿಸಲ್ಪಟ್ಟ ನನಗೆ ಸಿನಿಮಾ ಅವಕಾಶಗಳು ಬಂದಿವೆ’ ಎನ್ನುತ್ತಾರೆ.

**ನಿರ್ಮಾಪಕರಿಗೇನು?:** ಸದ್ಯ ನಿರ್ಮಾಪಕರು ಯೂಟ್ಯೂಬ್ ಜಾಹೀರಾತಿಗಾಗಿ ವೀಕ್ಷಕರ ಪ್ರಮಾಣವನ್ನು ನಂಬಿಕೊಂಡು ಬಂಡವಾಳ ಹೂಡಬೇಕಾಗಿದೆ. ಯೂಟ್ಯೂಬ್ ಮಾನದಂಡ ಪೂರೈಸಬೇಕಾದರೆ ದೀರ್ಘ ಕಾಲ ಕಾಯಬೇಕು. ಅದಕ್ಕಾಗಿ ಅನೇಕರು ಪ್ರತಿಷ್ಠಿತ ಬ್ರ್ಯಾಂಡ್‌ಗಳ ಪ್ರಾಯೋಜಕತ್ವ ಪಡೆದುಕೊಂಡು ಸರಣಿಗಳನ್ನು ನಿರ್ಮಿಸುತ್ತಿದ್ದಾರೆ.

ನಟ, ನಿರ್ದೇಶಕ ರಮೇಶ್ ಅರವಿಂದ್ ಅವರು ಕೂಡಾ ವೆಬ್ ಸರಣಿ ನಿರ್ಮಿಸುವ ಪ್ರಸ್ತಾವ ಹೊಂದಿದ್ದರು. ಸದ್ಯ ಯಾವುದೇ ಬೆಳವಣಿಗೆ ಆಗಿಲ್ಲ. ಆ ಚಿಂತನೆ ಹಾಗೆಯೇ ಇದೆ ಎನ್ನುತ್ತಾರೆ.

**ಕನ್ನಡದಲ್ಲಿ ಬರಲಿದೆ ಆಲ್‌ಫ್ಲಿಕ್ಸ್:** ಹಿರಿಯ ಚಿತ್ರ ನಿರ್ದೇಶಕ, ನಿರ್ಮಾಪಕ, ತಂತ್ರಜ್ಞ ಸೆಬಾಸ್ಟಿಯನ್ ಡೇವಿಡ್ ಅವರು ಕನ್ನಡದಲ್ಲೇ ಒಟಿಟಿ ಆ ವೇದಿಕೆ ರೂಪಿಸಲು ಎಲ್ಲ ಸಿದ್ಧತೆ ಮಾಡಿದ್ದಾರೆ.

ಅವರ ಪ್ರಕಾರ, ‘ಒಟಿಟಿ ಕ್ಷೇತ್ರವನ್ನು ಆಳವಾಗಿ ವಿಶ್ಲೇಷಿಸಿದ್ದೇನೆ. ಹಾಗಾಗಿ ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ತಕ್ಕಂತೆ ಜನ ಬಯಸುವ ಕಂಟೆಂಟ್ ಕೊಟ್ಟರೆ ಖಂಡಿತವಾಗಿಯೂ ಮಾರುಕಟ್ಟೆ ನಮಗಿದೆ. ಆಲ್‌ಫ್ಲಿಕ್ಸ್ ವೇದಿಕೆಯಲ್ಲಿ ಸಾಕಷ್ಟು ಚಿತ್ರಗಳು ಉಚಿತ ವೀಕ್ಷಣೆಗೆ ಲಭ್ಯ ಇರಲಿವೆ. ಹೊಸ ಕಥೆಗಳನ್ನು ಸರಣಿ ರೂಪದಲ್ಲಿ ತಂದಾಗ ಅದನ್ನು ಕನಿಷ್ಠ ನಾಲ್ಕು ಭಾಷೆಗಳಲ್ಲಿ ಕೊಡುತ್ತೇನೆ. ಒಂದು ಕಥೆ ನಾಲ್ಕು ಭಾಷೆಗಳಲ್ಲಿ ವಿಶ್ವದ ಮೂಲೆ ಮೂಲೆಯನ್ನು ತಲುಪುವ ವಿಶ್ವಾಸವಿದೆ. ಜನ ಕನ್ನಡಿಗರ ಪ್ರಯತ್ನವನ್ನು ಬೆಂಬಲಿಸುವ ವಿಶ್ವಾಸ ಇದೆ ಎನ್ನುತ್ತಾರೆ ಅವರು.

ಹೀಗೆ ಭವಿಷ್ಯದ ಇಂಟರ್‌ನೆಟ್, ಬದಲಾಗುತ್ತಿರುವ ತಂತ್ರಜ್ಞಾನ ಗಮನಿಸುತ್ತಲೇ ಕನ್ನಡದ ಒಟಿಟಿ, ವೆಬ್ ಸರಣಿಗಳು ಬರುತ್ತಿವೆ. ನಿರ್ಮಾಪಕರು ವೀಕ್ಷಕರ ನಾಡಿ ಮಿಡಿತದ ಮೇಲೆ ಈಗ ನಿಧಾನವಾಗಿ ಎಚ್ಚರಿಕೆಯ ಹೆಜ್ಜೆ ಇಡುತ್ತಿದ್ದಾರೆ. ❖

# ಬರ್ಲಿನ್‌ಗೆ ‘ಬಯಲಾಟದ ಭೀಮಣ್ಣ’

ಬರಗೂರು ರಾಮಚಂದ್ರಪ್ಪ

‘ಬಯಲಾಟದ ಭೀಮಣ್ಣ’ ಚಿತ್ರದ ದೃಶ್ಯ

**ರಾಜರಾಜೇಶ್ವರಿ** ಸಿನಿ ಆರ್ಟ್ಸ್ ಸಂಸ್ಥೆಯು ನಿರ್ಮಾಣ ಮಾಡಿದ, ಬರಗೂರು ರಾಮಚಂದ್ರಪ್ಪ ನಿರ್ದೇಶನದ ‘ಬಯಲಾಟದ ಭೀಮಣ್ಣ’ ಚಿತ್ರವು ಬರ್ಲಿನ್ ಅಂತರರಾಷ್ಟ್ರೀಯ ಆರ್ಟ್ ಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೆ ಆಯ್ಕೆಯಾಗಿದೆ.

2018ರ ಡಿಸೆಂಬರ್‌ನಲ್ಲಿ ಸೆನ್ಸಾರ್ ಆಗಿದ್ದ ಈ ಚಿತ್ರವನ್ನು ‘ಸಮುದಾಯದತ್ತ ಸಿನಿಮಾ’ ಪರಿಕಲ್ಪನೆಯ ‘ಚಿತ್ರಯಾತ್ರೆ’ ಮೂಲಕ ನೂರಾರು ಊರುಗಳಲ್ಲಿ ಪ್ರದರ್ಶನ ಮಾಡಲಾಗಿತ್ತು. ಕೊರೊನಾ ನಂತರ ಈ ಚಿತ್ರವನ್ನು ಚಿತ್ರಮಂದಿರಗಳಲ್ಲಿ ಅಧಿಕೃತ ಬಿಡುಗಡೆಗೂ ಸಿದ್ಧತೆ ನಡೆದಿದೆ. ಈ ಚಿತ್ರವು ಬರಗೂರರ ‘ಬಯಲಾಟದ ಭೀಮಣ್ಣ’ ಎಂಬ ಕಥೆಯನ್ನು ಆಧರಿಸಿದೆ. ಬರಗೂರರೇ ಚಿತ್ರಕಥೆ, ಸಂಭಾಷಣೆ ಬರೆದಿದ್ದು ಗೀತೆಗಳನ್ನೂ ನಿರ್ದೇಶಿಸಿದ್ದಾರೆ.

‘ಬಯಲುಸೀಮೆಯಲ್ಲಿ ಪ್ರಸಿದ್ಧವಾದ ರಂಗರೂಪ ‘ಬಯಲಾಟ’ದ ಕಲಾವಿದನನ್ನು ಕೇಂದ್ರವಾಗಿರಿಸಿಕೊಂಡು ಗ್ರಾಮೀಣ ಕಲಾವಿದರ ಆಸೆ, ಆಕಾಂಕ್ಷೆ ಹಾಗೂ ಸವಾಲುಗಳ ಸುತ್ತ ಈ ಸಿನಿಮಾ ಬೆಳಕುಚೆಲ್ಲುತ್ತದೆ. ಕಲಾಭಿವ್ಯಕ್ತಿಗೆ ಒದಗುವ ಸರ್ವಾಧಿಕಾರಿ ಸವಾಲುಗಳನ್ನು ಎದುರಿಸಲು ಯುವ ಲೇಖಕನ ಪಾತ್ರದ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆಯನ್ನು ಈ ಸಿನಿಮಾದಲ್ಲಿ ಅಂತರ್ಗತ ಮಾಡಲಾಗಿದೆ’ ಎನ್ನುತ್ತಾರೆ ಬರಗೂರು.

ಭೀಮಣ್ಣನ ಪಾತ್ರದಲ್ಲಿ ಸುಂದರ್ ರಾಜ್, ಯುವ ಲೇಖಕನ ಪಾತ್ರದಲ್ಲಿ ನಟ ರಂಜಿತ್ ಅಭಿನಯಿಸಿದ್ದಾರೆ. ಇವರಿಗೆ ಬೆಂಬಲವಾಗಿ ನಿಲ್ಲುವ ಟೀಚರ್ ಪಾತ್ರದಲ್ಲಿ ‘ಸ್ಪರ್ಶ’ ಖ್ಯಾತಿಯ ರೇಖಾ ಅಭಿನಯಿಸಿದ್ದಾರೆ. ಮಾಸ್ಟರ್ ಆಕಾಂಕ್ಷ್ ಬರಗೂರು ಜನಪದ ಕಲೆಯ ಹೊಸ ರಾಯಭಾರಿ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಇವರಲ್ಲದೆ ಹನುಮಂತೇಗೌಡ, ಪ್ರಮೀಳಾ ಜೋಷಾಯ್, ರಾಧಾ ರಾಮಚಂದ್ರ, ವತ್ಸಲಾ ಮೋಹನ್, ಅಂಬರೀಷ್ ಸಾರಂಗಿ, ನಂಜಪ್ಪ ಕಾಳೇಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕೃಷ್ಣವೇಣಿ ನಂಜಪ್ಪ ಮತ್ತು ಧನಲಕ್ಷ್ಮಿ ಕೃಷ್ಣಪ್ಪ ನಿರ್ಮಾಪಕರಾಗಿರುವ ಈ ಚಿತ್ರದ ಛಾಯಾಗ್ರಾಹಕರು ನಾಗರಾಜ ಆಧವಾನಿ, ಸಂಕಲನಕಾರರು ಸುರೇಶ್ ಅರಸು, ಸಂಗೀತ ನಿರ್ದೇಶನ ಶಮಿತಾ ಮಲ್ನಾಡ್. ಖ್ಯಾತ ನಟರಾದ ಸಂಚಾರಿ ವಿಜಯ್ ಮತ್ತು ಸುಂದರ್ ರಾಜ್ ಅವರು ಗಾಯಕರಾಗಿ ತಲಾ ಒಂದು ಹಾಡು ಹಾಡಿದ್ದಾರೆ. ❖

# ‘ಹುಡ್ಗಿ ಸಿಕ್ತಿಲ್ಲ’ ಎನ್ನುತ್ತಿದ್ದಾರೆ ಹೇಮಂತ್ ಹೆಗಡೆ

**‘ಹೌಸ್‌ಫುಲ್’**, ‘ನಿಂಬೆಹುಳಿ’ ಚಿತ್ರಗಳ ನಿರ್ದೇಶಕರಾದ ಹೇಮಂತ್ ಹೆಗಡೆ, ಇದೀಗ ಮತ್ತೊಂದು ಹಾಸ್ಯಪ್ರಧಾನ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಮಲೆನಾಡಿನ ಹುಡುಗರಿಗೆ ಹುಡುಗಿ ಸಿಗುತ್ತಿಲ್ಲ ಎನ್ನುವ ಅಂಶವೇ ಚಿತ್ರಕಥೆ.

ಚಿತ್ರದಲ್ಲಿ ಸ್ವತಃ ಹೇಮಂತ್ ಹೆಗಡೆಯವರೇ ನಾಯಕರಾಗಿ ನಟಿಸುತ್ತಿದ್ದು, ನಾಯಕಿಯಾಗಿ ಮರಾಠಿಯ ಲೋಪಮುದ್ರ ರಾವುತ್ ನಟಿಸಲಿದ್ದಾರೆ. ಚಿತ್ರದ ಶೀರ್ಷಿಕೆ ಜೂ.23ರಂದು ಅನಾವರಣಗೊಳ್ಳಲಿದ್ದು, ಪದ್ಮಜಾ ರಾವ್, ರಮೇಶ್ ಭಟ್, ಶರತ್ ಲೋಹಿತಾಶ್ವ ತಾರಾಗಣದಲ್ಲಿದ್ದಾರೆ.



ಹೇಮಂತ್ ಹೆಗಡೆ

‘ಉತ್ತರ ಕನ್ನಡ, ಶೃಂಗೇರಿ ಹಾಗೂ ಉತ್ತರ ಭಾರತದಲ್ಲಿ ಚಿತ್ರೀಕರಣಕ್ಕೆ ಚಿತ್ರತಂಡವು ನಿರ್ಧರಿಸಿದ್ದು, ಆಗಸ್ಟ್‌ನಿಂದ ಚಿತ್ರೀಕರಣ ಆರಂಭವಾಗಲಿದೆ. ಕೃಷಿಕನಾಗಿರುವ 35 ವರ್ಷದ ನಾಯಕ ಹುಡುಗಿ ಹುಡುಕಲು ಪಡುವ ಪಾಡನ್ನು ಅದರಲ್ಲಿರುವ ಕಿತಾಪತಿಯನ್ನು ಚಿತ್ರಕಥೆ ಹೊಂದಿದೆ. ಕಳೆದ ಐದು ವರ್ಷದಿಂದ ಕೇವಲ ಹವ್ಯಕರಿಗೆ ಎಂದಲ್ಲ ಮಲೆನಾಡಿನ ಹುಡುಗರಿಗೆ ಹುಡುಗಿ ಸಿಗುತ್ತಿಲ್ಲ. ಇದೊಂದು ಸಾಮಾಜಿಕ ಪಿಡುಗಾಗಿದೆ ಎನ್ನುತ್ತಾರೆ ಹೇಮಂತ್ ಹೆಗಡೆ. ಮೂವರು ಎನ್‌ಆರ್‌ಐಗಳು ಚಿತ್ರದ ನಿರ್ಮಾಪಕರಾಗಿದ್ದಾರೆ. ❖



❦ ಸುಭಾಷಿತ ❦

ಶಾಂತಿಯನ್ನು ಬಲವಂತದಿಂದ ಸಾಧಿಸಲು ಸಾಧ್ಯವಿಲ್ಲ. ತಿಳಿವಳಿಕೆಯಿಂದಷ್ಟೇ ಅದನ್ನು ಸಾಧಿಸಬಹುದು.

–ಆಲ್ಬರ್ಟ್ ಐನ್‌ಸ್ಟೀನ್

# ವಿದ್ಯುತ್ ದರ ಏರಿಕೆ ನಿರ್ಧಾರ ಗ್ರಾಹಕರಿಗೆ ಮತ್ತೊಂದು ಗುದ್ದು

**ಕೊರೊನಾ** ವೈರಾಣು ರಾಜ್ಯಕ್ಕೆ ಬಂದು ಒಂದೂಕಾಲು ವರ್ಷ ಕಳೆದಿದೆ. ಕೋವಿಡ್ ಎರಡನೇ ಅಲೆ ಈಗ ರಾಜ್ಯವನ್ನು ವ್ಯಾಪಿಸಿಕೊಂಡಿದೆ. ಸೋಂಕು ನಿಯಂತ್ರಣಕ್ಕಾಗಿ ರಾಜ್ಯದಲ್ಲಿ ಎರಡನೇ ಬಾರಿ ಲಾಕ್‌ಡೌನ್ ಜಾರಿಯಲ್ಲಿದೆ. 2020ರಲ್ಲಿ ಜಾರಿಗೊಳಿಸಿದ್ದ ಮೊದಲ ಲಾಕ್‌ಡೌನ್‌ನಲ್ಲಿ ಆರು ತಿಂಗಳಿಗೂ ಹೆಚ್ಚು ಕಾಲ ಎಲ್ಲ ವರ್ಗಗಳ ಜನ ಸಂಕಷ್ಟ ಅನುಭವಿಸಿದ್ದರು. ಸೇವಾ ವಲಯ, ಉತ್ಪಾದನಾ ವಲಯ ಸೇರಿದಂತೆ ಎಲ್ಲ ಕ್ಷೇತ್ರಗಳೂ ಕುಸಿತ ಅನುಭವಿಸಿದ್ದವು. ಚೇತರಿಕೆಯ ಹಾದಿಯಲ್ಲಿ ಇರುವಾಗಲೇ ಎರಡನೇ ಲಾಕ್‌ಡೌನ್ ಜಾರಿಯಲ್ಲಿದೆ. ದುಡಿಯುವ ವರ್ಗದ ಜನರು ಆದಾಯದ ಮೂಲವನ್ನೇ ಕಳೆದುಕೊಂಡು ಕಂಗಾಲಾಗಿದ್ದಾರೆ. ಉದ್ದಿಮೆಗಳಲ್ಲೂ ಚಟುವಟಿಕೆ ಕುಸಿದಿದೆ. ಈ ಸರಪಳಿಯು ಕೃಷಿ, ಕಟ್ಟಡ ನಿರ್ಮಾಣ ಸೇರಿದಂತೆ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿದೆ. ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ಜೀವನ ನಿರ್ವಹಣೆಯೇ ಕಷ್ಟಕರ ಎಂಬ ಪರಿಸ್ಥಿತಿ ಇದೆ. ಇಂತಹ ಸನ್ನಿವೇಶದಲ್ಲಿ ಜನರ ಜೀವನ ವೆಚ್ಚವನ್ನು ಕಡಿಮೆ ಮಾಡುವುದಕ್ಕೆ ಪೂರಕವಾದ ಕ್ರಮ ಕೈಗೊಳ್ಳಬೇಕಾದುದು ಸರ್ಕಾರಗಳ ಜವಾಬ್ದಾರಿ. ಆದರೆ, ಕೋವಿಡ್ ಬಿಕ್ಕಟ್ಟಿನ ನಡುವೆಯೇ ಎರಡನೇ ಬಾರಿಗೆ ವಿದ್ಯುತ್ ದರ ಹೆಚ್ಚಳಕ್ಕೆ ರಾಜ್ಯ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಪ್ರತೀ ಯೂನಿಟ್ ವಿದ್ಯುತ್ ದರದಲ್ಲಿ 40 ಪೈಸೆ ಹೆಚ್ಚಳ ಮಾಡುವ ತೀರ್ಮಾನವನ್ನು 2020ರ ನವೆಂಬರ್‌ನಲ್ಲಿ ಕೈಗೊಳ್ಳಲಾಗಿತ್ತು. ಏಳು ತಿಂಗಳಲ್ಲೇ ಮತ್ತೆ ಪ್ರತೀ ಯೂನಿಟ್‌ಗೆ ಸರಾಸರಿ 30 ಪೈಸೆ ದರ ಹೆಚ್ಚಿಸುವ ನಿರ್ಧಾರವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಕೈಗೊಂಡಿದೆ. ಏಪ್ರಿಲ್ 1ರಿಂದ ಪೂರ್ವಾನ್ವಯವಾಗುವಂತೆ ಈ ದರ ಹೆಚ್ಚಳ ಜಾರಿಯಾಗಲಿದೆ. ಎರಡು ತಿಂಗಳ ಅವಧಿಯ ಹಿಂಬಾಕಿ ವಸೂಲಿಗೂ ನಿರ್ಧಾರ ಕೈಗೊಳ್ಳಲಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ದರ ನಿರಂತರವಾಗಿ ಏರುತ್ತಿದೆ. ಅಡುಗೆ ಎಣ್ಣೆ, ಬೇಳೆ, ಕಾಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯಲ್ಲೂ ಭಾರಿ ಏರಿಕೆಯಾಗಿದೆ. ಲಾಕ್‌ಡೌನ್ ಸಮಯದಲ್ಲಿ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರ ಹೆಚ್ಚಾಗಿ ದರ ಮತ್ತಷ್ಟು ಗಗನಮುಖಿಯಾಗಿದೆ. ದುಡಿಮೆಯೇ ಇಲ್ಲದೆ ಆದಾಯ ಕುಸಿತದಿಂದ ಜನರು ಕಂಗೆಟ್ಟಿರುವಾಗಲೇ ವಿದ್ಯುತ್ ದರ ಏರಿಕೆಯ ಮೂಲಕ ಮತ್ತಷ್ಟು ಹೊರೆ ಹೊರಿಸಲು ಕೆಇಆರ್‌ಸಿ ಹೊರಟಿರುವುದು ಸರ್ವಥಾ ಸರಿಯಲ್ಲ.

**ದುಡಿಮೆಯೇ ಇಲ್ಲದೆ ಆದಾಯ ಕುಸಿತದಿಂದ ಜನರು ಕಂಗೆಟ್ಟಿರುವಾಗ ವಿದ್ಯುತ್ ದರ ಏರಿಕೆಯ ಮೂಲಕ ಮತ್ತಷ್ಟು ಹೊರೆ ಹೊರಿಸಲು ಕೆಇಆರ್‌ಸಿ ಹೊರಟಿರುವುದು ಸರ್ವಥಾ ಸರಿಯಲ್ಲ**

ರಾಜ್ಯ ಸರ್ಕಾರಿ ಸ್ವಾಮ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘದ ಪ್ರಸಕ್ತ ವರ್ಷದ ಆದಾಯದಲ್ಲಿ ₹ 7,765.79 ಕೋಟಿಯಷ್ಟು ಕೊರತೆ ಆಗಲಿದೆ ಎಂಬ ಅಂದಾಜು ಇದೆ. ಅದರ ಆಧಾರದಲ್ಲಿ ಪ್ರತೀ ಯೂನಿಟ್‌ಗೆ ಸರಾಸರಿ ₹ 1.35 ದರ ಹೆಚ್ಚಿಸಬೇಕೆಂಬ ಬೇಡಿಕೆಯನ್ನು ಎಸ್ಕಾಂಗಳು ಸಲ್ಲಿಸಿದ್ದವು. ಕೋವಿಡ್ ನಿಯಂತ್ರಣ ಕ್ರಮಗಳ ನಡುವೆಯೇ ಈ ಅರ್ಜಿಗಳ ವಿಚಾರಣೆ ನಡೆಸಿದ ಕೆಇಆರ್‌ಸಿ, ಪ್ರತೀ ಯೂನಿಟ್‌ಗೆ ಸರಾಸರಿ 30 ಪೈಸೆ ಹೆಚ್ಚಳಕ್ಕೆ ಅನುಮತಿ ನೀಡಿದೆ. ಕೋವಿಡ್ ಕಾರಣದಿಂದ ವರಮಾನ ನಷ್ಟವಾಗಿರುವುದು, ಎಸ್ಕಾಂಗಳ ಕಾರ್ಯನಿರ್ವಹಣಾ ವೆಚ್ಚದಲ್ಲಿನ ಏರಿಕೆ, ಸಾಲದ ಹೊರೆ ಮತ್ತಿತರ ಕಾರಣಗಳಿಂದ ವಿದ್ಯುತ್ ದರ ಏರಿಕೆ ಅನಿವಾರ್ಯ ಎಂದು ಆಯೋಗ ಹೇಳಿದೆ. ಸಾರ್ವಜನಿಕ ವಲಯದ ಉದ್ದಿಮೆಗಳು ವಿವಿಧ ಕಾರಣಗಳಿಂದ ಅನುಭವಿಸುವ ನಷ್ಟ ಅಥವಾ ವರಮಾನದ ಕೊರತೆಯನ್ನು ಬಿಗಿ ಕ್ರಮಗಳ ಮೂಲಕ ತಪ್ಪಿಸುವುದು ಸರ್ಕಾರದ ಹೊಣೆಗಾರಿಕೆ. ಬದಲಿಗೆ, ಆ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುವ ಕ್ರಮ ಒಪ್ಪಲಾಗದು. ಕೋವಿಡ್ ಸಂಕಷ್ಟದಿಂದ ಜನರು ನಿತ್ಯದ ಜೀವನ ನಿರ್ವಹಿಸುವುದಕ್ಕೂ ಪರದಾಡುವ ಸ್ಥಿತಿಯಲ್ಲಿ ಇರುವಾಗ ಎಸ್ಕಾಂಗಳ ಹಿತವೊಂದನ್ನೇ ಗಮನಿಸುವುದಕ್ಕಿಂತ ಜನರ ಮೇಲಿನ ಆರ್ಥಿಕ ಹೊರೆ ತಗ್ಗಿಸುವುದೇ ಸರ್ಕಾರದ ಆದ್ಯತೆಯಾಗಬೇಕಿತ್ತು. ಕೇರಳ, ಆಂಧ್ರಪ್ರದೇಶ ಸೇರಿದಂತೆ ಕೆಲವು ರಾಜ್ಯಗಳು ಕೋವಿಡ್ ಸಂಕಷ್ಟದ ಅವಧಿಯಲ್ಲಿ ಕೆಲವು ತಿಂಗಳುಗಳ ವಿದ್ಯುತ್ ಬಿಲ್ ಮನ್ನಾ ಮಾಡಿವೆ. ಹಲವು ರಾಜ್ಯಗಳು ಲಾಕ್‌ಡೌನ್ ಅವಧಿಯಲ್ಲಿ ವಿದ್ಯುತ್ ಬಿಲ್ ಪಾವತಿ ಅವಧಿಯನ್ನು ವಿಸ್ತರಿಸಿವೆ. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ವಿದ್ಯುತ್ ದರ ಹೆಚ್ಚಿಸುವ ನಿರ್ಧಾರವು ಜನರ ಬದುಕಿನ ಹೊರೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ರಾಜ್ಯ ಸರ್ಕಾರ ಮಧ್ಯಪ್ರವೇಶಿಸಿ, ವಿದ್ಯುತ್ ದರ ಏರಿಕೆ ನಿರ್ಧಾರದ ಕುರಿತು ಮರುಪರಿಶೀಲಿಸುವುದು ಜನಸ್ನೇಹಿ ನಡೆ ಆಗುತ್ತದೆ.

### ದಿನದ ಟ್ವೀಟ್

## ಬಾಲಕಾರ್ಮಿಕ ಪದ್ಧತಿ ತೊಲಗಲಿ

**ಬಾಲಕಾರ್ಮಿಕರ ಸಂಖ್ಯೆ ಹೆಚ್ಚಾಗಿರುವುದಕ್ಕೆ ಯಾವುದೇ ಕ್ಷಮೆ ಅಥವಾ ಸಮರ್ಥನೆ ಇಲ್ಲ! ಸಾಂಕ್ರಾಮಿಕ ರೋಗ ಪ್ರಾರಂಭವಾಗುವುದಕ್ಕೆ ಮುನ್ನವೇ 1.6 ಕೋಟಿಗಿಂತಲೂ ಹೆಚ್ಚು ಮಂದಿ ಬಾಲಕಾರ್ಮಿಕರು ಇದ್ದರು. ಅದೇ ನಾಲ್ಕು ವರ್ಷಗಳ ಅವಧಿಯಲ್ಲಿ, ಜಗತ್ತು 10 ಟ್ರಿಲಿಯನ್ ಡಾಲರ್‌ಗಳಷ್ಟು ಶ್ರೀಮಂತವಾಯಿತು. ದಯವಿಟ್ಟು ಎಚ್ಚರಗೊಳ್ಳಿ!**
**#EndChildLabour2021**
**#FairShareToEndChildLabour**

**ಕೈಲಾಶ್ ಸತ್ಯಾರ್ಥಿ,** ಮಕ್ಕಳ ಹಕ್ಕುಗಳ ಹೋರಾಟಗಾರ

### 25 ವರ್ಷಗಳ ಹಿಂದೆ

ಮಂಗಳವಾರ, 11-6-1996

• **ಪಿವಿಎನ್ ಪುತ್ರನಿಗೆ ಸಿಬಿಐ ಸಮನ್ಸ್**

**ನವದೆಹಲಿ, ಜೂನ್ 10 (ಪಿಟಿಐ)**– 133 ಕೋಟಿ ರೂಪಾಯಿ ರಸಗೊಬ್ಬರ ಹಗರಣಕ್ಕೆ ಸಂಬಂಧಿಸಿದ ವಿಚಾರಣೆಗಾಗಿ ಹಾಜರಾಗುವಂತೆ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರ ಪುತ್ರ ವಿ.ಪಿ. ಪ್ರಭಾಕರ ರಾವ್ ಅವರಿಗೆ ಕೇಂದ್ರ ತನಿಖಾ ದಳ (ಸಿಬಿಐ) ಸಮನ್ಸ್ ಜಾರಿಗೊಳಿಸಿದೆ.

ಕೇಂದ್ರದ ಮಾಜಿ ಸಚಿವ ರಾಂ ಲಖನ್ ಸಿಂಗ್ ಯಾದವ್ ಅವರ ಪುತ್ರ ಪ್ರಕಾಶ್ ಚಂದ್ರ ಅವರನ್ನು ಇಂದು ವಿಚಾರಣೆ ಮಾಡಿತು.

ಹಗರಣಕ್ಕೆ ಕಾರಣವಾದ ಹಣವನ್ನು ಇಡಲಾಗಿದೆ ಎನ್ನಲಾದ ಸ್ವಿಸ್ ಬ್ಯಾಂಕಿನ ಖಾತೆ ಸ್ಥಗಿತಕ್ಕೆ ಸಿಬಿಐ ಈಗಾಗಲೇ ಮನವಿ ಮಾಡಿದೆ. ಅಲ್ಲದೆ ಹಗರಣಕ್ಕೆ ಸಂಬಂಧಿಸಿದಂತೆ ಲಂಚ ಜಮಾ ಆಗಿದೆ ಎನ್ನಲಾದ ದುಬೈ, ನ್ಯೂಯಾರ್ಕ್, ಸ್ವಿಟ್ಜರ್‌ಲ್ಯಾಂಡ್ ಮತ್ತು ಟರ್ಕಿಯ ಬ್ಯಾಂಕ್ ಖಾತೆಗಳ ವಿವರಗಳನ್ನು ಒದಗಿಸಬೇಕೆಂದು ಅಂತರರಾಷ್ಟ್ರೀಯ ಪೊಲೀಸರಿಗೆ ಸಿಬಿಐ ಮನವಿ ಮಾಡಿಕೊಂಡಿದೆ.

• **ವಿಶ್ವಾಸಮತ ಪರೀಕ್ಷೆ ಎದುರಿಸಲು ರಂಗ ಸರ್ಕಾರ ಸಜ್ಜು**

**ನವದೆಹಲಿ, ಜೂನ್ 10 (ಪಿಟಿಐ, ಯುಎನ್‌ಐ)**– ಕೇಂದ್ರದ ಸಚಿವ ಸಂಪುಟ ಇಂದು ಸಂಜೆ ಇಲ್ಲಿ ಸಭೆ ಸೇರಿ, ನಾಳೆ ಲೋಕಸಭೆಯಲ್ಲಿ ವಿಶ್ವಾಸಮತ ಪರೀಕ್ಷೆ ಕಾಲದ ಚರ್ಚೆಯ ಸಂದರ್ಭದಲ್ಲಿ ಅನುಸರಿಸಬೇಕಾದ ಕಾರ್ಯತಂತ್ರದ ಕುರಿತಾಗಿ ಚರ್ಚೆ ನಡೆಸಿತು ಎಂದು ತಿಳಿದುಬಂದಿದೆ.

### 50 ವರ್ಷಗಳ ಹಿಂದೆ

ಶುಕ್ರವಾರ, 11-6-1971

• **ಮೈದಾ, ದಪ್ಪ ಬಟ್ಟೆ ಮೇಲೆ ತೆರಿಗೆ ಇಲ್ಲ**

**ನವದೆಹಲಿ, ಜೂನ್ 10**– ಮೈದಾಹಿಟ್ಟು ಮತ್ತು ದಪ್ಪ ಬಟ್ಟೆಯ ಮೇಲೆ ಸೂಚಿಸಿದ್ದ ಅಧಿಕ ಕರ ಸಲಹೆಯನ್ನು ಕೇಂದ್ರ ಹಣಕಾಸು ಸಚಿವ ಯಶವಂತರಾವ್ ಬಲವಂತರಾವ್ ಚವಾಣ್‌ರವರು ಇಂದು ಲೋಕಸಭೆಯಲ್ಲಿ ವಾಪಸು ಪಡೆದರು.

ಸಂಸತ್ತಿನ ಒಕ್ಕೊರಲಿನ ಈ ಬೇಡಿಕೆಗೆ ಮಣಿದು ಸಚಿವರು ಮಾಡಿದ ಪ್ರಕಟಣೆಯನ್ನು ಸಭೆ ಹರ್ಷಧ್ವನಿಗಳಿಂದ ಸ್ವಾಗತಿಸಿತು.

‘ಆದರೆ ಇದನ್ನು ಬಿಟ್ಟು ಇತರ ತೆರಿಗೆ ಸಲಹೆಗಳಲ್ಲಿ ರಿಯಾಯಿತಿ ಕೇಳದಿರಿ’ ಎಂದು ಅವರು ತಮ್ಮ ಪಕ್ಷದವರಿಗೆ (ಆಡಳಿತ ಕಾಂಗ್ರೆಸ್) ಮನವಿ ಮಾಡಿಕೊಂಡರು.

ಆದರೆ ಪೆಟ್ರೋಲ್ ಮೇಲೆ ಸೂಚಿಸಲಾಗಿರುವ ತೆರಿಗೆಯನ್ನು ತೆಗೆದು ಹಾಕಲು ಅಥವಾ ಕಡಿಮೆ ಮಾಡಲು ಚವಾಣ್ ನಿರಾಕರಿಸಿದರು.

• **ಗ್ರಾಮಗಳ ಶ್ರೀಮಂತರ ಮೇಲೂ ಸಮಾನ ತೆರಿಗೆಗೆ ತತ್ವಶಃ ಒಪ್ಪಿಗೆ**

**ನವದೆಹಲಿ, ಜೂನ್ 10**– ಗ್ರಾಮಗಳಲ್ಲಿರಲಿ, ನಗರಗಳಲ್ಲಿರಲಿ ಶ್ರೀಮಂತರ ಮೇಲೆ ಒಂದೇ ಬಗೆಯಲ್ಲಿ ತೆರಿಗೆ ವಿಧಿಸಬೇಕೆಂಬುದನ್ನು ಹಣಕಾಸು ಸಚಿವ ಚವಾಣರು ಇಂದು ಲೋಕಸಭೆಯಲ್ಲಿ ಒಪ್ಪಿಕೊಂಡರು.

ಸಾಮಾನ್ಯ ಬಜೆಟ್ ಮೇಲೆ ನಡೆದ 20 ಗಂಟೆಗಳ ಚರ್ಚೆಗೆ ಉತ್ತರ ಕೊಟ್ಟ ಸಚಿವರು, ಕೃಷಿರಂಗವನ್ನು ಕೇಂದ್ರ ಸರ್ಕಾರದ ಪ್ರತ್ಯಕ್ಷ ತೆರಿಗೆಗಳ ವ್ಯಾಪ್ತಿಯಿಂದ ಹೊರಗಿಡುವ ಸಂವಿಧಾನದ ಅಡಚಣೆಯನ್ನು ವಿವರಿಸಿ, ಈ ಸಮಸ್ಯೆ ಕುರಿತು ರಾಜ್ಯ ಸರ್ಕಾರಗಳು ಹೊಸ ದೃಷ್ಟಿಯಿಂದ ನೋಡುವಂತೆ ಅವುಗಳನ್ನು ಒಪ್ಪಿಸಬಹುದೆಂದು ಆಶಿಸಿದರು.

ಅಪ್ರಬುದ್ಧ ನಡವಳಿಕೆ ರಾಷ್ಟ್ರೀಯ ವ್ಯಾಧಿಯಾಗಿರುವಾಗ ಐಎಎಸ್‌ನವರು ಹೇಗೆ ಹೊರತಾದಾರು?

# ಮೈಸೂರಲ್ಲಿ ಹರಾಜಾದ ಐಎಎಸ್ ಮಾನ

ಅನುರಣನ

ಎ. ನಾರಾಯಣ

**ದೇಶ** ಕಟ್ಟಲು ದೊಡ್ಡ ಕೊಡುಗೆ ನೀಡಿರುವ ಭಾರತೀಯ ಆಡಳಿತ ಸೇವೆ (ಐಎಎಸ್) ಎಂಬ ಸಾಂವಿಧಾನಿಕ ವ್ಯವಸ್ಥೆಯ ಕ್ಷುಲ್ಲಕೀಕರಣ (trivialisation) ಮತ್ತು ವೈಭವೀಕರಣ (glorification) ಒಟ್ಟೊಟ್ಟಿಗೆ ಕರ್ನಾಟಕದಲ್ಲೀಗ ನಡೆಯುತ್ತಿವೆ. ಐಎಎಸ್‌ಗೆ ಸೇರಿದ ಈರ್ವರು ಸರ್ಕಾರಿ ನೌಕರರ ಜಗಳ ಮತ್ತು ಅದರ ಸುತ್ತಲ ಬೆಳವಣಿಗೆಗಳಿಂದಾಗಿ ಐಎಎಸ್‌ನ ಮಾನ ಅಕ್ಷರಶಃ ಬೀದಿಬೀದಿಗಳಲ್ಲಿ ಹರಾಜಾಗುತ್ತಿದೆ.

ದೇಶದಲ್ಲಿ ಪ್ರಬುದ್ಧತೆ ಎನ್ನುವುದು ಸರ್ವತ್ರ ಕುಸಿಯುತ್ತಿರುವಾಗ, ಐಎಎಸ್‌ನವರನ್ನು ಅದು ಹೇಗಾದರೂ ಬಾಧಿಸದೆ ಬಿಟ್ಟೀತು. ಊರಿಗೆ ಬಂದದ್ದು ಕೇರಿಗೆ ಬರಲೇಬೇಕಲ್ಲ. ಈ ದೇಶದಲ್ಲಿ ಪ್ರಧಾನಿಯಿಂದ ಹಿಡಿದು, ಮುಖ್ಯಮಂತ್ರಿಗಳಿಂದ ಹಿಡಿದು, ನ್ಯಾಯಾಧೀಶರುಗಳಿಂದ ಹಿಡಿದು, ಸಂಸದ-ಶಾಸಕರಿಂದ ಹಿಡಿದು, ಪತ್ರಕರ್ತರಿಂದ ಹಿಡಿದು, ಮಠಾಧೀಶರುಗಳಿಂದ ಹಿಡಿದು, ಸಿನಿಮಾ-ಕ್ರೀಡಾ ರಂಗದ ಸಾಧಕರಿಂದ ಹಿಡಿದು ಯಾರ್‍ಯಾರು ತಮ್ಮ ಸಾಮಾಜಿಕ- ರಾಜಕೀಯ- ಆಡಳಿತಾತ್ಮಕ ಸ್ಥಾನಗಳಲ್ಲಿ ನಿಂತು ಜವಾಬ್ದಾರಿಯಿಂದ ವರ್ತಿಸಬೇಕೋ ಅಂತಹ ಎಲ್ಲಾ ವರ್ಗಗಳಿಗೆ ಸೇರಿದ ಕೆಲವರು ಮತ್ತೆ ಮತ್ತೆ ತೋರುತ್ತಿರುವ ಅಪ್ರಬುದ್ಧ ನಡವಳಿಕೆಗಳ ಪರಂಪರೆಯ ಮುಂದುವರಿದ ಭಾಗವಾಗಿ ಐಎಎಸ್‌ಗೆ ಸೇರಿದ ಇವರೀರ್ವರ ಜಗಳವನ್ನು ಕಾಣಬೇಕಾಗಿದೆ.

ಐಎಎಸ್ ವ್ಯವಸ್ಥೆಯ ಚರಿತ್ರೆಯಲ್ಲಿ ಆಗಬಾರದ ಹಲವು ಘಟನಾವಳಿಗಳು ಆಗಿವೆ. ಆದರೆ, ಈ ಸೇವೆಗೆ ಸೇರಿದ ಒಬ್ಬರು ಇನ್ನೊಬ್ಬರ ಮೇಲೆ ವೃತ್ತಿ ಸಂಬಂಧಿ ಆಪಾದನೆಗಳನ್ನು ಹೊರಿಸಲು ಪತ್ರಿಕಾಗೋಷ್ಠಿ ಕರೆಯುವುದು, ಮಾಧ್ಯಮಗಳ ಮುಂದೆ ಹುಸಿ ರಾಜೀನಾಮೆ ಪತ್ರ ಓದುವುದು, ಇನ್ನೊಬ್ಬರು ತಮ್ಮ ವೃತ್ತಿಯ ಭಾಗವಾಗಿ ನಿಭಾಯಿಸಬೇಕಾಗಿರುವ ಸ್ಥಳೀಯ ರಾಜಕಾರಣಿಗಳ ಅವ್ಯವಹಾರಗಳನ್ನು ಪತ್ರಿಕೆಗಳ ಮೂಲಕ ಬಹಿರಂಗಪಡಿಸುವುದು ಇತ್ಯಾದಿಗಳೆಲ್ಲಾ ಎಲ್ಲೂ ನಡೆದ ಹಾಗಿಲ್ಲ. ಇದು ಸಂಬಂಧಪಟ್ಟವರ ಅಪ್ರಬುದ್ಧತೆಯ ಪ್ರಶ್ನೆ ಮಾತ್ರವಲ್ಲ, ರಾಜಧಾನಿಯಿಂದ ಇವರನ್ನು ನಿಯಂತ್ರಿಸಬೇಕಾದವರ ಸರ್ವತ್ರ ವೈಫಲ್ಯದ ಪ್ರಶ್ನೆ ಕೂಡಾ.

ಜಗಳವಾಡುತ್ತಿದ್ದವರು ಎತ್ತಿದ ವಿಷಯಗಳ ತಪ್ಪು-ಸರಿ ಏನೇ ಇರಲಿ, ಸರ್ಕಾರಿ ನೌಕರಿಗೆ ಸೇರಿ ದಶಕ ಪೂರೈಸುವುದಕ್ಕೆ ಮುನ್ನವೇ ಯಾರಿಗಾದರೂ ಹೀಗೆಲ್ಲಾ ಬಾಲಿಶ ಪ್ರಹಸನಗಳನ್ನು ನಡೆಸಲು ಧೈರ್ಯ ಬರುವುದು ರಾಜಕೀಯ ನಾಯಕತ್ವ ಎನ್ನುವುದು ಸತ್ತುಹೋಗಿದ್ದಾಗ. ಇಲ್ಲವೇ ರಾಜಕೀಯ ನಾಯಕತ್ವವು ಬಾಲಿಶಕ್ಕಿಂತ ಹೆಚ್ಚು ಬಾಲಿಶವಾಗಿ ವರ್ತಿಸುವ ವ್ಯಾಧಿಯಿಂದ ಬಳಲುತ್ತಿರುವಾಗ. ಇಷ್ಟೇ ಅಲ್ಲ, ಪತ್ರಿಕಾಗೋಷ್ಠಿಯಲ್ಲಿ ನೀಡಿದ ‘ರಾಜೀನಾಮೆ’ಯನ್ನು ಸ್ಥಳೀಯ ಮಠದ ಮುಖ್ಯಸ್ಥರೊಬ್ಬರು ಪೌರೋಹಿತ್ಯ ವಹಿಸಿ ಹಿಂತೆಗೆಸಿದರು ಎನ್ನುವ ವರ್ತಮಾನವಿದೆ. ಹಾಗೆಯೇ ಪತ್ರಿಕಾಗೋಷ್ಠಿ, ‘ರಾಜೀನಾಮೆ’ ಇತ್ಯಾದಿಗಳೆಲ್ಲ ಸ್ಥಳೀಯ ಜಗಳಗಂಟಿ ರಾಜಕೀಯ ನಾಯಕರುಗಳು ಹೂಡಿದ ದಾಳವೊಂದರ ಭಾಗವಾಗಿ ನಡೆದದ್ದು ಎಂಬ ಗುಮಾನಿ ಇದೆ. ಇವೆಲ್ಲವೂ ಸತ್ಯವೇ ಆಗಿದ್ದರೆ ಮೈಸೂರಿನಲ್ಲಿ ನಡೆದದ್ದು ಐಎಎಸ್‌ನ ಚಾರಿತ್ರಿಕ ಕ್ಷುಲ್ಲಕೀಕರಣ.

ಒಂದು ಹಳೆಯ ಪ್ರಕರಣ ನೆನಪಾಗುತ್ತದೆ. ತನ್ನ ಮಹಿಳಾ ಸಹೋದ್ಯೋಗಿಗೆ ಕುಡಿತದ ಅಮಲಿನಲ್ಲಿ ರೈಫಲ್ ತೋರಿಸಿ ಜೀವ ಬೆದರಿಕೆ ಹಾಕಿದ್ದಕ್ಕಾಗಿ ವಿ.ಕೆ.ಸಿಂಗ್ ಎಂಬ 1981ರ ಬ್ಯಾಚ್‌ನ ಐಎಎಸ್ ಪ್ರೊಬೇಷನರ್‌ನನ್ನು ವಜಾಗೊಳಿಸಬೇಕು ಎಂದು, ಆಗ ಮಸ್ಸೂರಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅಕಾಡೆಮಿಯ ನಿರ್ದೇಶಕರಾಗಿದ್ದ ಪಿ.ಎಸ್.ಅಪ್ಪು ಕೇಂದ್ರ ಸರ್ಕಾರಕ್ಕೆ ಬರೆಯುತ್ತಾರೆ. ಸರ್ಕಾರ ಹಿಂದೇಟು ಹಾಕಿದ್ದನ್ನು ಪ್ರತಿಭಟಿಸಿ ಅಪ್ಪು ಐಎಎಸ್‌ಗೆ ರಾಜೀನಾಮೆ ನೀಡುತ್ತಾರೆ. ವಿ.ಕೆ.ಸಿಂಗ್ ಅಂತಹವರು ಐಎಎಸ್‌ನಲ್ಲಿ ಯಾಕೆ ಇರಬಾರದು ಎಂಬ ತಮ್ಮ ವಾದವನ್ನು ಸಮರ್ಥಿಸುತ್ತಾ ಅಪ್ಪು ಹೀಗೆ ಬರೆಯುತ್ತಾರೆ: ‘ಸಾಮಾಜಿಕ ನಡವಳಿಕೆಗಳ ಮಟ್ಟ ತೀವ್ರವಾಗಿ ಕುಸಿಯುತ್ತಿರುವ ಈ ಹೊತ್ತಿನಲ್ಲಿ, ಎಲ್ಲರನ್ನೂ ನಿಯಂತ್ರಿಸಬೇಕಾದ ಹೊಣೆ ಹೊತ್ತಿರುವ ಐಎಎಸ್‌ನಂತಹ ಸೇವೆಯಲ್ಲಿ ಪ್ರಬುದ್ಧತೆ ಮತ್ತು ನಿಯಂತ್ರಣದ ಗುಣಗಳನ್ನು ತಮ್ಮ ವೈಯಕ್ತಿಕ ನಡವಳಿಕೆಯಲ್ಲೇ ರೂಢಿಸಿಕೊಳ್ಳಲಾಗದವರು ಯಾವ ಕಾರಣಕ್ಕೂ ಮುಂದುವರಿಯಬಾರದು’.

ವಿ.ಕೆ.ಸಿಂಗ್ ಪ್ರಕರಣಕ್ಕೂ ಮೈಸೂರು ಪ್ರಕರಣಕ್ಕೂ ನೇರ ಹೋಲಿಕೆ ಇಲ್ಲ. ಆದರೆ, ಅಪ್ಪು ಅವರ ಎಚ್ಚರಿಕೆ ಇಲ್ಲೂ ಪ್ರಸ್ತುತ. ಸರ್ಕಾರದ ಕಡೆಯಿಂದ ಒಂದು ಕಠಿಣ ಸಂದೇಶ, ಜಗಳಾಡುತ್ತಿರುವ ಈರ್ವರಿಗೂ ಹೋಗಿಲ್ಲ ಎನ್ನುವುದು ದುರಂತ. ಕಠಿಣ ಸಂದೇಶವು ಹಾಗಿರಲಿ, ಜಗಳದ ಓರ್ವರು ಭಾಗೀದಾರರ ಬಗ್ಗೆ ಚಲನಚಿತ್ರ ಮಾಡಲು ತಯಾರಿ ನಡೆಯುತ್ತಿದೆಯಂತೆ. ಕನ್ನಡ ಸಿನಿಮಾದ ಯೋಚನಾ ದಾರಿದ್ರ್ಯದ ಬಗ್ಗೆ ಏನು ಹೇಳುವುದು? ಪ್ರಚಾರದಲ್ಲಿರುವವರೆಲ್ಲಾ ಮಹಾನ್ ಸಾಧಕರಲ್ಲ ಅಂತ ಸಿನಿಮಾದವರಿಗೆ ಯಾವತ್ತು ತಿಳಿಯುವುದು? ಹಿಂದೆ ಬಂದ ಇಂತಹ ಭಟ್ಟಂಗಿ ಚಲನಚಿತ್ರಗಳೇ ಕನ್ನಡಕ್ಕೊಂದು ಕಳಂಕ.

ಐಎಎಸ್, ಐಪಿಎಸ್‌ನ ಅಸಹ್ಯಕರ ವೈಭವೀಕರಣ ಒಂದು ಪಿಡುಗು. ಎಲ್ಲ ರಾಷ್ಟ್ರಗಳಲ್ಲೂ ಉನ್ನತ ಆಡಳಿತ ಸೇವೆ ಇರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳೂ ನಡೆಯುತ್ತವೆ. ಆದರೆ ಯಾವ ರಾಷ್ಟ್ರಗಳಲ್ಲೂ ಆಯ್ಕೆಯಾದವರ ಫೋಟೊಗಳನ್ನು ಪತ್ರಿಕೆಗಳು ಪ್ರಕಟಿಸುವುದಿಲ್ಲ. ಸೇವೆಗೆ ಸೇರಿದವರು ಸಾಯುವವರೆಗೆ ಐಎಎಸ್, ಐಪಿಎಸ್ ಅಂತ ಹೆಸರಿನೆದುರು ಬರೆದುಕೊಳ್ಳುವುದಿಲ್ಲ. ಉಳಿದ ಸೇವೆಗಳಲ್ಲಿರುವವರು ಪ್ರಾಯ, ಪರಿಣತಿ, ಆತ್ಮಗೌರವ ಬಿಟ್ಟು ಇವರುಗಳಿಗೆ ಡೊಗ್ಗು ಸಲಾಂ ಮಾಡಬೇಕಾದ ಪರಿಪಾಟ ಎಲ್ಲೂ ಇಲ್ಲ. ಹಾಗಾಗಿ ಭಾರತದಲ್ಲೀಗ ಬೇಕಾಗಿರುವುದು ಐಎಎಸ್, ಐಪಿಎಸ್‌ಗಳನ್ನು ಸ್ವಲ್ಪ ನೆಲಕ್ಕಿಳಿಸುವ ಸಿನಿಮಾಗಳು; ಹೊಗಳಿ ಅಟ್ಟಕ್ಕೇರಿಸುವ ಸಿನಿಮಾಗಳಲ್ಲ.





ಬಹಳ ಮಂದಿಗೆ ತಿಳಿಯದ ಒಂದು ವಿಷಯ. ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್‌ಗಳೊಳಗೂ ಒಂದು ವರ್ಣಾಶ್ರಮ ಪದ್ಧತಿ ಇದೆ. ಸಮಾಜದಲ್ಲಿ ನಾಲ್ಕು ವರ್ಣಗಳಿದ್ದರೆ, ಇಲ್ಲಿ ಮೂರು ವರ್ಣಗಳಿವೆ. ನೇರವಾಗಿ ಆಯ್ಕೆಯಾದ ‘ಮೇಲ್ವರ್ಗ’ (RR), ರಾಜ್ಯ ಆಡಳಿತ ಸೇವೆಗೆ ಸೇರಿ ಅಲ್ಲಿಂದ ಪದೋನ್ನತಿ ಪಡೆದ ‘ಮಧ್ಯಮ ವರ್ಗ’ (SCS), ರಾಜ್ಯಗಳ ಕಿರಿಯ ಶ್ರೇಣಿಯ ಹುದ್ದೆಗಳಿಂದ ಪದೋನ್ನತಿ ಪಡೆಯುವ ‘ಕೆಳವರ್ಗ’ (Non-SCS). ಈ ವರ್ಣಗಳ ಕುರಿತು ಬಹಳಷ್ಟು ಹೇಳುವುದಿದೆ. ಅವುಗಳ ಸೃಷ್ಟಿಯ ಹಿನ್ನೆಲೆಯಲ್ಲಿರುವ ಸಾಂವಿಧಾನಿಕ ಕಾರಣಗಳೂ ಕುತೂಹಲಕಾರಿಯಾಗಿವೆ. ಎಲ್ಲವನ್ನೂ ವಿವರಿಸಲು ಸ್ಥಳಾವಕಾಶ ಇಲ್ಲ. ಪ್ರಸ್ತುತವಾಗಿರುವ ಒಂದು ವಿಷಯ ಮಾತ್ರ ಹೇಳಲೇಬೇಕಿದೆ.

ಐಎಎಸ್, ಐಪಿಎಸ್‌ಗೆ ನೇರವಾಗಿ ಆಯ್ಕೆ ಆಗುವವರು ತಮ್ಮ ಇಪ್ಪತ್ತು-ಮೂವತ್ತರ ಹರೆಯದಲ್ಲಿ ಒಂದೆರಡು ವರ್ಷಗಳ ವೃತ್ತಿ ಅನುಭವ ಪಡೆದು ಜಿಲ್ಲಾಡಳಿತದ/ ಜಿಲ್ಲಾ ಪೊಲೀಸ್ ವ್ಯವಸ್ಥೆಯ ಮುಖ್ಯಸ್ಥರಾಗಿ ಕೆಲಸ ಮಾಡುವ ಅವಕಾಶ ಪಡೆಯುತ್ತಾರೆ. ಇದು ಬ್ರಿಟಿಷ್ ಬಳುವಳಿ. ಇದನ್ನೀಗ ಬದಲಿಸಬೇಕಿದೆ.

ಭಾರತೀಯ ಸಮಾಜದ ಒಟ್ಟು ಪ್ರಬುದ್ಧತೆಯ ಮಟ್ಟ ತೀವ್ರವಾಗಿ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಮತ್ತು ನಮ್ಮ ಉನ್ನತ ಶಿಕ್ಷಣವು ಹೃದಯವಂತ ಮನುಷ್ಯರಿಗಿಂತ ಹೆಚ್ಚಾಗಿ ‘ಬುದ್ಧಿವಂತ ಯಂತ್ರ’ಗಳಂತಹವರನ್ನು ಮಾತ್ರ ಸೃಷ್ಟಿಸುತ್ತಿರುವುದರಿಂದ ನೇರ ಐಎಎಸ್, ಐಪಿಎಸ್‌ಗೆ ಆಯ್ಕೆ ಆಗುವವರು ತಮ್ಮ ವೃತ್ತಿಯ ಆರಂಭದಲ್ಲೇ ಜಿಲ್ಲಾಧಿಕಾರಿ/ ಪೊಲೀಸ್ ವರಿಷ್ಠರಾಗಲು ಅಥವಾ ಸ್ಥಳೀಯ ಸರ್ಕಾರಗಳಾದ ಜಿಲ್ಲಾ ಪಂಚಾಯಿತಿ, ನಗರಪಾಲಿಕೆಗಳಲ್ಲಿ ಆಡಳಿತದ ಮುಖ್ಯಸ್ಥರಾಗಲು ಬೇಕಾದಷ್ಟು ಮಾನಸಿಕ-ಭಾವನಾತ್ಮಕ ಪಕ್ವತೆ ಗಳಿಸಿರುವುದಿಲ್ಲ ಅನ್ನಿಸುತ್ತದೆ. ಕೇವಲ ಬುದ್ಧಿವಂತಿಕೆಯಿಂದ ಆಡಳಿತ ನಡೆಸುವ ಕಾಲ ಮುಗಿದಿದೆ. ಹಾಗಾಗಿ, ರಾಜ್ಯ ಸೇವೆಯಿಂದ ಐಎಎಸ್‌ಗೆ ಬಡ್ತಿ ಪಡೆಯುವವರನ್ನೇ (SCS) ಜಿಲ್ಲಾ ಮಟ್ಟದ ಆಡಳಿತ ಮುಖ್ಯಸ್ಥರ ಹುದ್ದೆಗಳಿಗೆ ನೇಮಿಸಿದರೆ ಉತ್ತಮ. ಅವರಿಗೆ ದೀರ್ಘ ಅನುಭವ ಇರುತ್ತದೆ. ಮಣ್ಣಿನ ಸಂಪರ್ಕ ಹೆಚ್ಚಿರುತ್ತದೆ. ಮುಖ್ಯವಾಗಿ, ವಯಸ್ಸಿನ ಹಿರಿತನ ಇರುತ್ತದೆ. ಆದರೆ ಇಲ್ಲೊಂದು ಅಪಾಯ ಇದೆ. ರಾಜ್ಯ ಆಡಳಿತ/ಪೊಲೀಸ್ ಸೇವೆಗೆ ರಾಜ್ಯ ಲೋಕಸೇವಾ ಆಯೋಗದ ಮೂಲಕ ನಡೆಯುವ ಆಯ್ಕೆಯ ಹತ್ತಿಪ್ಪತ್ತು ಪ್ರತಿಶತ ಅಷ್ಟೇ ಸಮರ್ಪಕವಾಗಿ ನಡೆಯುವುದು. ಉಳಿದದ್ದು ಜಾತಿ, ಹಣ, ವೈವಾಹಿಕ ಒಪ್ಪಂದ ಇತ್ಯಾದಿಗಳ ಆಧಾರದ ಮೇಲೆ ಹರಾಜಾಗುತ್ತದೆ. ಇದನ್ನು ಸರಿಪಡಿಸಲು ಸಾಧ್ಯವಾದಲ್ಲಿ, ರಾಜ್ಯ ಸೇವೆಯಿಂದ ಪದೋನ್ನತಿ ಪಡೆದವರು ಜಿಲ್ಲಾ ಮಟ್ಟದ ಆಡಳಿತಕ್ಕೆ ಹೆಚ್ಚು ಸೂಕ್ತರಾಗಬಹುದು.

ಏನೇ ಮಾಡಿದರೂ ಸರಿ, ಸ್ಥಳೀಯ ರಾಜಕೀಯ ನಾಯಕರು ಮತ್ತು ಸರ್ಕಾರಿ ಸೇವೆಯಲ್ಲಿ ಇರುವವರು ಆಡಳಿತದ ಹೆಸರಿನಲ್ಲಿ ನಡೆಸುತ್ತಿರುವ ಮಕ್ಕಳಾಟವನ್ನು ನಿಲ್ಲಿಸಬೇಕಿದೆ.

### ಚುರುಮುರಿ

## ಸೆಂಚುರಿ ಸಂಭ್ರಮ

• ಮಣ್ಣೆ ರಾಜು

**ಬೈಕಿನಲ್ಲಿ** ಹೊರಟಿದ್ದ ಶಂಕ್ರಿ, ಸುಮಿಯನ್ನು ಪೆಟ್ರೋಲ್ ಬಂಕ್‌ನವರು ‘ಬನ್ನಿ ಬನ್ನಿ...’ ಅಂತ ಕರೆದರು.

‘ಪೆಟ್ರೋಲ್ ರೇಟು ಲೀಟರ್‌ಗೆ ನೂರು ರೂಪಾಯಿ ದಾಟಿರುವುದರಿಂದ ‘ಬೈ ಒನ್ ಲೀಟರ್ ಗೆಟ್ ಒನ್ ಲೀಟರ್’ ಆಫರ್ ಇರಬಹುದು’ ಎಂದು ಶಂಕ್ರಿಯನ್ನು ಸುಮಿ ಕರೆದೊಯ್ದಳು.

ಅಲ್ಲೊಬ್ಬ ಸ್ವೀಟ್ ಕೊಟ್ಟ.

‘ಸ್ವೀಟ್ ಯಾಕೆ?’ ಶಂಕ್ರಿ ಕೇಳಿದ.

‘ನಾವು ಸೆಂಚುರಿ ಸಂಘದವರು, ಪೆಟ್ರೋಲ್ ರೇಟು ಸೆಂಚುರಿ ಬಾರಿಸಿದ್ದಕ್ಕೆ ಸಂಭ್ರಮ ಆಚರಿಸುತ್ತಿದ್ದೇವೆ’.

‘ಹೌದು, ಕ್ರಿಕೆಟ್ ಪ್ಲೇಯರ್ಸ್ ಸೆಂಚುರಿ ಬಾರಿಸಿದಾಗ, ಸಿನಿಮಾ ಶತದಿನ ಪೂರೈಸಿದಾಗ ಹೀಗೇ ಸೆಲೆಬ್ರೇಟ್ ಮಾಡ್ತೀವಿ’ ಅಂದ ಇನ್ನೊಬ್ಬ.

‘ಯಾರಾದ್ರೂ ಶತಾಯುಷಿಗಳಿದ್ದರೆ ಹೇಳಿ, ಅವರಿಗೆ ಶಾಲು ಹೊದಿಸಿ ಸನ್ಮಾನ ಮಾಡ್ತೀವಿ’ ಅಂದ ಮತ್ತೊಬ್ಬ.

‘ಪೆಟ್ರೋಲ್ ರೇಟು ನೂರು ರೂಪಾಯಿ ದಾಟಿರೋದು ದುಃಖದ ವಿಚಾರ ಅಲ್ವಾ?’ ಅಂದ ಶಂಕ್ರಿ.

‘ನೀವು ನಾಯಿ ಸಾಕಿದ್ದೀರಾ?’

‘ಸಾಕಿದ್ದೀವಿ, ಬೊಗಳೋಲ್ಲ, ಕಚ್ಚೋಲ್ಲ, ಒಳ್ಳೆ ನಾಯಿ...’ ಅಂದಳು ಸುಮಿ.

‘ನಾಯಿ ಮನೆಯನ್ನೂ ಕಾಯೋದಿಲ್ಲ, ಮನೆಯಿಂದ ಆಚೆ ಹೋಗದಂತೆ ನಾವೇ ನಾಯಿಯನ್ನು ಕಾಯುತ್ತೇವೆ’ ಅಂದ ಶಂಕ್ರಿ.

‘ಕೆಲಸಕ್ಕೆ ಬಾರದ ನಾಯಿಯ ಮೇನ್‌ಟೇನೆನ್ಸ್‌ಗೆ ಎಷ್ಟು ಖರ್ಚಾಗುತ್ತದೆ?’

‘ಬೈಕ್ ಸಾಕುವುದಕ್ಕಿಂತ ನಾಯಿ ಸಾಕುವುದು ದುಬಾರಿ... ಕೊರೊನಾ ಕಾಟದಲ್ಲಿ ನಮ್ಮನ್ನು ನಾವು ಸಾಕಿಕೊಳ್ಳುವುದೇ ಕಷ್ಟ ಆಗಿದೆ’ ಅಂದ ಶಂಕ್ರಿ.

‘ಕೊರೊನಾದಿಂದ ನಿಮ್ಮನ್ನ ರಕ್ಷಿಸಲೆಂದೇ ಸರ್ಕಾರ ಪೆಟ್ರೋಲ್ ಬೆಲೆ ಏರಿಸಿದೆ’ ಎಂದ ಒಬ್ಬ.

‘ಬೆಲೆ ಹೆಚ್ಚಳಕ್ಕೆ ಬೇಸರ ಬೇಡ. ನಿಮ್ಮ ಹೆಚ್ಚುವರಿ ಪೆಟ್ರೋಲ್ ಹಣವನ್ನು ಸರ್ಕಾರ ಲಸಿಕೆಯಾಗಿ ಪರಿವರ್ತಿಸಿ ನಿಮಗೇ ನೀಡಿ, ನಿಮ್ಮ ಆರೋಗ್ಯ ಕಾಪಾಡುತ್ತದೆ...’ ಎಂದ ಇನ್ನೊಬ್ಬ.

ಸರ್ಕಾರಿ ಸೇವೆ ಶ್ಲಾಘಿಸಿ ಶಂಕ್ರಿ, ಸುಮಿ ಬೈಕಿಗೆ ಪೆಟ್ರೋಲ್ ತುಂಬಿಸಿಕೊಂಡು ಹೊರಟರು.

### ಸಂಗತ

## ಜೀವಪರ ಕಲೆ ಬೊಕ್ಕಸಕ್ಕೆ ಭಾರವೇ?

**ಕೋವಿಡ್ ಸಂಕಷ್ಟದ ಕಾಲದಲ್ಲಿ ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳು ಬೊಕ್ಕಸಕ್ಕೆ ಭಾರವಾಗಿವೆ ಎಂದು ಕೆಲವರು ಕೂಗೆಬ್ಬಿಸಿರುವುದು ಹಾಸ್ಯಾಸ್ಪದ ಸಂಗತಿ**

• ಮಲ್ಲಿಕಾರ್ಜುನ ಹೆಗ್ಗಳಗಿ

**ಲೆಬನಾನಿನ** ಲೇಖಕ ಖಲೀಲ್ ಗಿಬ್ರಾನ್ ಬರೆದ ‘ಬಿಲ್ಡರ್ಸ್ ಆಫ್ ಬ್ರಿಡ್ಜಸ್’ ಎಂಬ ಕಥೆ ಪ್ರಸಿದ್ಧವಾಗಿದೆ. ಈ ಕಥೆಯು ಅಸ್ಸಿ ನದಿಯ ಮೇಲೆ ಕಟ್ಟಲಾದ ಒಂದು ಸೇತುವೆ ಕುರಿತಾದದ್ದು. ಕಟ್ಟುವುದು ಮುಗಿದ ಮೇಲೆ ‘ದೊರೆ ಅಂಟಿಯೋರಸ್ ಕಟ್ಟಿದ್ದಾನೆ, ದೊರೆಯಿಂದಾಗಿ ಜನ ಬದುಕಿದ್ದಾರೆ’ ಎಂಬ ಫಲಕ ಕೆತ್ತಲಾಗುತ್ತದೆ. ಇದನ್ನು ಕಂಡು ರೋಸಿ ಹೋದ ಗಿಬ್ರಾನ್, ‘ಸೇತುವೆ ಕಟ್ಟಲು ಕಲ್ಲುಗಳನ್ನು ಹೊತ್ತು ತಂದಿದ್ದು ಕತ್ತೆಗಳು, ಜನರು ಬದುಕುವುದು ದೊರೆಯಿಂದಲ್ಲ; ಕಲೆಯಿಂದ’ ಎಂದು ಹೇಳುವ ಕಥೆ ಹೆಣೆದಿದ್ದಾರೆ. ತರತಮಗಳಿರುವ ಸಮಾಜದಲ್ಲಿ ಸಾಹಿತ್ಯವು ಪ್ರತಿಪಕ್ಷವಾಗಿ ಕೆಲಸ ಮಾಡುತ್ತದೆ ಎಂಬ ಆಶಯಕ್ಕೆ ಈ ಕಥೆ ಸಾಕ್ಷಿಯಾಗಿ ನಿಲ್ಲುತ್ತದೆ.

ರಾಜ್ಯದ ಅಕಾಡೆಮಿಗಳು, ಪ್ರಾಧಿಕಾರಗಳನ್ನು ಸರ್ಕಾರ ತಕ್ಷಣ ವಿಸರ್ಜಿಸಬೇಕು. ಕೋವಿಡ್-19 ಸಂಕಷ್ಟದ ಕಾಲದಲ್ಲಿ ಇವು ಬೊಕ್ಕಸಕ್ಕೆ ಭಾರವಾಗಿವೆ ಎಂದು ಕೆಲವರು ಕೂಗೆಬ್ಬಿಸಿರುವುದು ಹಾಸ್ಯಾಸ್ಪದ ಸಂಗತಿಯಾಗಿದೆ. ದುಡ್ಡು ಒಂದೇ ಬದುಕನ್ನು ಮುನ್ನಡೆಸುತ್ತದೆ ಎಂದು ಇವರು ನಂಬಿದಂತೆ ಕಾಣುತ್ತದೆ.

ಕಲೆ, ಸಾಹಿತ್ಯ, ಸಂಗೀತ, ನೃತ್ಯಕ್ಕೆ ಮನುಷ್ಯರನ್ನು ಪೊರೆಯುವ ಅಪರೂಪದ ಶಕ್ತಿಯಿದೆ. ಇಂಥ ಅನುಭೂತಿಯಿಂದಲೇ ಉಳಿದ ಪ್ರಾಣಿಗಳಿಗಿಂತ ಮನುಷ್ಯ ಭಿನ್ನವಾಗಿ ಬೆಳೆದಿದ್ದಾನೆ, ಬೆಳೆಯುತ್ತಿದ್ದಾನೆ.

ಡಾ. ಪುಟ್ಟರಾಜ ಗವಾಯಿಗಳನ್ನು ‘ಸಾವಿರಾರು ಅಂಧ ಮಕ್ಕಳಿಗೆ ಸಂಗೀತ ಕಲಿಸಿ ಉದ್ಧಾರ ಮಾಡಿದ್ದೀರಿ’ ಎಂದು ಕಾರ್ಯಕ್ರಮವೊಂದರಲ್ಲಿ ಡಾ. ರಾಜ್‌ಕುಮಾರ್ ಶ್ಲಾಘಿಸಿದರು. ಆಗ ಗವಾಯಿಗಳು ‘ನಾನು ಸಂಗೀತ ಕಲಿಸುವುದು ಇನ್ನೊಬ್ಬರ ಉದ್ಧಾರಕ್ಕೆ ಅಲ್ಲ; ನನ್ನ ಉದ್ಧಾರಕ್ಕೆ. ಮಕ್ಕಳಿಗೆ ಪಾಠ ಹೇಳುವುದು ನನ್ನ ಆತ್ಮೋನ್ನತಿಗೆ’ ಎಂದರು. ಡಾ. ರಾಜ್ ಭಾವುಕರಾಗಿ ತುಂಬಿದ ಸಭೆಯಲ್ಲಿ ಗವಾಯಿಗಳ ಚರಣ ಮುಟ್ಟಿ ನಮಸ್ಕರಿಸಿದರು.

ರೂಸೊ ವೈಚಾರಿಕ ಸಾಹಿತ್ಯವು ಟಾಲ್‌ಸ್ಟಾಯ್ ಅವರನ್ನು ರೂಪಿಸಿತು. ಟಾಲ್‌ಸ್ಟಾಯ್ ಬರಹಗಳು ಗಾಂಧೀಜಿ ಅವರನ್ನು ಪ್ರೇರೇಪಿಸಿದವು. ಟಾಲ್‌ಸ್ಟಾಯ್ ‘ಎ ಲ್ಯಾಂಡ್‌ಲಾರ್ಡ್ಸ್ ಮಾರ್ನಿಂಗ್’ ಎಂಬ ಮಹತ್ವದ ಕೃತಿ ರಚಿಸಿದ್ದಾರೆ. ಒಬ್ಬ ರಷ್ಯನ್ ಜಮೀನ್ದಾರ ಹಾಗೂ ಸಾವಿರಾರು ಕೃಷಿ ಕೂಲಿಕಾರರ ನಡುವಿನ ಸಂಘರ್ಷದ ಚಿತ್ರಣ ಇದರಲ್ಲಿದೆ. ಈ ಕೃತಿ ಜಗತ್ತಿನ ತುಂಬ ‘ಉಳುವವನಿಗೆ ಹೊಲ; ಬೆಳೆಯುವವನಿಗೆ ಬೆಳೆ’ ಎಂಬ ರೈತಕ್ರಾಂತಿಗೆ ಕಾರಣವಾಯಿತು. ಕರ್ನಾಟಕದಲ್ಲಿ ‘ಉಳುವವನೇ ಹೊಲದೊಡೆಯ’ ಎಂಬ ಕಾನೂನು ರೂಪುಗೊಳ್ಳುವುದಕ್ಕೆ ಪ್ರೇರಣೆಯಾಯಿತು.

ಎಲ್ಲಕ್ಕಿಂತಲೂ ಮುಖ್ಯವಾಗಿ ಜೀವನಕ್ಕೆ ಹತ್ತಿರವಾಗುವ ಜೀವಪರ ಸಂಗತಿಯೆಂದರೆ, ಕಲೆ, ಸಂಸ್ಕೃತಿಯು ಸಂಕಟದಲ್ಲಿರುವ ಸಮುದಾಯಕ್ಕೆ ಪ್ರತಿರೋಧಿಸುವ ಚೈತನ್ಯವನ್ನು ತುಂಬಿ, ಪರ್ಯಾಯ ಮಾರ್ಗಗಳ ಹುಡುಕಾಟಕ್ಕೆ ಪ್ರೇರೇಪಿಸುತ್ತವೆ. ಕೋವಿಡ್ ಸಂಕಷ್ಟದ ಈ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸ್ಫೂರ್ತಿ ತುಂಬುವ ಮಾತು, ಹಾಡು, ನೃತ್ಯ, ಕಥೆ, ಚಿತ್ರ, ಜೋಕು, ಸಲಹೆ ಹೀಗೆ ಅನೇಕ ಸಂಗತಿಗಳು ಹರಿದಾಡುತ್ತಿವೆ. ಕೆಲವರು ತಮ್ಮ ನೋವುಗಳನ್ನು ಹೇಳಿಕೊಂಡು ಮನಸ್ಸು ಹಗುರ ಮಾಡಿಕೊಳ್ಳುತ್ತಿದ್ದಾರೆ.

ಮಾನವಜೀವಿಗಳನ್ನು ಮನುಷ್ಯರನ್ನಾಗಿ ರೂಪಿಸುವುದು ಕಲೆ. ‘ಗದಾಯುದ್ಧ’ ಕಾವ್ಯದಲ್ಲಿ ಮಹಾಕವಿ ರನ್ನ, ದೊರೆಗೆ ನೆಲದ ಮೇಲೆ ಬರಿಗಾಲಿನಲ್ಲಿ ನಿಲ್ಲುವ ಗಮ್ಯವನ್ನು ಹೇಳಿಕೊಡುತ್ತಾನೆ. ಇಂತಹ ಮೌಲ್ಯಗಳ ಪ್ರತಿಪಾದನೆಯಿಂದಾಗಿಯೇ ರನ್ನ ಕವಿಯ ಕಾವ್ಯ ಸಾವಿರ ವರ್ಷಗಳ ನಂತರವೂ ಪ್ರಸ್ತುತವಾಗಿ ಉಳಿದಿದೆ.

70ರ ದಶಕದಲ್ಲಿ ಬಂದ ‘ಸಂಪತ್ತಿಗೆ ಸವಾಲ್’ ಕನ್ನಡ ನಾಟಕ ದೊಡ್ಡ ಸಂಚಲನವನ್ನು ಮೂಡಿಸಿತು. ಶ್ರೀಮಂತರ ಅಹಂಕಾರ, ದಬ್ಬಾಳಿಕೆಗಳನ್ನು ಬಡತನದಲ್ಲಿ ಬೆಂದ ಯುವಕನೊಬ್ಬ ಧೈರ್ಯವಾಗಿ ಪ್ರತಿಭಟಿಸುತ್ತಾನೆ. ಇದು ಎಲ್ಲ ಬಡ ನೊಂದ ಯುವಕರ ಧ್ವನಿಯಾಗುವುದು ಈ ನಾಟಕದ ಹಿರಿಮೆಯಾಗಿದೆ. ಇದು ಚಲನಚಿತ್ರವಾಗಿಯೂ ಗಮನಸೆಳೆಯಿತು. ಹೆಚ್ಚು ಓದದ, ತುಂಬ ಬಡತನದಿಂದ ಬಂದ ಪಿ.ಬಿ.ಧುತ್ತರಗಿ ಈ ನಾಟಕ ರಚಿಸಿದ್ದಾರೆ.



ರಾಮನಿಗಿಂತ ‘ರಾಮಾಯಣ’ ದೊಡ್ಡದು ಎನ್ನುವ ಮಾತೊಂದಿದೆ. ಕಾವ್ಯಕ್ಕೆ ಕಾವ್ಯದ ನಾಯಕನಿಗಿಂತ ಹೆಚ್ಚಿನ ಮೌಲ್ಯವನ್ನು ಈ ಮಾತು ದೃಢಪಡಿಸುತ್ತದೆ. ‘ಅರೇಬಿಯನ್ ನೈಟ್ಸ್’ ಸಾವಿರ ಕಥೆಗಳು ಸಾವನ್ನು ಗೆಲ್ಲುವ ಸಂಕೇತವಾಗಿ ನಿಲ್ಲುತ್ತವೆ. ಎಸ್ಕಿಮೋ ಜನರು ಯಾವುದೋ ಗಳಿಗೆಯಲ್ಲಿ ತಮ್ಮ ಮೇಲೆ ಹಿಮದ ರಾಶಿ ಬಿದ್ದು ಸತ್ತು ಹೋಗುವ ಆತಂಕದಲ್ಲಿ ಇದ್ದಾಗ, ಒಬ್ಬರಿಗೊಬ್ಬರು ಕಥೆ ಹೇಳಿಕೊಂಡು ನೆಮ್ಮದಿ ಹುಡುಕುವುದು ಅನನ್ಯವಾದದ್ದು.

ಬಾಲ್ಯದಲ್ಲಿ ತಾಯಿ, ಅಜ್ಜಿ ಹೇಳಿದ ಕಥೆಗಳು ನಮ್ಮ ಜೀವನದುದ್ದಕ್ಕೂ ಚೈತನ್ಯರೂಪಿಯಾಗಿ ಉಳಿದಿರುತ್ತವೆ. ಕವಿ ಈಶ್ವರ ಸಣಕಲ್ಲ ಅವರು ಸುಮಾರು 8 ದಶಕಗಳ ಹಿಂದೆ ಬರೆದ ‘ಕೋರಿಕೆ’ ಕವಿತೆ ಜಗತ್ತಿನ ಬಹಳಷ್ಟು ಭಾಷೆಗಳಿಗೆ ಅನುವಾದಗೊಂಡಿದೆ. ಜಗವೆಲ್ಲ ನಗುತಿರಲಿ! ಜಗದಳುವು ನನಗಿರಲಿ! ನಾನಳಲು ಜಗವೆನ್ನ ನೆತ್ತಿಕೊಳದೇ? ನಾ ನಕ್ಕು, ಜಗವಳಲು ನೋಡಬಹುದೇ?– ಸಣಕಲ್ಲ ಅವರ ಕವಿತೆಯ ಈ ಸಾಲುಗಳು ಕೋವಿಡ್ ಕಾಲಮಾನದ ಎಲ್ಲರ ಕೋರಿಕೆಯಾಗಿವೆ.

ಕಲೆ, ಸಂಗೀತ, ಸಾಹಿತ್ಯ ಸದಾ ಮನುಕುಲವ ಪೊರೆವ ತೊಟ್ಟಿಲು. ಕಲೆ ಇಲ್ಲದ ಜಗತ್ತನ್ನು ಊಹಿಸುವುದು ಸಾಧ್ಯವಿಲ್ಲ. ಕಲೆಯನ್ನು ಪ್ರೀತಿಸುವವರು ಮನುಷ್ಯರನ್ನು ಪ್ರೀತಿಸುತ್ತಾರೆ ಎಂದು ಖಲೀಲ್ ಗಿಬ್ರಾನ್ ಹೇಳಿದ ಮಾತು ಮತ್ತೆ ಮತ್ತೆ ನೆನಪಾಗುತ್ತದೆ.

### ವಾಚಕರ ವಾಣಿ

## ಎಲ್ಲ ಹಾಡನ್ನೂ ಒಪ್ಪಲು ಸಾಧ್ಯವೇ?

‘ಇಂದಿನ ಚಿತ್ರಗೀತೆಗಳಲ್ಲಿ ಅರುಚಿಯೇ ಅಭಿರುಚಿಯಾದಂತಿದೆ’ ಎಂಬ ಡಾ. ದೊಡ್ಡರಂಗೇಗೌಡ ಅವರ ಅಭಿಪ್ರಾಯಕ್ಕೆ (ಸಂಗತ, ಮೇ 28) ‘ಚಿತ್ರಗೀತೆಗಳಲ್ಲಿ ಹೊಸ ಪ್ರಯೋಗಗಳೆಲ್ಲ ಅರುಚಿ ಅಲ್ಲ’ ಎಂದು ಸುಗ್ಗನಹಳ್ಳಿ ಷಡಕ್ಷರಿ ಪ್ರತಿಕ್ರಿಯಿಸಿದ್ದಾರೆ (ವಾ.ವಾ., ಜೂನ್ 10). ಈ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಅಲ್ಲದೆ, ಚಿತ್ರಗೀತೆಗಳಲ್ಲಿ ಹೊಸ ಪ್ರಯೋಗ ಬೇಡ ಎಂದು ದೊಡ್ಡರಂಗೇಗೌಡ ಅವರು ಹೇಳಿಲ್ಲ. ಬದಲಾಗಿ, ಇವತ್ತಿನ ಚಿತ್ರಗೀತೆಗಳಲ್ಲಿ ಮೌಲ್ಯಗಳಿಲ್ಲ ಎಂದಿದ್ದಾರೆ.

ಸಮಾಜಕ್ಕೆ ಸಂದೇಶವಾಹಿನಿ ಆಗುವ ಚಿತ್ರಗೀತೆಗಳಲ್ಲಿ ಈಗ ಕೀಳು ಅಭಿರುಚಿ ಹೆಚ್ಚು ಧ್ವನಿಸುತ್ತಿದೆ. ಅಪರೂಪವಾಗಿ ಯಾವುದೋ ಒಂದು ಒಳ್ಳೆಯಗೀತೆ ಸಿಕ್ಕ ಮಾತ್ರಕ್ಕೆ ಈಗಿನ ಎಲ್ಲ ಹಾಡುಗಳನ್ನೂ ಒಪ್ಪಿಕೊಳ್ಳಲು ಸಾಧ್ಯವೇ? ಸಾಕಷ್ಟು ಗದ್ಯಮಯವಾದ, ಪ್ರಾಸಕ್ಕಾಗಿ ಅಪಭ್ರಂಶ ತರುವ, ಸತ್ವ ಇಲ್ಲದೆ ಬರೀ ಟೊಳ್ಳಾಗಿ ಕಾಣಿಸುವ ಗೀತೆಗಳು ಹಿಂದಿನ ಮೌಲಿಕ ಗೀತೆಗಳಿಗೆ ಸಮವೇ? ಚಿತ್ರರಂಗದ ಹೊಸಬರಿಂದಲೂ ತಮ್ಮ ಸೃಜನಶೀಲತೆ, ಕ್ರಿಯಾಶೀಲತೆಯಿಂದ ಸಮಾಜಕ್ಕೆ ಒಳ್ಳೆಯದನ್ನು ಕೊಡಲು ಸಾಧ್ಯವಿದೆ ಅಲ್ಲವೇ?

**ಡಾ. ಡಿ.ಭರತ್,** ಬೆಂಗಳೂರು

## ಪರೀಕ್ಷೆ ರದ್ದು: ಸರ್ಕಾರಿ ಉದ್ಯೋಗಕ್ಕೆ ಕುತ್ತಾಗದಿರಲಿ

ರಾಜ್ಯ ಸರ್ಕಾರವು ಪಿಯು ಪರೀಕ್ಷೆಗಳನ್ನು ರದ್ದುಪಡಿಸಿರುವುದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾರಕವಾಗಿದೆ. ಹೆಚ್ಚಿನ ಅಂಕ ಪಡೆಯಬೇಕೆಂಬ ಉದ್ದೇಶದಿಂದ ಹಗಲು, ರಾತ್ರಿ ಎನ್ನದೇ ಓದಿರುವ ವಿದ್ಯಾರ್ಥಿಗಳಿಗೆ ನಿರಾಸೆಯಾಗಿದೆ. ಪಿಯು ನಂತರದ ವೃತ್ತಿಪರ ತರಗತಿಗಳ ಆಯ್ಕೆಗೆ ನಡೆಸುವ ಸಿಇಟಿ ಪರೀಕ್ಷೆಗೆ ಪಿಯು ಅಂಕಗಳನ್ನು ಪರಿಗಣಿಸುವುದಿಲ್ಲ ಎಂದು ಸರ್ಕಾರ ಹೇಳಿದೆ. ಪಿಯು ಪರೀಕ್ಷೆಗಿಂತ ಸಿಇಟಿ ಪರೀಕ್ಷೆ ಕ್ಲಿಷ್ಟಕರವಾಗಿರುವುದರಿಂದ ಗ್ರಾಮೀಣ ಅಭ್ಯರ್ಥಿಗಳಿಗೆ ಹೆಚ್ಚಿನ ಅಂಕ ಗಳಿಸುವುದು ಕಷ್ಟವಾಗಲಿದೆ.

ಈ ವರ್ಷ ಶ್ರೇಣಿ ಆಧಾರಿತ ಫಲಿತಾಂಶ ನೀಡುವ ಸರ್ಕಾರದ ನಿರ್ಧಾರವು ಆಕಾಂಕ್ಷಿಗಳಿಗೆ ಭವಿಷ್ಯದಲ್ಲಿ ಸರ್ಕಾರಿ ಉದ್ಯೋಗಕ್ಕೆ ಕುತ್ತು ತರುವ ಸಾಧ್ಯತೆಯಿದೆ. ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗ್ರಾಮ ಲೆಕ್ಕಾಧಿಕಾರಿಯಂತಹ ಕೆಲವು ಹುದ್ದೆಗಳಿಗೆ ದ್ವಿತೀಯ ಪಿಯು ಕನಿಷ್ಠ ವಿದ್ಯಾರ್ಹತೆಯ ಮೂಲಕ ನೇರ ನೇಮಕಾತಿ ನಡೆಯುತ್ತದೆ. ಹೀಗಾಗಿ ಗ್ರೇಡಿಂಗ್‌ನೊಂದಿಗೆ ಅಂಕಗಳನ್ನು ಸಹ ನಮೂದು ಮಾಡುವ ವ್ಯವಸ್ಥೆ ಮಾಡಬೇಕು. ಈ ಮೂಲಕ ಅಭ್ಯರ್ಥಿಗಳಿಗೆ ಸರ್ಕಾರಿ ಉದ್ಯೋಗ ಕೈತಪ್ಪುವ ಸಾಧ್ಯತೆಯನ್ನು ಹೋಗಲಾಡಿಸಬೇಕು.

**ರಾಕೇಶ ಆಲಬಾಳ,** ಅಥಣಿ

### ಎಂತಹ ವಿಪರ್ಯಾಸ?!

ಅಂದು ಸ್ವಾತಂತ್ರ್ಯ ಹೋರಾಟದಲ್ಲಿ
ಭಾಗವಹಿಸಿ ಮಹಾತ್ಮ ಗಾಂಧಿ
ಅನುಭವಿಸಿದರು ಸೆರೆವಾಸ,
ಇಂದು ವಂಚನೆ, ನಕಲಿ ದಾಖಲೆ
ಸೃಷ್ಟಿಸಿದ ಆರೋಪದಲ್ಲಿ ಗಾಂಧೀಜಿ
ಮರಿ ಮೊಮ್ಮಗಳ ಜೈಲುವಾಸ!
(ಪ್ರ.ವಾ., ಜೂನ್ 9)
ಇದೆಂತಹ ವಿಪರ್ಯಾಸ?

**ವಡ್ನಾಳ್ ರಮೇಶ,** ಚನ್ನಗಿರಿ

## ವರ್ಗಾವಣೆ ಅಸ್ತ್ರ ಬಳಕೆ ಸಲ್ಲದು

ಮೈಸೂರಿನಲ್ಲಿದ್ದ ಇಬ್ಬರು ಐಎಎಸ್ ಅಧಿಕಾರಿಗಳ ಇತ್ತೀಚಿನ ವರ್ಗಾವಣೆ ನಂತರ ರಾಜಕಾರಣಿಗಳು ಮತ್ತು ಆಡಳಿತಾಧಿಕಾರಿಗಳ ಮಧ್ಯೆ ಕೆಸರೆರಚಾಟ ಪ್ರಾರಂಭವಾಗಿದೆ. ಶಾಸಕ ಸಾ.ರಾ.ಮಹೇಶ್ ಅವರು ರೋಹಿಣಿ ಸಿಂಧೂರಿ ಅವರನ್ನು ಮಾಡೆಲ್ ಎಂದಿರುವುದು, ತಮ್ಮ ಪತ್ನಿ ಹೆಸರಿನಲ್ಲಿರುವ ಚೌಲ್ಟ್ರಿಯು ರಾಜಕಾಲುವೆ ಪಕ್ಕ ಇರುವುದು ಸಾಬೀತಾದರೆ ರಾಜಕೀಯ ನಿವೃತ್ತಿ ಪಡೆಯುವುದಾಗಿ, ಇಲ್ಲವಾದರೆ ಸಿಂಧೂರಿಯವರು ಕೆಲಸಕ್ಕೆ ರಾಜೀನಾಮೆ ನೀಡಿ ಅಡುಗೆ ಮಾಡಿಕೊಂಡಿರಲಿ (ಪ್ರ.ವಾ., ಜೂನ್ 10) ಎಂದು ಹೇಳಿರುವುದು ಸರಿಯಲ್ಲ. ಹೆಣ್ಣು ಅಡುಗೆ ಮನೆಗೆ ಸೀಮಿತವಾದರೆ ಒಳ್ಳೆಯದು ಎಂಬಂತಿದೆ ಇವರ ಮಾತಿನ ಅರ್ಥ. ಇದುವರೆಗೂ ಯಾವೊಬ್ಬ ರಾಜಕಾರಣಿಯೂ ಬಹಿರಂಗ ಸವಾಲು ಹಾಕಿ ಅದರಂತೆ ನಡೆದುಕೊಂಡಿಲ್ಲ, ರಾಜಕೀಯ ನಿವೃತ್ತಿ ಪಡೆದಿಲ್ಲ. ಅದೇ ಕೆಲವು ನಿಷ್ಠಾವಂತ ಅಧಿಕಾರಿಗಳು ವ್ಯವಸ್ಥೆಗೆ ಬೇಸತ್ತು ತಮ್ಮ ಜೀವ ಹಾಗೂ ಹುದ್ದೆ ಎರಡನ್ನೂ ಬಿಟ್ಟ ಉದಾಹರಣೆಗಳಿವೆ. ಅಧಿಕಾರಿಗಳಿಗೆ ತಮ್ಮ ವ್ಯಾಪ್ತಿಯಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬಿಡದೆ, ವರ್ಗಾವಣೆ ಎಂಬ ಅಸ್ತ್ರದ ಮೂಲಕ ಅವರ ಮನೋಸ್ಥೈರ್ಯ ಕುಗ್ಗಿಸಲು ಮುಂದಾಗುವುದು ಸರಿಯಲ್ಲ.

**ಶ್ವೇತಾ ಎನ್.** ಸೊರಬ, ಶಿವಮೊಗ್ಗ

## ರಾಜಕೀಯಕ್ಕೆ ಅಧಿಕಾರದ ಪ್ರಭಾವಳಿ ಬಳಕೆ?

ಕೊರೊನಾ ಬಿಕ್ಕಟ್ಟಿನ ಈ ದುರಿತ ಕಾಲದಲ್ಲಿ ಜನರ ಸೇವೆಗೆ ಪ್ರಚಾರದ ಅಬ್ಬರವಿಲ್ಲದೆ ದಕ್ಷತೆಯಿಂದ ಕಾರ್ಯನಿರ್ವಹಿಸಬೇಕಾದ ಅಧಿಕಾರಿಗಳು, ಸ್ವಯಂ ಪ್ರತಿಷ್ಠೆಯ ಕಾರಣಕ್ಕೆ ರಾಜಕಾರಣಿಗಳಂತೆ ಮಾಧ್ಯಮಗಳ ಮುಂದೆ ಆರೋಪ, ಪ್ರತ್ಯಾರೋಪ ಮಾಡಿಕೊಂಡರು. ಐಎಎಸ್ ಅಧಿಕಾರಿಗಳ ಕತೆ ಈ ರೀತಿಯಾದರೆ ಐಪಿಎಸ್ ಅಧಿಕಾರಿಗಳಂತೂ ತಮ್ಮ ಅಧಿಕಾರದ ಪ್ರಭಾವಳಿಯನ್ನು ಅಪರಾಧ ನಿಯಂತ್ರಣ ಮಾಡುವ ಬದಲು ತಮ್ಮ ವೈಯಕ್ತಿಕ ವರ್ಚಸ್ಸು ಹೆಚ್ಚಿಸಿಕೊಳ್ಳಲು ಬಳಸಿಕೊಳ್ಳುತ್ತಿರುವುದನ್ನು ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ನೋಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ, ಜಂಟಿ ಪೊಲೀಸ್ ಆಯುಕ್ತ (ಸಂಚಾರ) ಬಿ.ಆರ್.ರವಿಕಾಂತೇಗೌಡ ಅವರು ‘ಸಿಂಗಂ’, ‘ಸಿಂಹಿಣಿ’ಯರಿಗೆ ಹೇಳಿರುವ ಕಿವಿಮಾತು (ಪ್ರ.ವಾ., ಜೂನ್ 9) ಸಕಾಲಿಕವಾಗಿದೆ. ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಸಹಜ ಪ್ರಕ್ರಿಯೆಯೆಂಬಂತೆ ನಿರ್ವಹಿಸುವ ಬದಲು ಅದನ್ನೇ ವೈಭವೀಕರಿಸಿಕೊಳ್ಳುವುದರ ಹಿಂದೆ ಅಡಗಿರುವ ಒಳ ಉದ್ದೇಶವು ಸ್ವಯಂ ನಿವೃತ್ತಿ ಅಥವಾ ನಿವೃತ್ತಿಯ ನಂತರ ರಾಜಕೀಯಕ್ಕೆ ಪ್ರವೇಶ ಮಾಡುವುದೇ ಆಗಿರುತ್ತದೆ.

ಕನ್ನಡದಲ್ಲೇ ಯುಪಿಎಸ್‌ಸಿ ಪರೀಕ್ಷೆ ಬರೆದು ಐಎಎಸ್ ತೇರ್ಗಡೆಯಾಗಿದ್ದ ಒಬ್ಬ ವ್ಯಕ್ತಿ ವ್ಯಾಪಕ ಪ್ರಚಾರ ಪಡೆದು ನಂತರ ರಾಜಕೀಯ ಪ್ರವೇಶ ಮಾಡಿದರು. ಅವರಂತೆಯೇ ಇನ್ನೂ ಅನೇಕ ಅಧಿಕಾರಿಗಳು ಸ್ವಯಂ ನಿವೃತ್ತಿ ಪಡೆದು ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದಾರೆ. ತಮಿಳುನಾಡು ಮೂಲದ ಐಪಿಎಸ್ ಅಧಿಕಾರಿ ನಮ್ಮ ರಾಜ್ಯದಲ್ಲಿ ಮಾಧ್ಯಮಗಳ ಮುಂದೆ ‘ಸಿಂಗಂ’ ಎಂದು ಪ್ರಚಾರ ಪಡೆದುಕೊಂಡು, ರಾಜೀನಾಮೆ ನೀಡಿ ಚುನಾವಣೆಗೆ ನಿಂತರು. ಅಧಿಕಾರಿಗಳು ಸ್ವಯಂ ಪ್ರಾಯೋಜಿಸಿ ಅಭಿಮಾನಿ ಸಂಘಗಳನ್ನು ಸೃಷ್ಟಿಸಿ, ಮಾಧ್ಯಮಗಳಲ್ಲಿ ವರ್ಚಸ್ಸು ವೃದ್ಧಿಸಿಕೊಳ್ಳುವುದರ ಹಿಂದೆ ಅಡಗಿರುವ ಏಕೈಕ ಗುರಿ, ರಾಜಕೀಯ ಪಕ್ಷಗಳು ಇವರನ್ನು ಕರೆದು ಅವಕಾಶ ನೀಡಲಿ ಎಂಬುದಾಗಿದೆ.

**ಸಿ.ಎಚ್.ಹನುಮಂತರಾಯ, ಕೆ.ಬಿ.ಕೆ. ಸ್ವಾಮಿ, ಸೂರ್ಯ ಮುಕುಂದರಾಜ್,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರತಿ ಇಬ್ಬರಲ್ಲಿ ಒಬ್ಬರಿಗೆ ಜನಾಂಗೀಯ ಕಿರುಕುಳ

# ಭಾರತೀಯ ಅಮೆರಿಕನ್ನರಿಗೆ ತಾರತಮ್ಯದ ಕಿರಿಕಿರಿ

ಅಮೆರಿಕದಲ್ಲಿರುವ ಪ್ರತಿ ಇಬ್ಬರು ಭಾರತೀಯ ಅಮೆರಿಕನ್ನರಲ್ಲಿ ಒಬ್ಬರು ತಮ್ಮ ದೈನಂದಿನ ಜೀವನದಲ್ಲಿ ಹಲವು ರೀತಿಯ ತಾರತಮ್ಯವನ್ನು ಎದುರಿಸುತ್ತಿದ್ದಾರೆ. 2020ರಲ್ಲಿ ನಡೆಸಿದ ಭಾರತೀಯ ಅಮೆರಿಕನ್ನರ ನಡೆನುಡಿ ಸಮೀಕ್ಷೆಯ (ಐಎಎಎಸ್) ವರದಿಯಲ್ಲಿ ಈ ಅಂಶ ಬಹಿರಂಗವಾಗಿದೆ. ಮೂಲದೇಶ, ಭಾಷೆ, ಉಡುಗೆ, ಧರ್ಮ, ಚರ್ಮದ ಬಣ್ಣವನ್ನು ಗುರಿಯಾಗಿಸಿಕೊಂಡು ತಮ್ಮನ್ನು ತಾರತಮ್ಯಕ್ಕೆ ಗುರಿಮಾಡಲಾಗುತ್ತದೆ ಎಂದು ಭಾರತೀಯ ಅಮೆರಿಕನ್ನರು ಈ ಸಮೀಕ್ಷೆಯಲ್ಲಿ ಹೇಳಿಕೊಂಡಿದ್ದಾರೆ.

ಅಮೆರಿಕದಲ್ಲಿ ಭಾರತೀಯರ ಮೇಲೆ ಜನಾಂಗ ಆಧಾರಿತ ಹಲ್ಲೆ ಮತ್ತು ದಾಳಿಗಳು ನಡೆಯುತ್ತಲೇ ಇರುತ್ತವೆ. ಇದೇ ಏಪ್ರಿಲ್ 26ರಂದು ಅಮೆರಿಕದ ಆಸ್ಟ್ರೋರಿಯಾದಲ್ಲಿ ಸಿಖ್ ಯುವಕನ ಮೇಲೆ ಕರಿಯ ವ್ಯಕ್ತಿಯೊಬ್ಬ ಸುತ್ತಿಗೆಯಿಂದ ಹಲ್ಲೆ ನಡೆಸಿದ್ದ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿತ್ತು. 'ನಿನ್ನ ಬಣ್ಣ, ನನ್ನ ಬಣ್ಣದಂತಿಲ್ಲ. ನಿನ್ನನ್ನು ಕಂಡರೆ ನನಗಾಗುವುದಿಲ್ಲ' ಎಂದು ದಾಳಿಕೋರ ಕಿರುಚಿದ್ದ ಎಂದು ಸಿಖ್ ಯುವಕ ಹೇಳಿಕೆ ನೀಡಿದ್ದರು. ಈ ಬಗ್ಗೆ ತನಿಖೆ ನಡೆಯುತ್ತಿದೆ. ಇದು ಜನಾಂಗದ ಆಧಾರದಲ್ಲಿಯೇ ನಡೆದ ದಾಳಿ ಎಂಬ ತೀರ್ಮಾನಕ್ಕೆ ಬರಲಾಗಿದೆ. ಮಾರ್ಚ್ ತಿಂಗಳಿನಲ್ಲಿಯೂ ಅಮೆರಿಕದ ಇಂಡಿಯಾನಪೊಲೀಸ್‌ನಲ್ಲಿರುವ ಫೆಡ್‌ಎಕ್ಸ್ ಕ್ಯಾಂಪಸ್‌ನಲ್ಲಿ ವಿದೇಶಿಯರನ್ನು ಗುರಿಯಾಗಿಸಿಕೊಂಡು ಅಮೆರಿಕನ್ ಬಂದೂಕುಧಾರಿಯೊಬ್ಬ ದಾಳಿ ನಡೆಸಿದ್ದ. ದಾಳಿಯಲ್ಲಿ 8 ವಿದೇಶಿಯರು ಮೃತಪಟ್ಟಿದ್ದರು. ಅವರಲ್ಲಿ ನಾಲ್ವರು ಸಿಖ್ಖರು.

ತಮ್ಮ ವಿರುದ್ಧ ನಡೆಯುವ ತಾರತಮ್ಯದ ಬಗ್ಗೆ ಭಾರತೀಯ ಅಮೆರಿಕನ್ನರು ಸಮೀಕ್ಷೆಯಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ. ಅಮೆರಿಕದಲ್ಲಿ ನೆಲೆಸಿರುವ ಅತ್ಯಂತ ದೊಡ್ಡ ವಿದೇಶಿ ಸಮುದಾಯಗಳಲ್ಲಿ ಭಾರತೀಯ ಅಮೆರಿಕನ್ನರಿಗೆ ಎರಡನೇ ಸ್ಥಾನವಿದೆ. ಅವರ ವಿರುದ್ಧದ ತಾರತಮ್ಯದ ಪ್ರಮಾಣವೂ ದೊಡ್ಡದೇ ಆಗಿದೆ. ಹೀಗಾಗಿ ಭಾರತೀಯ ಅಮೆರಿಕನ್ನರಲ್ಲಿ ಕೆಲವರು ತಾವು ಭಾರತೀಯ ಅಮೆರಿಕನ್ನರು ಎಂದು ಗುರುತಿಸಿಕೊಳ್ಳುವುದಿಲ್ಲ. ಬದಲಿಗೆ ಅಮೆರಿಕನ್ನರು ಎಂದು ಹೇಳಿಕೊಳ್ಳುತ್ತೇವೆ. ಅಮೆರಿಕನ್ನರೇ ಆಗಿದ್ದೇವೆ ಎಂದೂ ಸಮೀಕ್ಷೆಯಲ್ಲಿ ಉತ್ತರಿಸಿದ್ದಾರೆ.

## ತಾರತಮ್ಯದ ತೀವ್ರತೆ




## ತಾರತಮ್ಯದ ಅನುಭವ

ಕಳೆದ 12 ತಿಂಗಳಲ್ಲಿ ವಿವಿಧ ಸ್ವರೂಪದ ತಾರತಮ್ಯವನ್ನು ಎದುರಿಸಿದ್ದೇವೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಭಾರತೀಯ ಅಮೆರಿಕನ್ನರು ಹೇಳಿಕೊಂಡಿದ್ದಾರೆ. ಯಾವ ಕಾರಣಕ್ಕೆ ತಾರತಮ್ಯದ ಅನುಭವಿಸಬೇಕಾಯಿತು ಎಂಬುದನ್ನು ಅವರು ಸಮೀಕ್ಷೆಯಲ್ಲಿ ಉಲ್ಲೇಖಿಸಿದ್ದಾರೆ. ಅವುಗಳ ವಿವರ ಇಲ್ಲಿದೆ




ಪ್ರಜಾವಾಣಿ ಗ್ರಾಫಿಕ್ಸ್ ಮಂಜುನಾಥ ಹುಲಕೊಪ್ಪದ

## ಅಮೆರಿಕದಲ್ಲೇ ಜನಿಸಿದ್ದರೂ ಹೆಚ್ಚು ತಾರತಮ್ಯ

'ಭಾರತೀಯ ಅಮೆರಿಕನ್ನರಲ್ಲಿ, ಅಮೆರಿಕದಲ್ಲಿ ಜನಿಸಿದವರಿಗಿಂತ ಭಾರತದಿಂದ ಅಲ್ಲಿಗೆ ವಲಸೆ ಹೋದವರು ಹೆಚ್ಚು ತಾರತಮ್ಯಕ್ಕೆ ಗುರಿಯಾಗಬೇಕಾಗುತ್ತದೆ ಎಂಬ ಅಭಿಪ್ರಾಯವಿತ್ತು. ಅಮೆರಿಕದಲ್ಲೇ ಜನಿಸಿದ ಭಾರತೀಯ ಅಮೆರಿಕನ್ನರ ಉಡುಗೆ, ವರ್ತನೆ, ಸಾಮಾಜಿಕ ಜೀವನ ಅಮೆರಿಕದ ಜೀವನಶೈಲಿಗೆ ಹತ್ತಿರವಾಗಿರುತ್ತದೆ. ಹೀಗಾಗಿ ಅವರು ತಾರತಮ್ಯಕ್ಕೆ ಗುರಿಯಾಗುವ ಸಾಧ್ಯತೆ ಕಡಿಮೆ ಎಂದು ಭಾವಿಸಲಾಗಿತ್ತು. ಆದರೆ ಇದಕ್ಕೆ ತದ್ವಿರುದ್ಧವಾಗಿ, ಅಮೆರಿಕದಲ್ಲಿ ಜನಿಸಿದ ಭಾರತೀಯ ಅಮೆರಿಕನ್ನರೇ ಹೆಚ್ಚು ತಾರತಮ್ಯಕ್ಕೆ ಗುರಿಯಾಗುತ್ತಾರೆ ಎಂಬುದು ಸಮೀಕ್ಷೆಯಲ್ಲಿ ಬಹಿರಂಗವಾಗಿದೆ' ಎಂದು ಸಮೀಕ್ಷಾ ವರದಿಯಲ್ಲಿ ಹೇಳಲಾಗಿದೆ.

### ಕಾರಣಗಳು




- ಅಮೆರಿಕದಲ್ಲಿ ಜನಿಸಿದ ಭಾರತೀಯ ಅಮೆರಿಕನ್ನರು ಚರ್ಮದ ಬಣ್ಣದ ಕಾರಣಕ್ಕೆ ಹೆಚ್ಚು ತಾರತಮ್ಯವನ್ನು ಎದುರಿಸುತ್ತಾರೆ. ಭಾರತದಿಂದ ವಲಸೆ ಹೋದ ಭಾರತೀಯ ಅಮೆರಿಕನ್ನರು ಎದುರಿಸುವ ಈ ಸ್ವರೂಪದ ತಾರತಮ್ಯದ ಪ್ರಮಾಣ ಕಡಿಮೆ ಇದೆ
- ಲಿಂಗದ ಕಾರಣಕ್ಕೆ ಎರಡುಪಟ್ಟು ಹೆಚ್ಚು ತಾರತಮ್ಯವನ್ನು ಎದುರಿಸುತ್ತೇವೆ ಎಂದು ಭಾರತದಿಂದ ವಲಸೆ ಹೋದ ಭಾರತೀಯ ಅಮೆರಿಕನ್ನರಿಗಿಂತ ಅಮೆರಿಕದಲ್ಲಿ ಜನಿಸಿದ ಭಾರತೀಯ ಅಮೆರಿಕನ್ನರು ಹೇಳಿಕೊಂಡಿದ್ದಾರೆ
- ಧರ್ಮಾಧಾರಿತ ತಾರತಮ್ಯವು ಹೀಗೆಯೇ ಇದೆ. ವಲಸಿಗರಿಗಿಂತ ಅಮೆರಿಕದಲ್ಲಿ ಜನಿಸಿದ ಭಾರತೀಯ ಅಮೆರಿಕನ್ನರಿಗೇ ಹೆಚ್ಚು ತಾರತಮ್ಯ ಎದುರಾಗುತ್ತಿದೆ
- ಭಾರತದಲ್ಲಿ ಜನಿಸಿ, ಅಮೆರಿಕಕ್ಕೆ ವಲಸೆ ಹೋಗಿರುವ ಭಾರತೀಯ ಅಮೆರಿಕನ್ನರು ತಮ್ಮ ಜನನದ ಸ್ಥಳದ ಕಾರಣಕ್ಕೆ ಹೆಚ್ಚು ತಾರತಮ್ಯವನ್ನು ಎದುರಿಸಬೇಕಿದೆ. ಅಮೆರಿಕದಲ್ಲೇ ಜನಿಸಿದ ಭಾರತೀಯ ಅಮೆರಿಕನ್ನರೂ ಈ ಕಾರಣಕ್ಕೇ ತಾರತಮ್ಯ ಎದುರಿಸುತ್ತಾರೆ. ಆದರೆ ಪ್ರಮಾಣ ಸ್ವಲ್ಪ ಕಡಿಮೆ ಅಷ್ಟೆ

ಚೀನಾದ ವಸ್ತುಗಳನ್ನು ನಿಷೇಧಿಸಬೇಕು ಎಂದು ಕೋರಿ ನ್ಯೂಯಾರ್ಕ್‌ನಲ್ಲಿ ಭಾರತೀಯ ಅಮೆರಿಕನ್ನರ ಪ್ರದರ್ಶನ

## ಯಾರಿಂದ ತಾರತಮ್ಯ?

ಧರ್ಮ, ಲಿಂಗ, ದೇಶ, ಬಣ್ಣ ಹಾಗೂ ಜಾತಿಯ ಕಾರಣಕ್ಕೆ ತಾವು ತಾರತಮ್ಯ ಎದುರಿಸಿದ್ದೇವೆ ಎಂಬುದನ್ನು ಭಾರತೀಯ ಅಮೆರಿಕನ್ನರು ಒಪ್ಪಿಕೊಂಡಿದ್ದಾರೆ. ಯಾರಿಂದ ಹೆಚ್ಚಾಗಿ ತಾರತಮ್ಯ ಎದುರಾಗಿದೆ ಎಂಬ ಪ್ರಶ್ನೆಗೆ 'ಭಾರತೀಯರಲ್ಲದ ವ್ಯಕ್ತಿಗಳಿಂದ' ಎಂಬ ಉತ್ತರ ಸಿಕ್ಕಿದೆ. ಭಾರತೀಯರಲ್ಲದ ವ್ಯಕ್ತಿಗಳಿಂದಲೇ ಮುಕ್ಕಾಲು ಭಾಗ ತಾರತಮ್ಯ ಎದುರಾಗಿದೆ.

ಬಹುತೇಕ ಭಾರತೀಯ ಅಮೆರಿಕನ್ನರಿಗೆ ತಮ್ಮ ದೇಶ ಹಾಗೂ ಚರ್ಮದ ಬಣ್ಣ ಯಾವುದು ಎಂಬ ಕಾರಣಕ್ಕೆ ತಾರತಮ್ಯ ಎದುರಿಸುವ ಪ್ರಸಂಗ ಬಂದಿದೆ. ಲಿಂಗ ಮತ್ತು ಪ್ರಾದೇಶಿಕತೆ ವಿಚಾರದಲ್ಲೂ ಹೀಗೆಯೇ ಆಗಿದೆ. ಯಾವ ದೇಶಕ್ಕೆ ಸೇರಿದವರು ಎಂಬ ವಿಚಾರದಲ್ಲಿ ಭಾರತೀಯರಲ್ಲದವರಿಂದ ಶೇ 76ರಷ್ಟು ಮಂದಿ, ಚರ್ಮದ ಬಣ್ಣದ ವಿಚಾರಕ್ಕೆ ಶೇ 71ರಷ್ಟು ಭಾರತೀಯ ಅಮೆರಿಕನ್ನರು ಕಿರುಕುಳ ಎದುರಿಸಿದ್ದಾರೆ.

## ಸಮುದಾಯದಲ್ಲಿ ವೈವಿಧ್ಯ

ಅಮೆರಿಕದಲ್ಲಿ ನೆಲೆಸಿರುವ ಭಾರತೀಯ ಸಮುದಾಯದಲ್ಲಿ ವೈವಿಧ್ಯ ನೆಲೆಸಿದೆ. ಭಾಷೆ, ಪ್ರದೇಶ, ಧರ್ಮ ಇತ್ಯಾದಿ ವಿಚಾರಗಳು ಅವರನ್ನು ಬೆಸೆದಿವೆ. ತಮ್ಮ ಭಾಷೆಯನ್ನಾಡುವ, ತಮ್ಮ ರಾಜ್ಯಕ್ಕೆ ಸೇರಿದ, ತಮ್ಮ ಜಾತಿಗೆ ಸೇರಿದ ಜನರ ಭೇಟಿಯಿಂದ ಸಾಮಾಜಿಕ ಸಂಪರ್ಕ ಬಲಗೊಂಡಿದೆ. ಬಹುತೇಕ ಸ್ನೇಹಿತರು ಅವರ ಧಾರ್ಮಿಕ ವಿಚಾರವನ್ನು ತಮ್ಮ ಜೊತೆ ಹಂಚಿಕೊಂಡಿದ್ದಾರೆ ಎಂದು ಶೇ 48ರಷ್ಟು ಭಾರತೀಯ ಅಮೆರಿಕನ್ನರು ಹೇಳಿದ್ದಾರೆ. ಸ್ನೇಹಿತರ ಪೈಕಿ ಒಂದಿಷ್ಟು ಮಂದಿ ತಮ್ಮದೇ ಧರ್ಮಕ್ಕೆ ಸೇರಿದವರು ಎಂದು ಶೇ 36ರಷ್ಟು ಜನರು ಹೇಳಿದ್ಧಾರೆ. ತಮ್ಮ ಕೆಲವು ಸ್ನೇಹಿತರು ಅವರ ಧರ್ಮದ ಬಗ್ಗೆ ಮಾಹಿತಿ ಹಂಚಿಕೊಂಡಿಲ್ಲ ಎಂದು ಶೇ 12ರಷ್ಟು ಭಾರತೀಯ ಅಮೆರಿಕನ್ನರು ಹೇಳಿದ್ದಾರೆ.

ಐಎಎಎಸ್ ಮಾಹಿತಿಯ ಪ್ರಕಾರ, ಸಮೀಕ್ಷೆಗೆ ಪ್ರತಿಕ್ರಿಯಿಸಿದವರಲ್ಲಿ ಶೇ 54ರಷ್ಟು ಜನರು ಹಿಂದೂ, ಶೇ 13ರಷ್ಟು ಮುಸ್ಲಿಂ, ಶೇ 11ರಷ್ಟು ಕ್ರೈಸ್ತ ಮತ್ತು ಶೇ 7ರಷ್ಟು ಬೌದ್ಧ ಮತ್ತು ಸಿಖ್ ಧರ್ಮಕ್ಕೆ ಸೇರಿದವರು.

ಪ್ರದೇಶ ಕುರಿತು ಕೇಳಿದ ಪ್ರಶ್ನೆಗೆ ಭಾರತೀಯ ಅಮೆರಿಕನ್ನರು ಉತ್ತರಿಸಿದ್ದಾರೆ. ತಮ್ಮ ಸ್ನೇಹಿತರೆಲ್ಲರೂ ಭಾರತ ಮೂಲದವರು ಎಂಬುದಾಗಿ ಶೇ 29ರಷ್ಟು ಮಂದಿ ಅಭಿಪ್ರಾಯಪಟ್ಟಿದ್ದಾರೆ. ತಮ್ಮ ಜೊತೆಗಿರುವ ಕೆಲವರು ಭಾರತೀಯರು ಎಂಬುದಾಗಿ ಶೇ 42ರಷ್ಟು ಜನರ ಹೇಳಿದ್ದರೆ, ತಮ್ಮ ಜೊತೆಗೆ ಯಾವ ಭಾರತೀಯರೂ ಇಲ್ಲ ಎಂದು ಶೇ 23ರಷ್ಟು ಭಾರತೀಯ ಅಮೆರಿಕನ್ನರು ಹೇಳಿದ್ದಾರೆ.

ತಮ್ಮ ಸ್ನೇಹಿತರು ಯಾವ ಜಾತಿಗೆ ಸೇರಿದ್ದಾರೆ ಎಂಬುದು ತಿಳಿದಿಲ್ಲ ಎಂದವರು ಕಾಲು ಭಾಗದಷ್ಟು ಜನ. ಇದರರ್ಥ, 'ಭಾರತೀಯ ಅಮೆರಿಕನ್ನರ ನಡೆನುಡಿ ಸಮೀಕ್ಷೆ'ಯಲ್ಲಿ ಭಾಗಿಯಾಗಿದ್ದವರು ಜಾತಿಗೆ ಅಷ್ಟಾಗಿ ಮಹತ್ವ ನೀಡಿಲ್ಲ.

## ಭಾಷಾ ವೈವಿಧ್ಯ

ಭಾರತೀಯ ಅಮೆರಿಕನ್ ಸಮುದಾಯವು ಭಾಷೆಯ ವಿಚಾರದಲ್ಲಿ ವೈವಿಧ್ಯದಿಂದ ಕೂಡಿದೆ. ಶೇ 19ರಷ್ಟು ಜನರು ಹಿಂದಿ ಭಾಷೆಯನ್ನು ತಮ್ಮ ಮಾತೃಭಾಷೆ ಎಂದು ಹೇಳಿದ್ಧಾರೆ. ಇದರ ಬಳಿಕ ಗುಜರಾತಿ, ಇಂಗ್ಲಿಷ್, ತೆಲುಗು, ತಮಿಳು, ಪಂಜಾಬಿ, ಬಂಗಾಳಿ, ಮರಾಠಿ ಹಾಗೂ ಕನ್ನಡ ಭಾಷೆಗಳಿವೆ.

| ಭಾಷಾ ವೈವಿಧ್ಯ (%) | |
|---|---|
| ಹಿಂದಿ | 19 |
| ಗುಜರಾತಿ | 14 |
| ಇಂಗ್ಲಿಷ್ ಮಾತ್ರ | 10 |
| ತೆಲುಗು | 10 |
| ತಮಿಳು | 9 |
| ಪಂಜಾಬಿ | 7 |
| ಬಂಗಾಳಿ | 7 |
| ಮಲಯಾಳ | 6 |
| ಉರ್ದು | 5 |
| ಮರಾಠಿ | 4 |
| ಕನ್ನಡ | 3 |
| ಇತರೆ | 7 |

## ಮದುವೆ ಯಾರನ್ನು ಆಗುತ್ತೀರಿ?

ಭಾರತೀಯ ಅಮೆರಿಕನ್ನರಲ್ಲಿ ವಿವಾಹ ವಿಚ್ಛೇದನ ಪ್ರಮಾಣ ಕಡಿಮೆ ಎಂಬ ಅಂಶ ಸಮೀಕ್ಷೆಯಲ್ಲಿ ಕಂಡುಬಂದಿದೆ. ಭಾಗವಹಿಸಿದ್ದವರ ಪೈಕಿ ಶೇ 66ರಷ್ಟು ಮಂದಿ ಮದುವೆಯಾಗಿದ್ದಾರೆ ಅಥವಾ ಸಂಗಾತಿ ಜೊತೆ ಒಟ್ಟಿಗಿದ್ದಾರೆ. ತಮ್ಮ ಸಮುದಾಯದೊಳಗೆ ಮದುವೆಯಾಗುವ ಪ್ರವೃತ್ತಿ ಭಾರತೀಯ ಅಮೆರಿಕನ್ನರಲ್ಲಿ ಇದೆ. ಸಮುದಾಯದ ಹೊರಗೆ ಮದುವೆಯಾಗುವವರು ಎರಡನೇ ತಲೆಮಾರಿನಲ್ಲಿ ಕಂಡುಬಂದಿದ್ದಾರೆ. ತಮಗೆ ಭಾರತ ಮೂಲದ ಸಂಗಾತಿ ಜೊತೆಯಾಗಿದ್ದಾರೆ ಎಂದು 10ರಲ್ಲಿ 8 ಮಂದಿ ಉತ್ತರ ನೀಡಿದ್ದಾರೆ. ಅಂದರೆ ಶೇ 77ರಷ್ಟು ಮಂದಿ ಭಾರತೀಯ ಮೂಲದವರನ್ನೇ ಮದುವೆಯಾಗಿದ್ದಾರೆ. ಆದರೆ ಹೊಸ ತಲೆಮಾರಿನ ಜನರಿಗೆ ಅಮೆರಿಕದಲ್ಲಿ ಹುಟ್ಟಿದ ಭಾರತ ಮೂಲದ ಸಂಗಾತಿ ಬೇಕು.

ಆಧಾರ: ಇಂಡಿಯನ್ ಅಮೆರಿಕನ್ ಆಟಿಟ್ಯೂಡ್ಸ್ ಸರ್ವೆ-2020

# 'ಕಾಂಗ್ರೆಸ್‌ನ ಕಿರಿಯರಂತೆ ಹಿರಿಯರಿಗೂ ಬದ್ಧತೆ ಇಲ್ಲ'

• ಆನಂದ್ ಮಿಶ್ರಾ

'ಕಾಂಗ್ರೆಸ್‌ನ ಯುವ ಮುಖಂಡರಿಗೆ ಸಿದ್ಧಾಂತದ ಬದ್ಧತೆ ಇಲ್ಲ' ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡರು ಟೀಕಿಸುತ್ತಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದ ಮತ್ತು ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ನ ಪ್ರಮುಖ ನಾಯಕರಾಗಿದ್ದ ಜಿತಿನ್ ಪ್ರಸಾದ ಅವರು ಬಿಜೆಪಿ ಸೇರಿದ ನಂತರ, ಯುವ ನಾಯಕರಿಗೆ ಸೈದ್ಧಾಂತಿಕ ಬದ್ಧತೆ ಇಲ್ಲ ಎಂಬುದನ್ನು ಕಾಂಗ್ರೆಸ್ ಹಿರಿಯ ಮುಖಂಡರು ಬಹಿರಂಗವಾಗಿಯೇ ಹೇಳಿದ್ದಾರೆ. 2014ರ ನಂತರ ಕಾಂಗ್ರೆಸ್ ತೊರೆದ ಮುಖಂಡರ ಪಟ್ಟಿ ಮಾಡಿದರೆ, ಹಿರಿಯರಾಗಲಿ, ಕಿರಿಯರಾಗಲಿ ಕಾಂಗ್ರೆಸ್‌ನ ಮುಖಂಡರಲ್ಲಿ ಯಾರಿಗೂ ಸೈದ್ಧಾಂತಿಕ ಬದ್ಧತೆ ಇಲ್ಲ ಎಂಬುದು ಗೊತ್ತಾಗುತ್ತದೆ.

### ಮುಖ್ಯಾಂಶಗಳು

- ಜಿತಿನ್ ಪಕ್ಷಾಂತರಕ್ಕೆ ಹಿರಿಯರ ಆಕ್ರೋಶ
- ಸಿದ್ಧಾಂತದ ಬದ್ಧತೆಯ ಪ್ರಶ್ನೆ ಮುನ್ನೆಲೆಗೆ
- ಕಾಂಗ್ರೆಸ್‌ನ ಹಲವು ಮುಖಂಡರು 2014ರ ಬಳಿಕ ಬಿಜೆಪಿ ಸೇರಿದ್ದಾರೆ

ಜಿತಿನ್ ಪ್ರಸಾದ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಮರುದಿನವೇ ಈ ಬಗ್ಗೆ ಕಾಂಗ್ರೆಸ್‌ನ ಹಿರಿಯ ಮುಖಂಡ ಕಪಿಲ್ ಸಿಬಲ್ ಅವರು 'ಪ್ರಸಾದ ರಾಮ' ಎಂಬ ಪದವನ್ನು ಬಳಸಿ ಟೀಕಿಸಿದ್ದಾರೆ. 'ಜಿತಿನ್ ಪ್ರಸಾದ ಅವರು ಕಾಂಗ್ರೆಸ್ ತೊರೆದು, ಬಿಜೆಪಿ ಸೇರಿದ್ದಾರೆ. ಜಿತಿನ್ ಅವರಿಗೆ ಬಿಜೆಪಿಯಲ್ಲಿ ಪ್ರಸಾದ ದೊರೆಯುತ್ತದೆಯೇ ಅಥವಾ ಇದು ಕೇವಲ ಉತ್ತರ ಪ್ರದೇಶ ಚುನಾವಣೆಯ ಗಿಮಿಕ್ಕೇ ಎಂಬುದು ಈಗಿನ ಪ್ರಶ್ನೆ. ಸಿದ್ಧಾಂತದ ಪ್ರಶ್ನೆಯೇ ಬರದಿದ್ದಾಗ, ಇಂತಹ ಪಕ್ಷಾಂತರವು ಸುಲಭವಾಗುತ್ತದೆ. ನನ್ನಿಂದ ಇಂತಹ ಬದಲಾವಣೆ ಸಾಧ್ಯವಿಲ್ಲ' ಎಂದು ಕಪಿಲ್ ಸಿಬಲ್ ಅವರು ಎನ್‌ಡಿಟಿವಿ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಕಾಂಗ್ರೆಸ್‌ನ ಮತ್ತೊಬ್ಬ ಹಿರಿಯ ನಾಯಕ ವೀರಪ್ಪ ಮೊಯ್ಲಿ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಇಂತಹದ್ದೇ ಪ್ರಶ್ನೆಯನ್ನು ಎತ್ತಿದ್ದಾರೆ. ಕಾಂಗ್ರೆಸ್‌ನ ಕಾರ್ಯಕರ್ತರು ಸಹ ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಲೇವಡಿ ಮಾಡುತ್ತಿದ್ದಾರೆ. ಈ ಹಿಂದೆ ಪಕ್ಷವನ್ನು ತೊರೆದು, ಬಿಜೆಪಿ ಸೇರಿ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಸರ್ಕಾರ ಪತನಕ್ಕೆ ಕಾರಣವಾದ ಜ್ಯೋತಿರಾದಿತ್ಯ ಸಿಂಧಿಯಾ, ರಾಜಸ್ಥಾನ ಮುಖ್ಯಮಂತ್ರಿ ಜತೆ ಜಟಾಪಟಿ ನಡೆಸಿದ್ದ ಸಚಿನ್ ಪೈಲಟ್ ಮತ್ತು ಜಿತಿನ್ ಪ್ರಸಾದ ಅವರ ಚಿತ್ರಗಳಿರುವ ಮೀಮ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಆದರೆ ಪಕ್ಷ ತೊರೆದ ಯುವ ಮುಖಂಡರಿಗಿಂತ, ಕಾಂಗ್ರೆಸ್‌ನಿಂದ ಮುಖ್ಯಮಂತ್ರಿಗಳಾಗಿ ಕ್ಯಾಬಿನೆಟ್ ಸಚಿವರಾಗಿ ಅಧಿಕಾರ ಅನುಭವಿಸಿದ ಹಿರಿಯ ನಾಯಕರ ಪಟ್ಟಿಯೇ ದೊಡ್ಡದಿದೆ. ಈ ಪಟ್ಟಿಯನ್ನು ಗಮನಿಸಿದರೆ ಕಾಂಗ್ರೆಸ್‌ನ ಹಿರಿಯ ನಾಯಕರಲ್ಲೂ ಸೈದ್ಧಾಂತಿಕ ಬದ್ಧತೆಯ ಕೊರತೆ ಇರುವುದು ಗೊತ್ತಾಗುತ್ತದೆ.

ಕಾಂಗ್ರೆಸ್‌ನಲ್ಲಿ 20 ವರ್ಷ ಇದ್ದ, ಪಕ್ಷದ ವಕ್ತಾರನಾಗಿದ್ದ ಮತ್ತು ಸೋನಿಯಾ ಗಾಂಧಿ ಅವರ ಆಪ್ತರಾಗಿದ್ದ ಟಾಮ್ ವಡಕ್ಕನ್ ಅವರು 2019ರಲ್ಲಿ ಪಕ್ಷ ತೊರೆದು ಬಿಜೆಪಿ ಸೇರಿದ್ದರು. ಕೇಂದ್ರದಲ್ಲಿ ಸಚಿವರಾಗಿದ್ದ ಡಿ.ಪುರಂದೇಶ್ವರಿ, ಕೃಷ್ಣತೀರ್ಥ, ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ವಿಜಯ್ ಬಹುಗುಣ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಮತ್ತು ಹಿರಿಯ ನಾಯಕರಾಗಿದ್ದ ನಾರಾಯಣ ರಾಣೆ, ಮಣಿಪುರದಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿಯಾಗಿದ್ದ ಎನ್.ಬಿರೇನ್ ಸಿಂಗ್, ಅಸ್ಸಾಂನಲ್ಲಿ ಕಾಂಗ್ರೆಸ್‌ನ ಪ್ರಮುಖ ನಾಯಕರಾಗಿದ್ದ ಹಿಮಂತ ಬಿಸ್ವ ಶರ್ಮಾ ಅವರು ಈಗ ಬಿಜೆಪಿಯಲ್ಲಿದ್ದಾರೆ. ಬಿರೇನ್ ಸಿಂಗ್ ಮತ್ತು ಹಿಮಂತ ಬಿಸ್ವ ಶರ್ಮಾ ಅವರು ಈಗ ಕ್ರಮವಾಗಿ ಮಣಿಪುರ ಮತ್ತು ಅಸ್ಸಾಂ ಮುಖ್ಯಮಂತ್ರಿಯಾಗಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್‌ನಿಂದ ಮುಖ್ಯಮಂತ್ರಿಯಾಗಿದ್ದ, ಯುಪಿಎ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿದ್ದ ಮತ್ತು ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದ ಹಿರಿಯ ಮುಖಂಡ ಎಸ್.ಎಂ.ಕೃಷ್ಣ ಸಹ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದಾರೆ. ಐದು ಬಾರಿ ಮೇಘಾಲಯದ ಮುಖ್ಯಮಂತ್ರಿಯಾಗಿದ್ದ ಡಿ.ಡಿ. ಲಪಾಂಗ್ ಅವರು 2018ರಲ್ಲಿ ಪಕ್ಷ ತೊರೆದು ಎನ್‌ಪಿಪಿ ಸೇರಿದ್ದಾರೆ.

ಬಿಜೆಪಿಗೆ ಬಂದ ಜಿತಿನ್ ಪ್ರಸಾದ ಅವರನ್ನು ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪೆಮಾ ಖಂಡು ಅವರು ಸ್ವಾಗತಿಸಿದ್ದಾರೆ. ಖಂಡು ಸಹ 2016ರಲ್ಲಿ ಕಾಂಗ್ರೆಸ್‌ನ 43 ಶಾಸಕರನ್ನು ಕರೆದುಕೊಂಡು ಬಿಜೆಪಿಗೆ ವಲಸೆ ಹೋಗಿದ್ದರು. ಅವರೀಗ ಅರುಣಾಚಲ ಪ್ರದೇಶ ಮುಖ್ಯಮಂತ್ರಿ.


ಹಿಮಂತ ಬಿಸ್ವ ಶರ್ಮಾ


ಎಸ್.ಎಂ.ಕೃಷ್ಣ

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಚಂಡೀಗಡದಲ್ಲಿ ಮಾವಿನಹಣ್ಣು ತಿಂದು ನಂತರ ಕೋಕಕೋಲಾ ಕುಡಿದ ಮೂವರು ಯುವಕರು ತಲೆಸುತ್ತಿ ಬಿದ್ದರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅವರು ಹಾದಿಮಧ್ಯೆಯೇ ಮೃತಪಟ್ಟಿದ್ದಾರೆ. ಹೀಗಾಗಿ ಮಾವಿನಹಣ್ಣು ತಿಂದನಂತರ ಕೋಕಕೋಲಾ ಕುಡಿಯಬೇಡಿ. ಕುಡಿದರೆ ಸಾಯಬೇಕಾಗುತ್ತದೆ. ಮಾವಿನ ಹಣ್ಣಿನಲ್ಲಿ ಸಿಟ್ರಿಕ್ ಆಮ್ಲವಿದ್ದು, ಕೋಕಕೋಲಾದಲ್ಲಿ ಕಾರ್ಬೋನಿಕ್ ಆಮ್ಲ ಇದೆ. ಎರಡನ್ನೂ ಒಟ್ಟಿಗೆ ಸೇವಿಸಿದ್ದಕ್ಕೆ ಸಾವು ಸಂಭವಿಸಿದೆ ಎಂದು ವೈದ್ಯರು ಹೇಳಿದ್ದಾರೆ' ಎಂಬ ವರದಿ ಇರುವ ಪತ್ರಿಕಾ ವರದಿಯ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿಯೂ ಈ ಚಿತ್ರ ವೈರಲ್ ಆಗಿದೆ.

'ಇದು 2017ರಲ್ಲಿ ವೈರಲ್ ಆಗಿದ್ದ ಸುಳ್ಳುಸುದ್ದಿ. ಇದು ಸುಳ್ಳು ಸುದ್ದಿ ಎಂದು 2017, 2018ರಲ್ಲಿ ಬ್ಯಾಂಗಲೋರ್ ಮಿರರ್, ಇಂಡಿಯನ್ ಎಕ್ಸ್‌ಪ್ರೆಸ್, ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ಇದು ಸುಳ್ಳು ಸುದ್ದಿ' ಎಂದು ದಿ ಲಾಜಿಕಲ್ ಇಂಡಿಯನ್ ತಿಳಿಸಿದೆ. 'ಸಿಟ್ರಿಕ್ ಆಮ್ಲ ಮತ್ತು ಕಾರ್ಬೋನಿಕ್ ಆಮ್ಲವನ್ನು ಒಟ್ಟಿಗೆ ತೆಗೆದುಕೊಂಡರೆ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾಗುತ್ತದೆ. ಆದರೆ ಮಾರಣಾಂತಿಕ ಅಪಾಯವಾಗುವುದಿಲ್ಲ' ಎಂದು ಇಂಡಿಯನ್ ಡಯಟಿಕ್ ಅಸೋಸಿಯೇಷನ್ ಹೇಳಿದೆ.

## ಗುಂಡಣ್ಣ




## ದಿನ ಭವಿಷ್ಯ

ಶುಕ್ರವಾರ ಜೂನ್ 11, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ಪ್ರತಿಪದೆ ಗಂ. 26-22 (ಹ. 4-34) ಶುಕ್ರವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 18-12 (ಹ. 1-17) ಶೂಲ ನಾಮ ಯೋಗ ಗಂ. 5-9 ಬವ ಕರಣ ಗಂ. 26-22 ವಿಷ ಗಂ. 41-1 ಅಮೃತಾಭಾವಃ : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 5-56 ಸೂರ್ಯಾಸ್ತ: 6-41 ಅದೃಷ್ಟ ಸಂಖ್ಯೆ 3, 4

**ಮೇಷ:** ಹಿರಿಯ ಅಧಿಕಾರಿಗಳಿಂದ ಕಿರಿಕಿರಿ. ನೌಕರರು ಆಪಾದನೆಗಳನ್ನು ಎದುರಿಸಬೇಕಾದೀತು. ಎಚ್ಚರಿಕೆ ಅಗತ್ಯ. ಕೈಗಾರಿಕೋದ್ಯಮಿಗಳಿಗೆ ಪ್ರಶಂಸೆಯ ಮಾತುಗಳು ಕೇಳಿಬರಲಿವೆ. ಸಾಹಿತಿಗಳಿಗೆ ಶುಭ ದಿನ.

**ವೃಷಭ:** ವಿಪರೀತ ಕೆಲಸದಿಂದಾಗಿ ದೇಹಾಲಸ್ಯ. ಮಾನಸಿಕ ಒತ್ತಡ. ಮಾತೃವರ್ಗದವರಿಗೆ ಆರೋಗ್ಯದಲ್ಲಿ ವ್ಯತ್ಯಯ. ಮಿತ್ರರ ಸಹಾನುಭೂತಿಯೊಂದಿಗೆ ಆಪತ್ಕಾಲದ ಸಹಾಯವೂ ದೊರಕಲಿದೆ.

**ಮಿಥುನ:** ಹಣಕಾಸಿನ ಅನುಕೂಲತೆಗಳು ಕೂಡಿಬರುವುದಲ್ಲದೆ ಹೊಸ ವಸ್ತುಗಳ ಖರೀದಿ. ಅಧ್ಯಯನ ನಿಮಿತ್ತ ದೂರದ ಊರುಗಳಿಗೆ ಪ್ರವಾಸ ಮಾಡಬೇಕಾದೀತು. ಮಂಗಳಕಾರ್ಯ ನಿಮಿತ್ತ ಓಡಾಟ ಮಾಡಲಿದ್ದೀರಿ.

**ಕರ್ಕಾಟಕ:** ಅನಾವಶ್ಯಕ ವಿಚಾರದಿಂದಾಗಿ ಮನೆಯಲ್ಲಿ ಮನಸ್ತಾಪ ಸಾಧ್ಯತೆ. ಹಣಕಾಸಿನ ವಿಷಯದಲ್ಲಿ ಜಾಗ್ರತೆ ವಹಿಸಿ. ಕೋರ್ಟ್, ಕಚೇರಿಗಳಲ್ಲಿನ ವಿವಾದಗಳು ಪರಿಹಾರವಾಗಿ ಯಶಸ್ಸನ್ನು ಸಾಧಿಸಲಿದ್ದೀರಿ.

**ಸಿಂಹ:** ಯೋಧರು, ಆರಕ್ಷಕ ಇಲಾಖೆಯಲ್ಲಿ ಕೆಲಸ ಮಾಡುವವರಿಗೂ ಯಶಸ್ಸಿನೊಂದಿಗೆ ಭಡ್ತಿಯ ಅವಕಾಶಗಳು ಕಂಡುಬರುತ್ತಿದೆ. ಕ್ರೀಡಾಪಟುಗಳಿಗೆ ಹೆಚ್ಚಿನ ಸಾಧನೆಯ ಗರಿ ಮುಡಿಗೇರಲಿದೆ. ವಿದೇಶ ಯಾತ್ರೆಯ ಸಂಭವ.

**ಕನ್ಯಾ:** ಪ್ರಯಾಣದಲ್ಲಿ ಸಂಕಟ ತಲೆದೋರಬಹುದು. ಭೂ ವ್ಯವಹಾರದಿಂದ ಧನ ಲಾಭ. ಉದರ ಸಂಬಂಧಿ ವ್ಯಾಧಿಗಳು ತಲೆದೋರಬಹುದು. ಅನಿರೀಕ್ಷಿತ ವ್ಯಕ್ತಿಗಳ ಆಗಮನದಿಂದ ಸಂತಸ ಮೂಡಲಿದೆ.

**ತುಲಾ:** ಹೂಡಿಕೆಯ ವ್ಯವಹಾರದಿಂದಾಗಿ ಧನ ಲಾಭ. ಅನಾವಶ್ಯಕ ಓಡಾಟ ಮಾಡಬೇಕಾದೀತು. ಕುಟುಂಬ ಸದಸ್ಯರೊಂದಿಗೆ ತಾಳ್ಮೆಯ ಅವಶ್ಯಕತೆ ಕಂಡುಬರುತ್ತಿದೆ. ಶ್ರಮದ ಕೆಲಸ ಕಾರ್ಯಗಳಲ್ಲಿ ಸಾಫಲ್ಯತೆ ಕಾಣಲಿದ್ದೀರಿ.

**ವೃಶ್ಚಿಕ:** ಉದ್ಯೋಗ ವ್ಯವಹಾರಗಳಲ್ಲಿ ಸಮಸ್ಯೆಗಳು ಉಂಟಾಗಬಹುದು. ಖರೀದಿ ಮಾಡುವಾಗ ಎಚ್ಚರಿಕೆ ಅಗತ್ಯ. ಉದ್ಯೋಗದಲ್ಲಿ ಸ್ಥಾನ ಬದಲಾವಣೆ ಸಾಧ್ಯತೆ ಕಂಡುಬರುತ್ತಿದೆ. ಕೆಲಸದ ನಿಮಿತ್ತ ಅಲೆದಾಟ.

**ಧನು:** ಸಾಮಾಜಿಕ ಗೌರವಕ್ಕೆ ಪಾತ್ರರಾಗಲಿದ್ದೀರಿ. ಕೋರ್ಟ್ ವ್ಯವಹಾರಗಳಲ್ಲಿ ಜಯ. ಕುಟುಂಬದ ಸದಸ್ಯರೊಂದಿಗೆ ವಿನಾ ನಿಷ್ಠೂರದ ಮಾತುಗಳು. ಮೂತ್ರ ಸಂಬಂಧಿ ರೋಗಗಳು ತಲೆದೋರುವ ಸಾಧ್ಯತೆ.

**ಮಕರ:** ಹೂಡಿಕೆಯಿಂದ ಧನ ಲಾಭವಾಗಲಿದೆ. ಮನೆಯಲ್ಲಿ ಸಂತೋಷ ಸಂಭ್ರಮದ ಕಾರ್ಯಕ್ರಮಗಳು ಜರುಗಲಿವೆ. ಅಪರಿಚಿತ ಸ್ತ್ರೀಯೊಂದಿಗೆ ಜಗಳ ಉಂಟಾಗುವ ಸಾಧ್ಯತೆ. ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ಗಮನ ಅವಶ್ಯಕ.

**ಕುಂಭ:** ವ್ಯವಹಾರದಲ್ಲಿ ವಿಶೇಷ ಧನಲಾಭ. ಶುಭವಾರ್ತೆಯೊಂದಿಗೆ ಗೌರವ ಸನ್ಮಾನಗಳು ಅರಸಿ ಬರಲಿವೆ. ಮೇಲಧಿಕಾರಿಗಳ ನೆರವಿನಿಂದಾಗಿ ವ್ಯವಹಾರ ಸುಗಮವಾಗಲಿದೆ. ಶೃಂಗಾರ ಸಾಧನಗಳ ವ್ಯವಹಾರದಿಂದ ವಿಶೇಷ ಲಾಭ.

**ಮೀನ:** ಗೃಹ ನಿರ್ಮಾಣ, ಬಾವಿ ನಿರ್ಮಾಣದಂತಹ ಕೆಲಸಗಳಿಗೆ ಚಾಲನೆ ನೀಡುವ ಸಾಧ್ಯತೆಯೊಂದಿಗೆ ಯಶಸ್ಸು. ವ್ಯವಹಾರದಲ್ಲಿ ಪ್ರಗತಿ. ಆರ್ಥಿಕ ಅನುಕೂಲತೆ ಕೂಡಿಬರಲಿದೆ. ಬಟ್ಟೆ ವ್ಯಾಪಾರದಲ್ಲಿ ಅಧಿಕ ಲಾಭ.

**ನಿಮ್ಮ ಜನ್ಮದಿನ 11-ಜೂನ್:** ಈ ದಿನ ಅತ್ಯಂತ ಶುಭಕರ. ಬದುಕಿನಲ್ಲಿ ಹೊಸ ಯುಗವೊಂದು ಆರಂಭವಾಗಲಿದೆ. ಕೈಗೊಂಡ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುದರೊಂದಿಗೆ ಸಂಪತ್ತನ್ನೂ ತಂದು ಕೊಡಲಿದೆ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧಿಗಳು ದೊರಕುವವು. ಸಾರ್ವಜನಿಕ ಕ್ಷೇತ್ರದಲ್ಲಿ ಉತ್ತಮ ಮರ್ಯಾದೆ, ಗೌರವಗಳು ದೊರಕಲಿದೆ.

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಪ್ರೀತಿಯ ಚಟ

**ಮಾತೆವೊಲೊ ಪಿತನವೊಲೊ ಪತಿಯವೊಲೊ ಸತಿಯವೊಲೊ |**
**ಭ್ರಾತಸುತಸಖರವೊಲೊ ಪಾತ್ರವೊಂದಕೆ ತಾಂ ||**
**ಕಾತರಿಸುತಿಹುದು ತನ್ನೆಲ್ಲವನು ಮುಡುಪುಕುಡೆ |**
**ಪ್ರೀತಿಯಾ ಹುಚ್ಚು ಚಟ – ಮಂಕುತಿಮ್ಮ || 427 ||**

**ಪದ-ಅರ್ಥ:** ಮಾತೆವೊಲೊ = ತಾಯಿಯ ಹಾಗೆಯೋ, ಭ್ರಾತಸುತಸಖರವೊಲೊ = ಭ್ರಾತ(-ಸಹೋದರ) + ಸುತ + ಸಖರವೊಲೊ(ಗೆಳೆಯರ ಹಾಗೆಯೇ), ಮುಡುಪುಕುಡೆ = ಮೀಸಲಾಗಿಸು.

**ವಾಚ್ಯಾರ್ಥ:** ಪ್ರೀತಿಯ ಹುಚ್ಚು ಚಟವೆಂದರೆ, ತಾಯಿ, ತಂದೆ, ಗಂಡ, ಹೆಂಡತಿ, ಸಹೋದರ, ಮಗ, ಸ್ನೇಹಿತ ಹೀಗೆ ಯಾವುದಾದರೂ ಪಾತ್ರವೊಂದನ್ನು ವಹಿಸಿಕೊಂಡು, ತನ್ನೆಲ್ಲವನ್ನು ಮೀಸಲಿಡುವುದಕ್ಕೆ ಕಾತರಿಸುವುದು.

**ವಿವರಣೆ:** ಪ್ರೀತಿ ಎನ್ನುವುದೊಂದು ಅತ್ಯದ್ಭುತ-ವಾದ ಭಾವನೆ. ಇದೊಂದು ಭಾವನೆ ಇಲ್ಲದಿದ್ದರೆ ಇಡೀ ಪ್ರಪಂಚವೇ ನಿರರ್ಥಕ ಎನ್ನಿಸುತ್ತದೆ. ಅದೊಂದು ಹೃದಯದಾಳದ ತುಡಿತ. ಈ ಪ್ರೀತಿಗೆ ಹಲವಾರು ಮುಖಗಳು. ಸ್ನೇಹ, ವಿಶ್ವಾಸ, ಗೌರವ, ಕರುಣೆ, ಪ್ರೇಮ, ಕಾಮ, ಅನುರಾಗ, ಮಮತೆ ಎಂಬೆಲ್ಲ ಭಾವಗಳೂ ಪ್ರೀತಿಯ ಹಲವು ನೆಲೆಗಳು. ಪ್ರಾಚೀನ ಗ್ರೀಕ್ ತತ್ವಜ್ಞಾನಿಗಳು ಈ ಪ್ರೀತಿಯ ಆರು ಮುಖಗಳನ್ನು ಗುರುತಿಸಿದ್ದಾರೆ. ಅವು ಕೌಟಂಬಿಕ ಪ್ರೀತಿ, ಸ್ನೇಹಪರ ಪ್ರೀತಿ ಅಥವಾ ಪ್ಲಾಟೋನಿಕ್ ಪ್ರೀತಿ, ಪ್ರಣಯ ಪ್ರೀತಿ, ಸ್ವ-ಪ್ರೀತಿ, ಅತಿಥಿ ಪ್ರೀತಿ ಮತ್ತು ದೈವಿಕ ಪ್ರೀತಿ.

ಒಂದು ಅಮೂರ್ತ ಪರಿಕಲ್ಪನೆಯಾಗಿರುವ ಪ್ರೀತಿ, ಬೇರೊಬ್ಬ ವ್ಯಕ್ತಿಯ ಮೇಲೆ ತೋರುವ ನಯವಾದ ಕಾಳಜಿಯ, ಆಳವಾದ ಮತ್ತು ಅವರ್ಚನೀಯವಾದ ಭಾವನೆಗಳನ್ನು ಸೂಚಿಸುತ್ತದೆ. ಸಮಾನ ನೆಲೆಯಿಂದ ಪ್ರೀತಿ ಒಂದು ಮೆಟ್ಟಿಲು ಮೇಲೆ ಏರಿದರೆ ಅದು ಗೌರವವಾಗುತ್ತದೆ, ಇನ್ನೆರಡು ಮೆಟ್ಟಿಲು ಹಾರಿದರೆ ಭಕ್ತಿಯಾದೀತು. ನಮ್ಮ ನೆಲೆಯಿಂದ ಸ್ವಲ್ಪ ಕೆಳಗಿಳಿದರೆ ಅವು ಮಮತೆ, ಕರುಣೆ, ವಾತ್ಸಲ್ಯ, ದಯೆಗಳಾಗುತ್ತದೆ. ನಮ್ಮ ನೆಲೆಯಲ್ಲೇ ಉಳಿದರೆ ಅದು ಸ್ನೇಹ, ನಂಬಿಕೆ, ವಿಶ್ವಾಸವಾಗುತ್ತದೆ.

ಈ ಪ್ರೀತಿಗೆ, ಕಾಲದ ಚೌಕಟ್ಟಿಲ್ಲ. ಅದು ದೇಶ, ಜಾತಿ, ಭಾಷೆ, ಮತ, ಅಂತಸ್ತುಗಳನ್ನು ಮೀರಿದ್ದು. ಅದಕ್ಕೇ ಮನುಷ್ಯ ಒಂದು ಕ್ಷಣದ ಪ್ರೀತಿಗಾಗಿ, ಪ್ರೀತಿಯ ಸ್ಪರ್ಶಕ್ಕಾಗಿ, ಕರುಣೆಯ ನೋಟಕ್ಕಾಗಿ, ಭರವಸೆಯ ಮಾತಿಗಾಗಿ, ಮತ್ತೊಂದು ಮನುಷ್ಯ ಪ್ರಾಣಿಯನ್ನು ಬಯಸುತ್ತಾನೆ. ಆ ಪ್ರೀತಿಗಾಗಿ ಒದ್ದಾಡುತ್ತಾನೆ. ಇದೊಂದು ಗುಣವಿಲ್ಲದಿದ್ದರೆ ಪ್ರಪಂಚ ಹೇಗಿರಬಹುದಿತ್ತು ಎಂದು ಚಿಂತಿಸುವುದೂ ಕಷ್ಟ. ತಾಯಿ-ತಂದೆಯರ ಪ್ರೀತಿ, ಸಹೋದರರ ಒಲವು, ಸ್ನೇಹಿತರ ಆಪ್ತ ನುಡಿ, ಗಂಡ-ಹೆಂಡಿರ ಆಪ್ತತೆ ಇವು ಯಾವುವೂ ಇಲ್ಲದಿದ್ದರೆ ನಾವು ಸೂತ್ರ ಕಿತ್ತ ಗಾಳಿಪಟವಾಗುತ್ತೇವೆ. ನಮ್ಮನ್ನು ಹಿಡಿದಿಡುವ ಶಕ್ತಿಯೇ ಇಲ್ಲದಾಗುತ್ತದೆ. ಪ್ರೀತಿ ಒಂದು ಅಕ್ಷಯಪಾತ್ರೆ. ಪ್ರತಿಯೊಬ್ಬನಲ್ಲಿ ಇದ್ದೇ ಇರುವ ಈ ಅಕ್ಷಯ ಪಾತ್ರೆ ಸದಾ ತುಂಬುತ್ತಲೇ ಇದ್ದರೂ, ಎಂದಿಗೂ ತುಂಬುವುದಿಲ್ಲ. ಅದು ಹಂಚಿದಷ್ಟೂ ಬೆಳೆಯುತ್ತದೆ. ಹೀಗೆ ಸತತವಾಗಿ ಕೊಡುತ್ತ, ಸ್ವೀಕರಿಸುತ್ತ ಹೋಗುವುದೇ ಪ್ರೀತಿಯ ಹುಚ್ಚು ಚಟ.

ಈ ಪ್ರೀತಿ, ತಾಯಿಯಾಗಿಯೋ, ತಂದೆಯಾಗಿಯೋ, ಗಂಡನಾಗಿಯೋ, ಹೆಂಡತಿಯಾಗಿಯೋ, ಮಗ, ಬಂಧು, ಸ್ನೇಹಿತನಾಗಿಯೋ, ಒಂದು ಪಾತ್ರವನ್ನು ಬದುಕಿನಲ್ಲಿ ವಹಿಸಿಕೊಂಡು ಅದನ್ನು ಹಂಚಿ, ಬಾಚಿ ತಬ್ಬಿಕೊಳ್ಳಲು ಪ್ರಯತ್ನಿಸುತ್ತದೆ. ಅದೊಂದು ಗುಣದಿಂದಲೇ ಜಗತ್ತು ಮಾನವೀಯವಾಗಿರುವುದು.

## ಪದಬಂಧ 4624

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
2.ಒಂದೇ ಕಾಲದಲ್ಲಿದ್ದವನು (5)
4.ಆಕಾರ ಮೊದಲಾದ ವರ್ಣ (3)
5.ವರಾರಕ್ಕೆ ಬಂದಿರುವ ಸೂಕರ (3)
9.ಈ ದಿನದ ಮರುದಿನ (2)
10.ಚಂದ್ರಮಾನ ವರ್ಷದ ಎಂಟನೆಯ ತಿಂಗಳು (3)
11.ಪರವಶಗೊಂಡಾಗ ಮೃತದೇಹ ಕಾಣುತ್ತಿದೆಯಲ್ಲಾ? (2)
12.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
15.ಜನರ ಮಧ್ಯೆ ನುಸುಳಿರುವ ಚಾಕರ (3)
16.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)

**ಮೇಲಿಂದ ಕೆಳಕ್ಕೆ**
1.ಸಾವಕಾಶವಾಗಿ ಅರಳುವಿಕೆ! (3)
2.ಸರಕ್ಕನೆ ಧರಿಸಿರುವ ಮಾಲೆ (2)
3.ಅವನಲ್ಲೇ ಹೊಸತನ್ನು ಹುಡುಕಿ! (2)
4.ಒಂದನ್ನೊಂದು ಅಗಲದೇ ಇರುವಿಕೆ (5)
6.ತುರಗದ ಮೊಗವಿದು (5)
7.ಬಿಲ್ಲಿನ ಹೆದೆಯ ಧ್ವನಿ (3)
8. ಉತ್ಪತ್ತಿ ಸ್ಥಾನವಿದು (3)
13.ಹೆಂಡತಿಯಿಲ್ಲಿ ತಿರುಗಿದ್ದಾಳೆ (2)
14.ಮಗನೊಡನಿರುವ ಪುತ್ರಿ (3)
15.ಜವಾನನ ಹತ್ತಿರವಿರುವ ಮಂದಿ (2)



### 4623ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ರೇಕು 3.ಗಗ್ಗರ 5.ಕಮರಿ 7.ನಿವೇಶನ 9.ನೆಮ್ಮದಿ 10.ಕಲಿಲ 11.ಪುರೋಗಾಮಿ 13.ಚರಕ 15.ನಶ್ವರ 16.ರಸ್ತೆ
ಮೇಲಿಂದ ಕೆಳಕ್ಕೆ: 2.ಕುಹಕ 3.ಗಡಾರಿ 4.ರಜನಿ 6.ಮಸೀದಿ 8.ನಕುಲ 9.ನೆನಪು 10.ಕಮ್ಮಾರ 12.ಮಿಥುನ 13.ಚತುರ 14.ಕಮಠ

## ಸುಡೊಕು 5010

| | | | | | | | | |
|---|---|---|---|---|---|---|---|---|
| | | 6 | | 7 | | 3 | | 8 |
| | | | 2 | | 4 | | | |
| 7 | | 1 | | 5 | | 4 | | 9 |
| | 9 | | 5 | | | | 7 | |
| 1 | | | | 4 | 7 | | | 3 |
| | 6 | | | | 8 | | 5 | |
| 9 | | 5 | | | 6 | | | 1 |
| | | | | 3 | | | 8 | |
| 6 | | 8 | 4 | | | 9 | 3 | 5 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5009 ಸುಡೊಕು

| | | | | | | | | |
|---|---|---|---|---|---|---|---|---|
| 8 | 5 | 3 | 1 | 6 | 2 | 4 | 9 | 7 |
| 6 | 1 | 9 | 7 | 5 | 4 | 3 | 2 | 8 |
| 7 | 4 | 2 | 8 | 9 | 3 | 1 | 6 | 5 |
| 4 | 6 | 7 | 5 | 3 | 9 | 2 | 8 | 1 |
| 1 | 2 | 8 | 6 | 4 | 7 | 9 | 5 | 3 |
| 3 | 9 | 5 | 2 | 1 | 8 | 7 | 4 | 6 |
| 5 | 7 | 4 | 3 | 2 | 6 | 8 | 1 | 9 |
| 9 | 3 | 1 | 4 | 8 | 5 | 6 | 7 | 2 |
| 2 | 8 | 6 | 9 | 7 | 1 | 5 | 3 | 4 |

ಯಡಿಯೂರಪ್ಪ ಪರವಾಗಿ ಸಚಿವ ನಾರಾಯಣಗೌಡ ಪತ್ರ

# ಲಸಿಕೆಗೆ 'ಕೈ' ಶಾಸಕರ ನಿಧಿ ಮುಖ್ಯಮಂತ್ರಿ ತಿರಸ್ಕಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಲಸಿಕೆ ನೀಡಲು ಕಾಂಗ್ರೆಸ್ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಬಳಸಲು ಅವಕಾಶ ನೀಡುವಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾಡಿದ್ದ ಮನವಿಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿರಸ್ಕರಿಸಿದ್ದಾರೆ.

ಸಿದ್ದರಾಮಯ್ಯ ಅವರ ಪ್ರಸ್ತಾವಕ್ಕೆ ಸಂಬಂಧಿಸಿ ಯೋಜನಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಕಡತದಲ್ಲಿ ಉತ್ತರಿಸಿರುವ ಮುಖ್ಯಮಂತ್ರಿ, 'ನಿರ್ದಿಷ್ಟ ಯೋಜನೆಯ ಹಣವನ್ನು ಒಂದು ಪಕ್ಷದ ಹಣದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಲಸಿಕೆ ಕಾರ್ಯಕ್ರಮಕ್ಕೆ ವಿನಿಯೋಗಿಸುವುದು ಸೂಕ್ತವಲ್ಲ. ಅದರ ಅಗತ್ಯವೂ ಇಲ್ಲ. ಸರ್ಕಾರದ ಹಣವನ್ನು ಪಕ್ಷದ ಹಣವೆಂದು ಬಿಂಬಿಸಿ ಜನರಲ್ಲಿ ಗೊಂದಲ ಮೂಡಿಸುವುದು ಸೂಕ್ತ ಅಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಕಾಂಗ್ರೆಸ್ ಪಕ್ಷ ಮತ್ತು ಶಾಸಕರು ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ ಸಹಾಯಧನ ನೀಡಲು ಬಯಸುವುದಾದರೆ ವೈಯಕ್ತಿಕ ಹಣವನ್ನು ಸರ್ಕಾರ ನಿಗದಿಪಡಿಸಿದ ನಿಧಿಗೆ ದೇಣಿಗೆ ನೀಡಬಹುದು ಅಥವಾ ಲಸಿಕೆ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವ ಸಂಘಸಂಸ್ಥೆಗಳ ಮೂಲಕ ಸಹಾಯ ಮಾಡಬಹುದು' ಎಂದೂ ಅಭಿಪ್ರಾಯಪಟ್ಟಿದ್ದಾರೆ.

'ಲಸಿಕೆ ಕಾರ್ಯಕ್ರಮವೂ ಸೇರಿದಂತೆ ಸಾರ್ವಜನಿಕ ಆರೋಗ್ಯ ರಕ್ಷಣೆ ಕಾರ್ಯಕ್ರಮಕ್ಕೆ ಸರ್ಕಾರದಲ್ಲಿ ಸಂಪನ್ಮೂಲ ಕೊರತೆ ಇಲ್ಲ' ಎಂದೂ ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ.

'ಶಾಸಕರ ನಿಧಿಯ ಬಳಕೆಗೆ ಶಾಸಕರ ವಿವೇಚನೆಯಂತೆ ನಿಗದಿತ ಮಾರ್ಗಸೂಚಿಯ ಮಿತಿಯಲ್ಲಿ ಕಾರ್ಯಕ್ರಮ ರೂಪಿಸಲು ಅವಕಾಶವಿದೆ. ಈಗಾಗಲೇ ಈ ನಿಧಿಯ ಶೇ ಕನಿಷ್ಠ 25ರಷ್ಟು ಅನುದಾನ ಕೋವಿಡ್ ನಿಯಂತ್ರಣ ಕಾರ್ಯಕ್ಕೆ ಬಳಸಲು ಅವಕಾಶ ಕಲ್ಪಿಸಲಾಗಿದೆ. ಉಳಿದದ್ದನ್ನು ಬಳಸಲು ಆಯಾ ಕ್ಷೇತ್ರದ ಶಾಸಕರಿಗೆ ಅವಕಾಶವಿದೆ' ಎಂದಿದ್ದಾರೆ.

ಕಾಂಗ್ರೆಸ್ ಶಾಸಕರ ನಿಧಿಯನ್ನು ಲಸಿಕೆಗೆ ಬಳಸುವ ಪ್ರಸ್ತಾವವನ್ನು ಮುಖ್ಯಮಂತ್ರಿ ತಿರಸ್ಕರಿಸಿರುವ ಬಗ್ಗೆ ಸಿದ್ದರಾಮಯ್ಯ ಅವರಿಗೆ ಯೋಜನೆ ಮತ್ತು ಸಾಂಖ್ಯಿಕ ಸಚಿವ ಕೆ.ಸಿ. ನಾರಾಯಣ ಗೌಡ ಪತ್ರ ಬರೆದಿದ್ದಾರೆ.

## ಸಭಾಧ್ಯಕ್ಷರಿಗೆ ಸಿದ್ದರಾಮಯ್ಯ ಪತ್ರ

**ಬೆಂಗಳೂರು:** 'ಕೊರೊನಾ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಜಿಲ್ಲಾಧಿಕಾರಿಗಳು, ಇತರೆ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಲು ಅವಕಾಶ ನೀಡಲು ಸರ್ಕಾರಕ್ಕೆ ಸೂಚಿಸಬೇಕು' ಎಂದು ಆಗ್ರಹಿಸಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

'ಝೂಮ್ ತಂತ್ರಾಂಶದ ಮೂಲಕ ಮಾಹಿತಿ ಪಡೆಯಲು ಉದ್ದೇಶಿಸಿದ್ದು, ಈ ಬಗ್ಗೆ ಹಿಂದೆಯೇ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದೆ. ವಿರೋಧಪಕ್ಷದ ನಾಯಕರು ಸಭೆ ನಡೆಸಬಾರದು, ಪತ್ರ ಬರೆದು ಮಾಹಿತಿ ಪಡೆಯಬಹುದೆಂದು ಮುಖ್ಯಮಂತ್ರಿ ಸೂಚಿಸಿದ್ದಾರೆ ಎಂದು ಮುಖ್ಯಕಾರ್ಯದರ್ಶಿ ತಿಳಿಸಿದ್ದಾರೆ. ಸರ್ಕಾರದ ಈ ನಡೆ, ಉದ್ದೇಶಪೂರ್ವಕವಾಗಿ ಮಾಹಿತಿ ಕೊಡದೆ ಹಕ್ಕುಚ್ಯುತಿ ಉಂಟುಮಾಡಿದೆ ಎಂಬ ನಿಲುವಿಗೆ ಬರಬೇಕಾಗುತ್ತದೆ' ಎಂದು ಅವರು ಉಲ್ಲೇಖಿಸಿದ್ದಾರೆ.

'ಮುಖ್ಯ ಕಾರ್ಯದರ್ಶಿ ನನಗೆ ಕಳುಹಿಸಿರುವ ಪತ್ರದಲ್ಲಿ 2009ರ ಮತ್ತು 2016ರ ಸುತ್ತೋಲೆಗಳನ್ನು ಉಲ್ಲೇಖಿಸಿದ್ದಾರೆ. ಆದರೆ, ತಂತ್ರಜ್ಞಾನದ ಅನುಕೂಲಗಳಿರಲಿಲ್ಲ. ಈಗ ಝೂಮ್, ಗೂಗಲ್ ಮೂಲಕ ಮಾಹಿತಿ ಪಡೆಯಬಹುದು. ಅಷ್ಟಕ್ಕೂ ಅಧಿಕಾರಿಗಳ ಕಾರ್ಯವೈಖರಿ ಪರಿಶೀಲಿಸುವ, ನಿರ್ದೇಶನ ನೀಡುವ ಉದ್ದೇಶ ನನ್ನದಲ್ಲ. ಅಷ್ಟರಮಟ್ಟಿಗಿನ ಸಾಂವಿಧಾನಿಕ ಅರಿವು ನನಗಿದೆ. ಕೆಲವು ಮಾಹಿತಿ ಪಡೆಯುವುದಷ್ಟೇ ಉದ್ದೇಶ' ಎಂದೂ ಸ್ಪಷ್ಟಪಡಿಸಿದ್ದಾರೆ.

'ನಾನು ಮುಖ್ಯಮಂತ್ರಿಯಾಗಿದ್ದಾಗ ವಿರೋಧ ಪಕ್ಷದ ನಾಯಕರು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ, ಬರ ಮುಂತಾದ ವಿಚಾರಗಳ ಕುರಿತು ಮಾಹಿತಿ ಪಡೆದಿದ್ದರು. ಅದಕ್ಕೆ ನನ್ನ ಸರ್ಕಾರ ವಿರೋಧ ವ್ಯಕ್ತಪಡಿಸಿರಲಿಲ್ಲ' ಎಂದು ನೆನಪಿಸಿದ್ದಾರೆ.

## 'ನಾರಾಯಣಗೌಡ ಉಪದೇಶ ಬೇಡ'

'ಲಸಿಕೆ ನೀಡಲು ರಾಜ್ಯ ಸರ್ಕಾರ ವಿಫಲ ಆಗಿರುವುದರಿಂದ ನಾವು (ಕಾಂಗ್ರೆಸ್) ಆ ಕೆಲಸಕ್ಕೆ ಮುಂದಾಗಿದ್ದೆವು. ಶಾಸಕರ ಕ್ಷೇತ್ರಗಳಿಗೆ ಬಿಡುಗಡೆ ಮಾಡುವ ಅನುದಾನದಲ್ಲಿ ಶೇ 50 ಕೊರೊನಾ ನಿಯಂತ್ರಣಕ್ಕೆ ಬಳಸುವಂತೆ ರಾಜ್ಯ ಸರ್ಕಾರವೇ ಹೇಳಿದೆ. ಶಾಸಕರ ಅನುದಾನದಲ್ಲಿ ಕೊರೊನಾ ಲಸಿಕೆ ಖರೀದಿ ಮಾಡಿ ಸಾರ್ವಜನಿಕರಿಗೆ ಉಚಿತವಾಗಿ ವಿತರಣೆ ಮಾಡಿದರೆ ಅದು ಪಕ್ಷದ ಕಾರ್ಯಕ್ರಮ ಹೇಗಾಗುತ್ತದೆ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

'ಶಾಸಕರು ತಮ್ಮ ಸ್ವಂತ ಹಣದಲ್ಲಿ ಲಸಿಕೆ ಖರೀದಿ ಮಾಡಲಿ ಎಂದು ಸಚಿವ ನಾರಾಯಣಗೌಡರು ಸಲಹೆ ನೀಡಿದ್ದಾರೆ. ನಮ್ಮ ಪಕ್ಷದ ಶಾಸಕರು ಸ್ವಂತ ಖರ್ಚಿನಿಂದ ಆಂಬುಲೆನ್ಸ್, ವೈದ್ಯಕೀಯ ಕಿಟ್ ಮತ್ತಿತರ ಸಾಮಗ್ರಿಗಳನ್ನು ಜನರಿಗೆ ನೀಡುತ್ತಿದ್ದಾರೆ. ಈ ವಿಚಾರದಲ್ಲಿ ನಮಗೆ ಉಪದೇಶ ಕೊಡುವುದು ಬೇಡ' ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

## ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 32 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

**ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.**

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
**(Canara Bank, Cantonment Branch;**
**A/C NO.0404101200385, IFSC CODE : CNRB0000404)**

**ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್** ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3iaryCA**

**ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು** dept.finc@printersmysore.co.in **ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.**

## ದೇಣಿಗೆ ಕೊಟ್ಟವರ ವಿವರ

| ಸಂ | ಹೆಸರು, ವಿಳಾಸ | ದೇಣಿಗೆ ₹ಗಳಲ್ಲಿ |
|---|---|---|
| 1 | **ಮುದ್ದಂಕಯ್ಯ,** ನಂ.116, 13 ನೇ ಮುಖ್ಯರಸ್ತೆ, 29ನೇ ಅಡ್ಡರಸ್ತೆ, 4 ನೇ ಬ್ಲಾಕ್, ಜಯನಗರ ಈಸ್ಟ್, ಬೆಂಗಳೂರು | 21,001 |
| 2 | **ಹರೀಶ್ ಕುಮಾರ್,** ಅಕೌಂಟ್ಸ್ ಮ್ಯಾನೇಜರ್, ಈಗಲ್ ಸೆಕ್ಯುರಿಟಿ ಏಜೆನ್ಸಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು | 15,000 |
| 3 | **ದೀಪಕ್ ಕುಮಾರ್,** ನಂ.2794, 7ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಕುಮಾರಸ್ವಾಮಿ ಲೇಔಟ್, 2ನೇ ಹಂತ (ಈಸ್ಟ್), ಬೆಂಗಳೂರು | 10,000 |
| 4 | **ವಸುಂಧರಾ ರಾಜು,** 18, ಬಿಎಚ್‌ಸಿಎಸ್ ಲೇಔಟ್, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಬನ್ನೇರುಘಟ್ಟ ರಸ್ತೆ, ಬಿಟಿಎಂ ಲೇಔಟ್ 2ನೇ ಹಂತ, ಬೆಂಗಳೂರು | 10,000 |
| 5 | **ಬಾಲಸುಬ್ರಹ್ಮಣ್ಯ ಆರ್.ಎನ್,** ನಂ.114, 3ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಆರ್‌ಪಿಸಿ ಲೇಔಟ್, ಹಂಪಿನಗರ, ಬೆಂಗಳೂರು | 10,000 |
| 6 | **ಜಯರಾಮು ಎಂ.,** ಬೆಂಗಳೂರು | 10,000 |
| 7 | **ಕೆ.ಸತ್ಯಪ್ರಕಾಶ್,** #1296, 'ಶ್ರೀ ಅಮ್ಮ ಭಗವಾನ್', 25ನೇ ಸಿ ಕ್ರಾಸ್, 27ನೇ ಮುಖ್ಯರಸ್ತೆ, ಎಚ್‌ಎಸ್‌ಆರ್ ಲೇಔಟ್ ಸೆಕ್ಟರ್ 2, ಬೆಂಗಳೂರು | 5001 |
| 8. | **ಶೇಷಾದ್ರಿ ಬಿ.ಎಸ್.,** ಶ್ರೀನಿವಾಸನಗರ, ಬನಶಂಕರಿ1ನೇ ಹಂತ, ಬೆಂಗಳೂರು | 5001 |
| 9. | **ಲಕ್ಷ್ಮಣ್ ವಿ.ಕುಲಕರ್ಣಿ,** ನಂ. 14650ಬಿ, ಮಂಜುನಾಥಪುರ ಸಾರಸ್ವತಪುರ, ಧಾರವಾಡ | 5001 |
| 10. | **ಪದ್ಮಭೂಷಣ ಕೆ.ಪಿ.,** ನಂ.2001, ಸರ್.ಎಂ.ವಿಶ್ವೇಶ್ವರಯ್ಯ ನಗರ ಲೇಔಟ್, ಮಲ್ಲತ್ತಹಳ್ಳಿ ಆರ್‌ಟಿಒ ಹತ್ತಿರ, ಬೆಂಗಳೂರು | 5001 |
| 11. | **ಪ್ರೊ.ಎಂ.ಖಾಜಾಪೀರ್,** ವಿಶ್ರಾಂತ ಕುಲಪತಿ, 1122, 14 ನೇ ಅಡ್ಡರಸ್ತೆ, 2ನೇ ಹಂತ, ಇಂದಿರಾನಗರ, ಬೆಂಗಳೂರು | 5000 |
| 12. | **ಡಾ.ಪಿ.ಯಶೋದಾ,,** ನಂ.22/1, ಎಂ.ಇ.ಜಿ. ಆಫೀಸರ್ಸ್ ಕಾಲೊನಿ, ಜೀವನಹಳ್ಳಿ ಮುಖ್ಯರಸ್ತೆ, ಜೈಭಾರತ್‌ನಗರ, ಬೆಂಗಳೂರು | 5000 |
| 13 | **ಸತ್ಯನಾರಾಯಣ ಬಿ.,** ಬಿ2 202, ಶ್ರೀ ಪ್ರಕೃತಿ ಅಪಾರ್ಟ್‌ಮೆಂಟ್, 30ಡ್ಲು ಮುಖ್ಯರಸ್ತೆ, ಬೆಂಗಳೂರು | 5000 |
| 14 | **ಶಶಿಧರ ಪಾಟೀಲ್,** ಬಸವೇಶ್ವರ ಎಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ | 5000 |
| 15 | **ವಿನೋದಮ್ಮ ಎಸ್.** ಬೆಂಗಳೂರು | 5000 |
| 16 | **ಆಶಾ ಪ್ರಭಾಕರ್,** #1001, ಸಾಯಾ ಸೆರೆನ್ ಅಪಾರ್ಟ್‌ಮೆಂಟ್ಸ್, 60 ಅಡಿ ರಸ್ತೆ, ಪಾಂಡುರಂಗ ನಗರ, ಬೆಂಗಳೂರು | 5000 |
| 17 | **ರೋಹಿತ್ ಚಾರ್ಲ್ಸ್ ಫೆರ್ನಾಂಡಿಸ್,** ವೇಗಾ 25ಡಿ ಅಕ್ವಿಲಾ ಹೈಟ್ಸ್, 27 ಎಚ್‌ಎಂಟಿ ವಾಚ್ ಫ್ಯಾಕ್ಟರಿ ಮುಖ್ಯರಸ್ತೆ, ಜಾಲಹಳ್ಳಿ, ಬೆಂಗಳೂರು | 5000 |
| 18 | **ಮುನಿಯಪ್ಪ ಡಿ.ಎಂ,** ನಂ. 70/100, ಶ್ರೀಗಂಧ ರಸ್ತೆ, ಕಾಶಿವಿಶ್ವನಾಥ ಲೇಔಟ್, ಕೆ.ಆರ್.ಪುರಂ, ಬೆಂಗಳೂರು | 5000 |
| 19 | **ಎಸ್.ಎಂ.ಶಶಿಧರ್ ಮತ್ತು ಕುಟುಂಬ,** ಎಂಎಫ್ 6/8, ನಂದಿನಿ ಲೇಔಟ್, ಬೆಂಗಳೂರು | 5000 |
| 20 | **ದೇವಬ್ರತ ಪಾಲ್,** ನಂ320, ಐಐಎಸ್‌ಸಿ ಕ್ವಾರ್ಟರ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು | 3001 |
| 21 | **ನಿಂಗಪ್ಪ ಕೆ. ಬೀರಬ್ಬಿ, ಮಂಜುನಾಥನಗರ,** ಎ ಬ್ಲಾಕ್, 1ನೇ ಅಡ್ಡರಸ್ತೆ, ಇಜಾರಿಲಕಮಾಪುರ, ಹಾವೇರಿ | 3000 |
| 22 | **ವಸುಂಧರಾಂಬಿಕಾ ಎಸ್.,** ಮಹಾಲಕ್ಷ್ಮೀಪುರ, ಬೆಂಗಳೂರು | 3000 |
| 23 | **ರಾಜಶೇಖರ ಹಿರೇಮಠ,** 2913, ಖಡೇಬಜಾರ್, ಬೆಳಗಾವಿ | 2,500 |
| 24 | **ಎಚ್.ಎಸ್. ಸರಸ್ವತಿ,** ನಂ.30/1, 6ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮೈಸೂರು ಅನಂತಸ್ವಾಮಿ ರಸ್ತೆ, ಹನುಮಂತನಗರ, ಬೆಂಗಳೂರು | 2,500 |
| 25 | **ಹರಿಹರನ್ ಜೆ.** ಕೆ.ವಿ.ಅಯ್ಯರ್ ಅಂಡ್ ಕಂ., ಜೀವನಭೀಮಾ ನಗರ ನಗರ, ಎಚ್‌ಎಎಲ್ 3ನೇ ಹಂತ, ಬೆಂಗಳೂರು | 2500 |
| 26 | **ಮಾಯಾ ಎಚ್.ಉಡುಪ,** ಬೆಂಗಳೂರು | 2001 |
| 27 | **ಸೋಮಶೇಖರ ಚೌಡಪ್ಪ,** #65, ಚೌಡಪ್ಪ ರಸ್ತೆ, ಬಯ್ಯನಪಾಳ್ಯ, ಕೆಎಸ್‌ಐಟಿ ಕಾಲೇಜು ಹಿಂಭಾಗ, ಟಿ.ಜಿ.ಪುರ ಪೋಸ್ಟ್, ಬೆಂಗಳೂರು | 2001 |
| 28 | **ಉಮಾಶಂಕರ್ ಕೆ.ಆರ್, s/o** ರಂಗಸ್ವಾಮಯ್ಯ, ಕೈದಾಳ ಗೂಳೂರು ಪೋಸ್ಟ್ ಮತ್ತು ಹೋಬಳಿ, ತುಮಕೂರು ತಾಲ್ಲೂಕು | 2001 |
| 29 | **ಡಾ.ಚಂದ್ರಪ್ಪ ಪ್ರೊಫೆಸರ್,** 3ನೇ ಕ್ರಾಸ್, ಬಿಜಿಆರ್ ಎಕ್ಸ್‌ಟೆನ್ಷನ್, ಹಿರಿಯೂರು ಪಟ್ಟಣ, ಚಿತ್ರದುರ್ಗ ಜಿಲ್ಲೆ | 2000 |
| 30 | **ಗಾಯಿತ್ರಿ ಮನೋಹರ್,** ಡಿ80, ನಾರ್ತ್ ಫಸ್ಟ್ ಲೇನ್, ದೂರವಾಣಿ ನಗರ, ಬೆಂಗಳೂರು | 2000 |
| 31 | **ಲಿಂಗನಗೌಡ ರಂಗನಗೌಡ್ರ,** ಶಿವಪೇಟೆ 11ನೇ ಅಡ್ಡರಸ್ತೆ, ರೋಣ, ಗದಗ | 2000 |
| 32 | **ಸಂಧ್ಯಾ ಎಸ್.ಭಟ್,** ನಂ 482, 8ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಬಿಟಿಎಂ 2ನೇ ಹಂತ, ಬೆಂಗಳೂರು | 1800 |
| 33 | **ಅಜರ್ ಅಹ್ಮದ್,** ಬೆಂಗಳೂರು | 1500 |
| 34 | **ಆರ್.ವೆಂಕಟಸ್ವಾಮಿ,** ನಂ. 75/4, ಎಚ್ ಕಾಲೊನಿ, ಇಂದಿರಾನಗರ, 1ನೇ ಹಂತ, ಬೆಂಗಳೂರು | 1100 |
| 35 | **ವೀರಭದ್ರಪ್ಪ, ಬಂಗಾರಶೆಟ್ಟರ್,** ಕೃಷ್ಣಗಿರಿ, ಕುಷ್ಟಗಿ | 1027 |
| 36 | **ಜಗದೀಶ ಆರ್,** ಬೆಂಗಳೂರು | 1001 |
| 37 | **ಪವಿತ್ರಾ ಕೆ.ಪಿ.,** ವಿದ್ಯಾನಗರ, ಪಾವಗಡ, ತುಮಕೂರು | 1001 |
| 38 | **ಜಿ.ಎಸ್.ನುಸ್ರತ್ ಷರೀಫ್,** ಜೆ.ಪಿ.ನಗರ, ಬೆಂಗಳೂರು | 1000 |
| 39 | **ಮಾರೆಪ್ಪ ಪ್ಯಾಟಿ,** ಸಿರಿವಾಳ, ಶಹಾಪುರ ಜಿಲ್ಲೆ, ಯಾದಗಿರಿ | 1000 |
| 40 | **ವಿನಯ್ ಎಸ್. ವಾಜಂತ್ರಿ,** ಚರ್ಚ್ ರಸ್ತೆ, ಮುರ್ಡೇಶ್ವರ | 1000 |
| 41 | **ರುದ್ರಪ್ಪ ಎಂ.ಎಸ್.,** ಎಲ್‌ಐಸಿ ನಿವೃತ್ತ ಉದ್ಯೋಗಿ, ನಿರ್ಮಿತಿ ಕೇಂದ್ರ ಹಿಂಭಾಗ, ಉತ್ತರ ಬೋಗಾದಿ 2ನೇ ಹಂತ, ಮೈಸೂರು | 1000 |
| 42 | **ಎಚ್.ಪ್ರಾಣೇಶ್,** ಬೆಂಗಳೂರು | 1000 |
| 43 | **ರಾಮಯ್ಯ ರಾಜು ಕೆ,** ಬಿಇಎಂಎಲ್ ಮಾಜಿ ಉದ್ಯೋಗಿ, ಮೈಸೂರು | 1000 |
| 44 | **ಸಂಜಯ್ ಕುಮಾರ್ ಕುಲಕರ್ಣಿ,** 92, 3ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, 2ನೇ ಹಂತ, ಎಜಿಬಿ ಲೇಔಟ್, ಮಹಾಲಕ್ಷ್ಮೀಪುರ, ಬೆಂಗಳೂರು | 1000 |
| 45 | **ಪಿ.ಜಿ.ವಿಜಯ ಕುಮಾರ್,** ನಂ 217, ಶಾರದಾ ಕಾಲೋನಿ, 1ನೇ ಎಚ್ ಕ್ರಾಸ್, ಬಸವೇಶ್ವರನಗರ, ಬೆಂಗಳೂರು | 1000 |
| 46 | **ಪಿ.ವಿ.ಪ್ರೀತಿ,** ನಂ 217, ಶಾರದಾ ಕಾಲೋನಿ, 1ನೇ ಎಚ್ ಕ್ರಾಸ್, ಬಸವೇಶ್ವರನಗರ, ಬೆಂಗಳೂರು | 1000 |
| 47 | **ಯು.ಎಸ್. ಮಹೇಶ್,** #77, ಐಶ್ವರ್ಯ ನಗರ, ಕುವೆಂಪು ನಗರ, ಎನ್ ಬ್ಲಾಕ್, ಮೈಸೂರು | 1000 |
| 48 | **ಉದಯ ಬಾನು ಬಿ.ಎಸ್.,** 1280, 2ನೇ ಮುಖ್ಯರಸ್ತೆ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು | 1000 |
| 49 | **ಶ್ರೀಕೃಷ್ಣ ಎಂ.** ನಂ.200, 1ನೇ ಎಂಎನ್ ರಸ್ತೆ, 7ನೇ ಅಡ್ಡ ರಸ್ತೆ, ಐಡಿಯಲ್ ಹೋಂ ಟೌನ್‌ಶಿಪ್, ಆರ್.ಆರ್ ನಗರ, ಬೆಂಗಳೂರು | 1000 |
| 50 | **ರಾಮಪ್ಪ ಚಿನ್ನಣ್ಣನವರ,** ಎಚ್.ನಂ 112, ಶ್ರೀ ಮಾಲತೇಶ, ಸಿಟಿ ಪಾರ್ಕ್, ನವನಗರ, ಹುಬ್ಬಳ್ಳಿ | 1000 |
| | ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ: | 1,07,17,000 |

## ಶೇ 50ಕ್ಕೂ ಹೆಚ್ಚು ಹಾಸಿಗೆ ಖಾಲಿ

ಒಂದನೇ ಪುಟದಿಂದ

ಅದೇ ರೀತಿ, ಐಸಿಯು ಹಾಸಿಗೆಗಳು 444 ರಿಂದ 1,145, ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು 610 ರಿಂದ 2,059ಕ್ಕೆ ಹೆಚ್ಚಳವಾಗಿವೆ. ವೈದ್ಯಕೀಯ ಶಿಕ್ಷಣ ಇಲಾಖೆಯಡಿ 4,700 ಹಾಸಿಗೆಗಳಿಗೆ ಆಮ್ಲಜನಕ ಸಂಪರ್ಕ ಕಲ್ಪಿಸಲಾಗಿತ್ತು. ಈಗ ಆ ಸಂಖ್ಯೆ 9,405ಕ್ಕೆ ಏರಿಕೆಯಾಗಿದೆ. ಐಸಿಯು ಹಾಸಿಗೆಗಳು 341 ರಿಂದ 646ಕ್ಕೆ ಹೆಚ್ಚಳವಾಗಿದೆ.

**ಮೂರನೇ ಅಲೆಗೆ ಸಹಕಾರಿ:** ಮೊದಲನೇ ಅಲೆಯಲ್ಲಿ ಪ್ರಕರಣಗಳ ಸಂಖ್ಯೆ ಇಳಿಕೆಯಾದ ಬಳಿಕ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಅಳವಡಿಸಿದ್ದ ಹಾಸಿಗೆಗಳನ್ನು ತೆರವು ಮಾಡಲಾಗಿತ್ತು. ಹೀಗಾಗಿ, ಎರಡನೇ ಅಲೆ ಕಾಣಿಸಿಕೊಂಡಾಗ ಹಾಸಿಗೆಗಳನ್ನು ಸಜ್ಜು ಮಾಡುವುದು ಸವಾಲಾಗಿತ್ತು. ಈಗ ಕೋವಿಡ್ ನಿಯಂತ್ರಣಕ್ಕೆ ಬಂದರೂ ಮುಂದೆ ಬಂದೊದಗಬಹುದಾದ ಸಮಸ್ಯೆ ತಪ್ಪಿಸಲು ಆಮ್ಲಜನಕ ಸಂಪರ್ಕ ಹೊಂದಿರುವ ಹಾಗೂ ಇತರ ಹಾಸಿಗೆಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸರ್ಕಾರ ಮುಂದಾಗಿದೆ.

'ಏಕಾಏಕಿ ಕೋವಿಡ್ ಪೀಡಿತರ ಸಂಖ್ಯೆ ಹೆಚ್ಚಳವಾಗಿದ್ದರಿಂದ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆ ವ್ಯವಸ್ಥೆ ಮಾಡುವುದು ಕಷ್ಟವಾಯಿತು. ಈಗ ಹಾಸಿಗೆ ಕೊರತೆಯಿಲ್ಲ. ಮೂರನೇ ಅಲೆ ಕಾಣಿಸಿಕೊಂಡಲ್ಲಿ ಈಗಿನ ವ್ಯವಸ್ಥೆ ಸಹಕಾರಿಯಾಗಲಿದೆ' ಎಂಬುದು ಇಲಾಖೆ ವಿಶ್ವಾಸ.

## ಬಿಹಾರ: ಕೋವಿಡ್ ಸಾವಿನ ಪ್ರಮಾಣ ಒಂದೇ ದಿನ ಶೇ 72ರಷ್ಟು ಹೆಚ್ಚಳ!

ಒಂದನೇ ಪುಟದಿಂದ

'ಬಿಹಾರದ ಅನುಭವದ ಆಧಾರದಲ್ಲಿ, ಎಲ್ಲ ರಾಜ್ಯಗಳಲ್ಲಿಯೂ ಕೋವಿಡ್‌ನಿಂದಾದ ಮರಣದ ಸಂಖ್ಯೆಯ ಮರುಪರಿಶೀಲನೆ ನಡೆಯಬೇಕು ಮತ್ತು ಅಗತ್ಯ ಬಿದ್ದರೆ ಪರಿಷ್ಕರಣೆ ಆಗಬೇಕು. ಬಿಹಾರ ಮತ್ತು ಉತ್ತರ ಪ್ರದೇಶ ಮಾತ್ರವಲ್ಲ, ಕೇರಳ ಸೇರಿ ಎಲ್ಲ ರಾಜ್ಯಗಳಲ್ಲಿಯೂ ಈ ಪ್ರಕ್ರಿಯೆ ನಡೆಯಬೇಕು' ಎಂದು ಕೋಯಿಕ್ಕೋಡ್ ಐಐಎಂನ ಸಂದರ್ಶಕ ಪ್ರಾಧ್ಯಾಪಕ ರಿಜೊ ಜಾನ್ ಹೇಳಿದ್ದಾರೆ. ಬಿಹಾರದಲ್ಲಿ ಕೋವಿಡ್ ಅಂಕಿ ಅಂಶ ಸಮರ್ಪಕವಾಗಿಲ್ಲ ಎಂದು ಬಹಳ ಹಿಂದೆಯೇ ಅವರು ಅನುಮಾನ ವ್ಯಕ್ತಪಡಿಸಿದ್ದರು.

ರಾಜ್ಯ ಸರ್ಕಾರವು ಕೊಟ್ಟ ಅಂಕಿ ಅಂಶಗಳು ಸಂದೇಹಾಸ್ಪದವಾಗಿದ್ದ ಕಾರಣ ಸಾವಿನ ಸಂಖ್ಯೆಯ ಮರುಪರಿಶೀಲನೆಗೆ ಪಟ್ನಾ ಹೈಕೋರ್ಟ್ ಆದೇಶಿಸಿತ್ತು.

ಬಕ್ಸರ್ ಜಿಲ್ಲೆಯ ಒಂದು ಉದಾಹರಣೆಯನ್ನು ನೋಡಬಹುದು. ಮುಕ್ತಿಧಾಮ್ ಚಾರಿತಾರ್ಬನ್ ಎಂಬ ಶವಸಂಸ್ಕಾರ ಮೈದಾನದಲ್ಲಿ ಮೇ 5 ಮತ್ತು ಮೇ 14ರ ನಡುವೆ 10 ದಿನಗಳಲ್ಲಿ 789 ಶವಗಳ ಅಂತ್ಯಕ್ರಿಯೆ ಮಾಡಲಾಗಿದೆ. ಆದರೆ ಮಾರ್ಚ್ 1ರಿಂದ ಅದೇ ಜಿಲ್ಲೆಯಲ್ಲಿ ಕೇವಲ ಆರು ಸಾವುಗಳು ಸಂಭವಿಸಿವೆ ಎಂದು ಮುಖ್ಯ ಕಾರ್ಯದರ್ಶಿ ನ್ಯಾಯಾಲಯಕ್ಕೆ ತಿಳಿಸಿದ್ದಾರೆ ಎಂಬುದನ್ನು ಕೋರ್ಟ್ ಗಮನಿಸಿತು.

'ನಾವು ಈ ಪ್ರಮಾಣಪತ್ರಗಳ ಬಗ್ಗೆ ಹೆಚ್ಚು ಪ್ರತಿಕ್ರಿಯಿಸುವುದಿಲ್ಲ. ಎಲ್ಲಾ ಸಂಗತಿಗಳನ್ನು ಖಚಿತ ಮೂಲಗಳಿಂದ ಪರಿಶೀಲಿಸಬೇಕು ಮತ್ತು ನಂತರ ಅದನ್ನು ನಮ್ಮ ಮುಂದೆ ಇಡಬೇಕು. ಇಲ್ಲದಿದ್ದರೆ ಅದು ಸುಳ್ಳು ಅಥವಾ ಅಪೂರ್ಣವಾದ ಪ್ರಮಾಣಪತ್ರ ಆಗುತ್ತದೆ' ಎಂದು ಹೈಕೋರ್ಟ್ ಹೇಳಿತು.

ಸಂದೇಹಾಸ್ಪದ ದತ್ತಾಂಶಗಳು ಬಿಹಾರದಲ್ಲಿ ಮಾತ್ರ ಕಂಡುಬಂದಿಲ್ಲ. ಗುಜರಾತ್, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ಇತರ ರಾಜ್ಯಗಳಿಂದ ಇದೇ ರೀತಿಯ ವರದಿಗಳಿವೆ.

'ಲಭ್ಯವಿರುವ ಅಂದಾಜಿನ ಆಧಾರದ ಮೇಲೆ, ರಾಜ್ಯದಿಂದ ರಾಜ್ಯಕ್ಕೆ ಸಾವಿನ ವರದಿಯು 2ರಿಂದ 10 ಪಟ್ಟು ವ್ಯತ್ಯಾಸವಾಗುತ್ತದೆ' ಎಂದು ಸಾಂಕ್ರಾಮಿಕ ರೋಗಶಾಸ್ತ್ರಜ್ಞ ಗಿರಿಧರ್ ಬಾಬು ಹೇಳಿದ್ದಾರೆ.

ಭಾರತದಲ್ಲಿ ಕೋವಿಡ್ ಸಾವು ವರದಿಯಾಗುವ ಪ್ರಮಾಣವು 4.5 ಪಟ್ಟು ಕಡಿಮೆ ಇದೆ ಎಂದು ಮಿಷಿಗನ್ ವಿಶ್ವವಿದ್ಯಾನಿಲಯದ ಇತ್ತೀಚಿನ ಅಧ್ಯಯನ ಅಭಿಪ್ರಾಯಪಟ್ಟಿದೆ. ಆದರೆ ಕೋವಿಡ್ ಸಾವು ಸರಿಯಾಗಿ ವರದಿ ಆಗುತ್ತಿಲ್ಲ ಎಂಬ ಈ ಅಧ್ಯಯನಗಳನ್ನು ಕೇಂದ್ರ ಆರೋಗ್ಯ ಸಚಿವಾಲಯ ಒಪ್ಪುವುದಿಲ್ಲ.

ಪೌಷ್ಟಿಕ ಆಹಾರ ಸೇವಿಸಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ಪದ್ಮ ಪ್ರಶಸ್ತಿಗೆ ನಾಮನಿರ್ದೇಶನ: ಸೆ. 15 ಕೊನೆ ದಿನ

**ನವದೆಹಲಿ (ಪಿಟಿಐ):** ಪ್ರತಿಷ್ಠಿತ ಪದ್ಮ ಪ್ರಶಸ್ತಿಗಳಿಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರ ಹೆಸರುಗಳನ್ನು ನಾಮನಿರ್ದೇಶನ ಮಾಡುವಂತೆ ಕೇಂದ್ರ ಸರ್ಕಾರ ನಾಗರಿಕರಿಗೆ ಮನವಿ ಮಾಡಿದೆ.

ಪ್ರಶಸ್ತಿಗೆ ಆನ್‌ಲೈನ್ ನಾಮನಿರ್ದೇಶನ ಅಥವಾ ಶಿಫಾರಸು ಮಾಡುವುದು ಮುಕ್ತವಾಗಿದ್ದು, ಸೆಪ್ಟೆಂಬರ್ 15 ಕೊನೆಯ ದಿನವಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ನಾಮನಿರ್ದೇಶನ ಮತ್ತು ಶಿಫಾರಸುಗಳನ್ನು https://padmaawards.gov.in. ಮೂಲಕವೇ ಸಲ್ಲಿಸಬೇಕು ಎಂದು ತಿಳಿಸಿದೆ.

ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಾದ ಪದ್ಮ ವಿಭೂಷಣ, ಪದ್ಮ ಭೂಷಣ ಮತ್ತು ಪದ್ಮಶ್ರೀಗೆ ಆಯ್ಕೆಯಾದವರನ್ನು ಗಣರಾಜ್ಯೋತ್ಸವ ಸಂದರ್ಭದಲ್ಲಿ ಘೋಷಿಸಲಾಗುತ್ತದೆ. ಎಲ್ಲ ನಾಗರಿಕರು ನಾಮನಿರ್ದೇಶನ ಮಾಡಬೇಕು. ನಾಗರಿಕರು ಸ್ವತಃ ತಮ್ಮ ಹೆಸರನ್ನು ಸಹ ನಾಮನಿರ್ದೇಶನ ಮಾಡಬಹುದು ಅಥವಾ ಯಾವುದೇ ವ್ಯಕ್ತಿಯ ಹೆಸರನ್ನು ಶಿಫಾರಸು ಮಾಡಬಹುದು ಎಂದು ಗೃಹ ಸಚಿವಾಲಯ ತಿಳಿಸಿದೆ.

## ಅಂಬೇಡ್ಕರ್ ಭಾವಚಿತ್ರದ ಪೋಸ್ಟರ್ ವಿವಾದ: ಪರಿಶಿಷ್ಟ ಜಾತಿಯ ಯುವಕನ ಹತ್ಯೆ

**ಜೈಪುರ (ಪಿಟಿಐ):** ಮನೆಯ ಹೊರಗೆ ಬಿ.ಆರ್. ಅಂಬೇಡ್ಕರ್ ಭಾವಚಿತ್ರವುಳ್ಳ ಪೋಸ್ಟರ್ ಹಾಕಿದ್ದ ವಿಷಯಕ್ಕೆ ಸಂಬಂಧಿಸಿ ನಡೆದ ಜಗಳದಲ್ಲಿ ಪರಿಶಿಷ್ಟ ಜಾತಿಯ ಯುವಕನ ಮೇಲೆ ಹಲ್ಲೆ ನಡೆಸಿ, ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ರಾಜಸ್ಥಾನದ ಹನುಮಾನಗಡ ಜಿಲ್ಲೆಯಲ್ಲಿ ಈ ಘಟನೆ ನಡೆದಿದೆ. ಭೀಮ್ ಆರ್ಮಿ ಸದಸ್ಯ ವಿನೋದ್ ಬಾಮ್ನಿಯಾ (22) ಹತ್ಯೆಯಾದವರು.

ಅನಿಲ್ ಸಿಹಾಗ್ ಮತ್ತು ರಾಕೇಶ್ ಸಿಹಾಗ್ ಅವರು ಮೇ 24 ರಂದು ವಿನೋದ್ ಬಾಮ್ನಿಯಾ ಅವರ ಮನೆಯ ಹೊರಗೆ ಹಾಕಿದ್ದ ಪೋಸ್ಟರ್ ಅನ್ನು ಹರಿದು ಹಾಕಿದ್ದರು. ಬಾಮ್ನಿಯಾ ಹಾಗೂ ಅವರ ಕುಟುಂಬದವರು ಆಕ್ಷೇಪ ವ್ಯಕ್ತಪಡಿಸಿದ ನಂತರ, ಸ್ಥಳೀಯರು ಮಧ್ಯಪ್ರವೇಶಿಸಿ ಜಗಳ ಬಗೆಹರಿಸಲು ಮುಂದಾಗಿದ್ದರು. ಹತ್ಯೆ ಮಾಡಿದ ಆರೋಪಿಗಳ ಕುಟುಂಬ ಸದಸ್ಯರು ಅದೇ ದಿನ ಅವರ ಪರವಾಗಿ ಕ್ಷಮೆಯಾಚಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಅನಿಲ್ ಹಾಗೂ ರಾಕೇಶ್ ಇತರ ನಾಲ್ವರ ಬೆಂಬಲಿಗರೊಂದಿಗೆ ಜೂನ್ 5 ರಂದು ಬಾಮ್ನಿಯಾ ಮೇಲೆ ಹಲ್ಲೆ ನಡೆಸಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ವಿನೋದ್ ಬಾಮ್ನಿಯಾ ಚಿಕಿತ್ಸೆಗೆ ಸ್ಪಂದಿಸದೇ ಜೂನ್ 7 ರಂದು ಮೃತಪಟ್ಟಿದ್ದಾರೆ. ಆರೋಪಿಗಳಾದ ಅನಿಲ್ ಮತ್ತು ರಾಕೇಶ್, ಸ್ನೇಹಿತರಾದ ಸಾಕ್ಷಮ್ ಹಾಗೂ ಹೈದರ್ ಅಲಿ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ₹ 300 ಕೋಟಿ ಆನ್‌ಲೈನ್ ವಂಚನೆ

ಒಂದನೇ ಪುಟದಿಂದ

ಬಂಧನ ಭೀತಿಯಲ್ಲಿರುವ ದಂಪತಿ, ನಿರೀಕ್ಷಣಾ ಜಾಮೀನು ಕೋರಿ ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಸಿಐಡಿ ಪೊಲೀಸರು ಹಾಗೂ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ತಯಾರಿ ನಡೆಸುತ್ತಿದ್ದಾರೆ. ಅರ್ಜಿ ವಿಚಾರಣೆ ಜೂನ್ 15ರಂದು ನಡೆಯಲಿದೆ.

**ದೂರಿನ ವಿವರ:** 'ಹಣ ವರ್ಗಾವಣೆ ಮಧ್ಯವರ್ತಿ ಕಂಪನಿಯಾಗಿ 'ರೇಜೋರ್ ಪೇ' ಕೆಲಸ ಮಾಡುತ್ತಿದೆ. 13 ಆರೋಪಿಗಳ ಕಂಪನಿಗಳು ನಮ್ಮ ಕಂಪನಿಯಡಿ ನೋಂದಣಿ ಮಾಡಿಕೊಂಡಿವೆ. ಇವರೆಲ್ಲ ಸಾವಿರಾರು ಗ್ರಾಹಕರಿಗೆ ವಂಚಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು 'ರೇಜೋರ್ ಪೇ' ಕಂಪನಿಯ ಅಭಿಷೇಕ್ ದೂರಿನಲ್ಲಿ ತಿಳಿಸಿದ್ದಾರೆ.

**'ಡಬ್ಲ್ಯುಪಿ ರಮ್ಮಿ' ಕಂಪನಿಯಡಿ ಅಕ್ರಮ:** 'ಚೀನಾದ ಹು ಕ್ಸಿಯೋಲಿನ್, ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದು ದೇವನಹಳ್ಳಿಯ ಸಾದಹಳ್ಳಿ ಗೇಟ್ ಬಳಿ ನೆಲೆಸಿದ್ದಾಳೆ. ಉತ್ತರ ಭಾರತದ ನಿವಾಸಿಗಳನ್ನು ಪರಿಚಯಿಸಿಕೊಂಡು ತಂಡ ಕಟ್ಟಿಕೊಂಡಿದ್ದಾಳೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅನಸ್ ಅಹ್ಮದ್‌ನನ್ನು ಮದುವೆಯಾದ ಕ್ಸಿಯೋಲಿನ್, ಆತನ ಮೂಲಕ 'ಡಬ್ಲ್ಯುಪಿ ರಮ್ಮಿ' ಕಂಪನಿ ತೆರೆದಿದ್ದಾಳೆ. ಅದಕ್ಕೆ ಪತಿ, ಆಕೆ ಹಾಗೂ ಇತರರು ನಿರ್ದೇಶಕರಿದ್ದಾರೆ.'

'ಪ್ಲೇ ರಮ್ಮಿ ಗೇಮ್ ಡಾಟ್ ಕಾಮ್ ಜಾಲತಾಣ ಹಾಗೂ ಆ್ಯಪ್ ರೂಪಿಸಿರುವ ಆರೋಪಿಗಳು, ಆನ್‌ಲೈನ್ ಜೂಜು ಆಡಿಸುತ್ತಿದ್ದಾರೆ. ಇದರಿಂದ ಹಣ ಸಂಪಾದಿಸುತ್ತಿರುವ ಕ್ಸಿಯೋಲಿನ್ ಹಾಗೂ ಅನಸ್, ಇತರೆ ಆರೋಪಿಗಳ ಜೊತೆ ಸೇರಿಕೊಂಡು ಬುಲ್‌ಫಿನ್ಚ್ ಸಾಫ್ಟ್‌ವೇರ್, ಎಚ್ ಆ್ಯಂಡ್ ಎಸ್ ವೆಂಚರ್ಸ್, ಕ್ಲಿಪ್ಫೋರ್ಡ್ ವೆಂಚರ್ಸ್ ಹಾಗೂ ಬಯೋಸಾಫ್ಟ್ ವೆಂಚರ್ಸ್ ಕಂಪನಿ ತೆರೆದು ವಂಚಿಸಿದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

## '40 ವಿಧಾನಸಭಾ ಕ್ಷೇತ್ರಗಳಿಗೆ ತಲಾ ಐದು ಆಮ್ಲಜನಕ ಸಾಂದ್ರಕ ಹಂಚಿಕೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಸೋಂಕಿತರಿಗೆ ತಂತ್ರಜ್ಞಾನದ ನೆರವಿನಿಂದ ಚಿಕಿತ್ಸೆ ನೀಡಲು 200 ಆಮ್ಲಜನಕ ಸಾಂದ್ರಕಗಳೂ ಸೇರಿದಂತೆ ₹ 2.5 ಕೋಟಿ ಮೊತ್ತದ ವಿವಿಧ ಅತ್ಯಾಧುನಿಕ ವೈದ್ಯಕೀಯ ಸಾಮಗ್ರಿಗಳನ್ನು ಕೆಲವು ಕಂಪನಿಗಳು 'ಸಿ-ಕ್ಯಾಂಪ್' ಮೂಲಕ ರಾಜ್ಯ ಸರ್ಕಾರಕ್ಕೆ ಕೊಡುಗೆಯಾಗಿ ನೀಡಿವೆ.

ರಾಜ್ಯ ಕೋವಿಡ್ ಕಾರ್ಯಪಡೆ ಮುಖ್ಯಸ್ಥರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಸಿ-ಕ್ಯಾಂಪ್ ಸಂಸ್ಥೆಯ ಸಿಇಒ ಡಾ. ತಸ್ಲೀಮಾರಿಫ್ ಸಯೀದ್ ಇವನ್ನು ಹಸ್ತಾಂತರಿಸಿದರು.

'200 ಆಮ್ಲಜನಕ ಸಾಂದ್ರಕಗಳನ್ನು ಹುವೈ ಕಂಪನಿ ನೀಡಿದ್ದು ತಲಾ ಐದರಂತೆ 40 ವಿಧಾನಸಭಾ ಕ್ಷೇತ್ರಗಳಿಗೆ ಹಂಚಲಾಗುವುದು. ಟುರ್ಟಲ್ ಶೆಲ್ ಟೆಕ್ನಾಲಜೀಸ್ ಕಂಪನಿ ಡಾಸಿ ಎನ್ನುವ 200 ಮಾನಿಟರಿಂಗ್ ಸಿಸ್ಟಂಗಳನ್ನು ನೀಡಿದೆ. ಸೋಂಕಿತ ವ್ಯಕ್ತಿ ಎಲ್ಲೇ ಇದ್ದರೂ ಇದರ ಮೂಲಕವೇ ಆಮ್ಲಜನಕ, ಪಲ್ಸ್ ರೇಟ್, ರಕ್ತದೊತ್ತಡ ಪರಿಶೀಲಿಸಬಹುದು. ಇದರಿಂದ ಸಿಬ್ಬಂದಿ ಅಗತ್ಯವಿಲ್ಲದೆ ನಿಖರ ಮಾಹಿತಿ ಸಿಗಲಿದೆ' ಎಂದು ಅಶ್ವತ್ಥನಾರಾಯಣ ಹೇಳಿದರು.

'ಇನ್ನ್ಯಾಕಲ್ ಟೆಕ್ನಾಲಜೀಸ್ ಸಂಸ್ಥೆ ಆಮ್ಲಜನಕ ಪೂರೈಕೆಯ ಅತ್ಯಾಧುನಿಕ 15 ಯಂತ್ರಗಳನ್ನು ನೀಡಿದೆ. ಲಸಿಕೆಯನ್ನು ಯಾವುದೇ ಉಷ್ಣಾಂಶದಲ್ಲೂ ಸಾಗಣೆಗೆ ನೆರವಾಗುವ ಕಿಟ್ ಅನ್ನು ಸಿ-ಕ್ಯಾಂಪ್ ಸಂಸ್ಥೆ ನೀಡಿದೆ ಎಂದು ಹೇಳಿದರು.

ರಾಯಚೂರು ಶಾಸಕ ಡಾ.ಶಿವರಾಜ್ ಪಾಟೀಲ್ ಮತ್ತು ಬಸವಕಲ್ಯಾಣ ಶಾಸಕ ಶರಣು ಸಲಗರ ಅವರಿಗೆ ತಲಾ ಐದು ಆಮ್ಲಜನಕ ಸಾಂದ್ರಕಗಳನ್ನು ಅಶ್ವತ್ಥನಾರಾಯಣ ವಿತರಿಸಿದರು.

ಹುವೈ ಇಂಡಿಯಾ ಕಂಪನಿಯ ಸಹಾಯಕ ಉಪಾಧ್ಯಕ್ಷ ಗಿಲ್ಬರ್ಟ್ ನಾಥನ್, ಇನ್ನ್ಯಾಕಲ್ ಟೆಕ್ನಾಲಜೀಸ್ ಸಂಸ್ಥೆಯ ಸಹ ಸಂಸ್ಥಾಪಕ ನಿತೇಶ್ ಜಾಹಂಗೀರ್, ಟುರ್ಟಲ್ ಶೆಲ್ ಟೆಕ್ನಾಲಜೀಸ್‌ನ ಸಹ ಸಂಸ್ಥಾಪಕ ಮುದಿತ್ ದಂಡವತೆ ಇದ್ದರು.

ಪ್ರಜಾವಾಣಿ
## ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ವಾಹನ

Four Wheelers Selling

Others

ಟಾಟಾ Intra V10
ದೊಡ್ಡ ಗಾಡಿಯ ಲೋಡ್ ಅಧಿಕ ಆದಾಯ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

ಇಂದೇ ಕೊಳ್ಳಿರಿ ನಿಮ್ಮ ಮಾಸಿಕ ಕಂತನ್ನು 2 ತಿಂಗಳ* ನಂತರ ಪ್ರಾರಂಭಿಸಿ
4.99%* ಬಡ್ಡಿದರ/ 47 ತಿಂಗಳು
₹30,000/-* ದವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹20,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore -7259784441
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Bidar - 73899 44057
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತವೆ.

ಉದ್ಯೋಗಾವಕಾಶ

General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸ್ತ್ರೀಪುರುಷ ವಶಕ್ಕೆ ''ಕೇರಳ ಕಾಶ್ಮೋರ'' ಪೂಜಾ ಶಕ್ತಿಯಿಂದ 'ರತಿ ಕಾಮರಾಜ' ಮಂತ್ರದಿಂದ ಕೇವಲ 24 ಘಂಟೆಗಳಲ್ಲಿ ಪರಿಹಾರ ನೀಡಲಾಗುವುದು. 9686007334

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

FOR CLASSIFIED ADVERTISEMENTS
NAME CHANGE
Contact:
Santhosh: 9880856233
Vishal: 9845114560
Ravi: 9606912256

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

LOOKING FOR JOB OPPORTUNITY
Refer Classifieds on Wednesday

ಪುಣ್ಯಸ್ಮರಣೆ

ಶ್ರೀಮತಿ ದಾಕ್ಷಾಯಣಮ್ಮ
(ವೈ.ಎನ್. ಸತ್ಯನಾರಾಯಣರವರ ಪ್ರೀತಿಯ ಧರ್ಮಪತ್ನಿ)
ಜನನ: 06–06–1952 ನಿಧನ: 06–05–2021
ಶ್ರೀಮತಿಯವರು ದಿನಾಂಕ 06–05–2021ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಪತಿ ಸತ್ಯನಾರಾಯಣ, ಅಕ್ಕರೆಯ ಮಗ ಶ್ರೀಧರ್, ಸೊಸೆ ಶ್ರೀಮತಿ ರಶ್ಮಿ, ಮೊಮ್ಮಕ್ಕಳು ಹಾಗೂ ಕುಟುಂಬಸ್ಥರು.
ಫೋನ್: 9449710359

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

## ಚುಟುಕು ಸುದ್ದಿ

### ‘ಬಾಲಕಿಯರಿಗೆ ಮೊಬೈಲ್ ನೀಡುವುದೇ ಅತ್ಯಾಚಾರಕ್ಕೆ ಕಾರಣ’

ಲಖನೌ: ‘ಬಾಲಕಿಯರಿಗೆ ಮೊಬೈಲ್ ನೀಡಿದರೆ ಅತ್ಯಾಚಾರಕ್ಕೆ ಕಾರಣವಾಗುತ್ತದೆ. ಹೀಗಾಗಿ, ಮೊಬೈಲ್ ನೀಡಬೇಡಿ’ ಎಂದು ಉತ್ತರ ಪ್ರದೇಶ ಮಹಿಳಾ ಆಯೋಗದ ಸದಸ್ಯೆ ಮೀನಾ ಕುಮಾರಿ ನೀಡಿರುವ ಹೇಳಿಕೆ ವಿವಾದಕ್ಕೆ ಕಾರಣವಾಗಿದ್ದು, ಬೇಷರತ್ ಕ್ಷಮೆಯಾಚಿಸಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿವೆ.

‘ಬಾಲಕಿಯರು ಮೊಬೈಲ್‌ನಲ್ಲೇ ಬಾಲಕರ ಜತೆ ಸ್ನೇಹ ಬೆಳೆಸುತ್ತಾರೆ. ಬಳಿಕ, ಹುಡುಗನ ಜತೆ ಓಡಿಹೋಗುತ್ತಾರೆ. ಸಮಾಜ ಅಥವಾ ಪೊಲೀಸರಿಂದ ಒತ್ತಡಗಳು ಹೆಚ್ಚಾದಾಗ ಅವರು ಮದುವೆಯಾಗುತ್ತಾರೆ’ ಎಂದು ಮೀನಾ ಕುಮಾರಿ ಅವರು ಹೇಳಿಕೆ ನೀಡಿರುವ ವಿಡಿಯೊ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಮೀನಾಕುಮಾರಿ ಒಬ್ಬ ಮಹಿಳೆಯಾಗಿ ಇಂತಹ ಹೇಳಿಕೆ ನೀಡಿರುವುದು ನಾಚಿಕೆಗೇಡಿತನದ್ದು ಎಂದು ಸಮಾಜವಾದಿ ಪಕ್ಷದ ನಾಯಕ ಅನುರಾಗ್ ಭದೌರಿಯಾ ಟೀಕಿಸಿದ್ದಾರೆ.

### ಪುರಿ ರಥಯಾತ್ರೆ ಸಿಮಿತ ಪ್ರವೇಶ

ಭುವನೇಶ್ವರ (ಪಿಟಿಐ): ಒಡಿಶಾದ ಪುರಿ ಪಟ್ಟಣದಲ್ಲಿ ಹೆಸರಾಂತ ಜಗನ್ನಾಥ ರಥಯಾತ್ರೆ ಈ ವರ್ಷವೂ ಭಕ್ತರ ಅನುಪಸ್ಥಿತಿಯಲ್ಲಿ ನಿಗದಿಯಂತೆ ಜುಲೈ 12ರಂದು ನಡೆಯಲಿದೆ ಎಂದು ರಾಜ್ಯ ಸರ್ಕಾರ ಗುರುವಾರ ಪ್ರಕಟಿಸಿದೆ.

ಕೋವಿಡ್ ಮಾರ್ಗಸೂಚಿ ನಿಯಮಗಳ ಅನುಸಾರ ರಥಯಾತ್ರೆ ನಡೆಯಲಿದೆ. ಭಕ್ತರಿಗೆ ಪ್ರವೇಶ ಇರುವುದಿಲ್ಲ ಎಂದು ಸರ್ಕಾರ ಪ್ರಕಟಿಸಿದೆ. ಕೋವಿಡ್ ಕಾರಣದಿಂದ ಕಳೆದ ವರ್ಷವೂ ಭಕ್ತರಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು.

### ದಿನಗೂಲಿ, ಗುತ್ತಿಗೆ ಕಾರ್ಮಿಕರಿಗೂ ವಿಮೆ

ನವದೆಹಲಿ (ಪಿಟಿಐ): ನೌಕರರ ರಾಜ್ಯ ವಿಮಾ ನಿಗಮದ (ಇಎಸ್‌ಐಸಿ) ಆರೋಗ್ಯ ವಿಮಾ ಸೌಲಭ್ಯಗಳನ್ನು ನಗರಪಾಲಿಕೆ ಮತ್ತು ಪುರಸಭೆಗಳು ನೇಮಿಸಿಕೊಳ್ಳುವ ದಿನಗೂಲಿ ಮತ್ತು ಗುತ್ತಿಗೆ ಕಾರ್ಮಿಕರಿಗೂ ವಿಸ್ತರಿಸಲಾಗುವುದು ಎಂದು ಕೇಂದ್ರ ಕಾರ್ಮಿಕ ಸಚಿವಾಲಯವು ಗುರುವಾರ ಪ್ರಕಟಿಸಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ನಗರಾಡಳಿತ ಸಂಸ್ಥೆಗಳು ದಿನಗೂಲಿ ಮತ್ತು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತವೆ. ಆದರೆ, ಅವರು ಕಾಯಂ ಉದ್ಯೋಗಿಗಳು ಅಲ್ಲದ ಕಾರಣ ಸಾಮಾಜಿಕ ಭದ್ರತೆಯನ್ನು ಹೊಂದಿರುವುದಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ, ನಗರಾಡಳಿತ ಸಂಸ್ಥೆಗಳಲ್ಲಿ ಕೆಲಸ ಮಾಡುವ ದಿನಗೂಲಿ ಮತ್ತು ಗುತ್ತಿಗೆ ಕಾರ್ಮಿಕರಿಗೆ ಇಎಸ್‌ಐಸಿ ವಿಮಾ ಸೌಲಭ್ಯ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

### ನಬಮ್ ತುಕಿ ವಿರುದ್ಧ ಎಫ್‌ಐಆರ್

ನವದೆಹಲಿ: ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರ ಆರೋಪದಡಿ ಅರುಣಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ನಬಮ್ ತುಕಿ ಅವರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ಕೋಲ್ಕತ್ತದ ಸಾಲ್ಟ್ ಲೇಕ್ ಪ್ರದೇಶದಲ್ಲಿ ಕೇಂದ್ರೀಯ ವಿದ್ಯಾಲಯದ ಶಾಲೆಯ ಕಾಂಪೌಂಡ್ ನಿರ್ಮಾಣದ ಗುತ್ತಿಗೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿಬಂದಿತ್ತು. ಈ ಪ್ರಕರಣದ ತನಿಖೆಯನ್ನುಸಿಬಿಐ ಕೈಗೊಂಡಿದೆ.

### ಗಡಿಯಲ್ಲಿ ಚೀನಾದ ಪ್ರಜೆ ಬಂಧನ

ಕೋಲ್ಕತ್ತ: ‘ಭಾರತ–ಬಾಂಗ್ಲಾದೇಶ ಅಂತರರಾಷ್ಟ್ರೀಯ ಗಡಿಯಲ್ಲಿ ಚೀನಾದ ಪ್ರಜೆಯನ್ನು ಗಡಿ ಭದ್ರತಾ ಪಡೆಯು(-ಬಿಎಸ್‌ಎಫ್) ಗುರುವಾರ ಬಂಧಿಸಿದೆ’ ಎಂದು ಅಧಿಕಾರಿಗಳು ಹೇಳಿದರು.

‘ಈತನನ್ನು ಮಾಲ್ಡಾ ಜಿಲ್ಲೆಯ ಗಡಿ ಪ್ರದೇಶದಲ್ಲಿ ಬಂಧಿಸಲಾಗಿದೆ. ಬಿಎಸ್‌ಎಫ್ ಸಿಬ್ಬಂದಿ, ಸ್ಥಳೀಯ ಪೊಲೀಸರು ಮತ್ತು ಗುಪ್ತಚರ ಇಲಾಖೆಯ ಅಧಿಕಾರಿಗಳು ಬಂಧಿತನ ವಿಚಾರಣೆ ನಡೆಸಿದ್ದಾರೆ.

### ‘ನ್ಯಾಯ್: ದಿ ಜಸ್ಟೀಸ್’ ಚಿತ್ರಕ್ಕೆ ಹಸಿರುನಿಶಾನೆ

ನವದೆಹಲಿ: ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಅವರ ಜೀವನ ಆಧಾರಿತ ಸಿನಿಮಾ ಎನ್ನಲಾದ ‘ನ್ಯಾಯ್: ದಿ ಜಸ್ಟೀಸ್’ ಬಿಡುಗಡೆಗೆ ತಡೆಯಾಜ್ಞೆ ನೀಡಲು ದೆಹಲಿ ಹೈಕೋರ್ಟ್ ಗುರುವಾರ ನಿರಾಕರಿಸಿದೆ.

‘ನ್ಯಾಯ್: ದಿ ಜಸ್ಟೀಸ್’ ಸಿನಿಮಾವು ಶುಕ್ರವಾರ ಬಿಡುಗಡೆಗೊಳ್ಳಲಿದೆ. ಈ ಚಿತ್ರಕ್ಕೆ ತಡೆಯಾಜ್ಞೆ ನೀಡುವಂತೆ ಕೋರಿ ಸುಶಾಂತ್ ತಂದೆ ಕೃಷ್ಣ ಕಿಶೋರ್ ಸಿಂಗ್ ಅವರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ನ್ಯಾಯಮೂರ್ತಿ ಸಂಜೀವ್ ನರೂಲಾ ಅವರು ತಿರಸ್ಕರಿಸಿದ್ದಾರೆ.

‘ನ್ಯಾಯ್–ದಿ ಜಸ್ಟೀಸ್’, ‘ಸೂಸೈಡ್ ಆರ್ ಮರ್ಡರ್: ಎ ಸ್ಟಾರ್ ವಾಸ್ ಲಾಸ್ಟ್’ ಮತ್ತು ‘ಶಶಾಂಕ್’ ಎಂಬ ಹೆಸರಿನ ಸಿನಿಮಾಗಳು ಸುಶಾಂತ್ ಸಿಂಗ್ ರಜಪೂತ್ ಜೀವನ ಆಧಾರಿತವಾಗಿದೆ.

ಉತ್ತರ ಪ್ರದೇಶದ: ಬಿಜೆಪಿ ವಲಯದಲ್ಲಿ ವದಂತಿಗಳ ಕಾರುಬಾರು, ತಳಮಳ

# ಯೋಗಿ ನಾಯಕತ್ವಕ್ಕೆ ಕುತ್ತು?

• ಸಿದ್ದಯ್ಯ ಹಿರೇಮಠ

ನವದೆಹಲಿ: ನಾಯಕತ್ವ ಬದಲಾವಣೆಗೆ ಸಂಬಂಧಿಸಿದ ಚರ್ಚೆ ಕರ್ನಾಟಕದಲ್ಲಿ ಮಾತ್ರವಲ್ಲದೆ, ಉತ್ತರ ಪ್ರದೇಶದಲ್ಲೂ ಮುಂಚೂಣಿಗೆ ಬಂದಿದೆ. ಕಳೆದ ವಾರ ಲಕ್ನೋದಲ್ಲಿ ಮುಖಂಡರಾದ ರಾಧಾಮೋಹನ್ ಸಿಂಗ್ ಹಾಗೂ ಬಿ.ಎಲ್. ಸಂತೋಷ್ ನೇತೃತ್ವದಲ್ಲಿ ನಡೆದ ಸಭೆಗಳಲ್ಲಿ ಸಚಿವರ ಮತ್ತು ಶಾಸಕರ ಅಭಿಪ್ರಾಯ ಸಂಗ್ರಹಿಸಲಾಗಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸಂಪುಟದ ಪುನರ್‌ರಚನೆ, ಮತ್ತೊಬ್ಬ ಉಪ ಮುಖ್ಯಮಂತ್ರಿ ನೇಮಕ ಕುರಿತೂ ವದಂತಿ ಹಬ್ಬಿದೆ. ಕೇಶವಪ್ರಸಾದ್ ಮೌರ್ಯ ಅವರನ್ನು ಯೋಗಿ ಸ್ಥಾನದಲ್ಲಿ ಕೂರಿಸಿ, ಮೋದಿ ಪರಮಾಪ್ತರೊಬ್ಬರನ್ನು ಉಪ ಮುಖ್ಯಮಂತ್ರಿ ಸ್ಥಾನಕ್ಕೆ ತರಲಾಗುತ್ತಿದೆ ಎಂಬ ಮಾತುಗಳೂ ಆರು ತಿಂಗಳಿಂದ ಕೇಳಿಬರುತ್ತಿವೆ.

ಆದರೆ, ಪಕ್ಷದ ಪ್ರಮುಖರನ್ನು ಭೇಟಿ ಮಾಡಿ ಚರ್ಚಿಸಲೆಂದೇ ಯೋಗಿ ಗುರುವಾರ ದೆಹಲಿಗೆ ದೌಡಾಯಿಸಿದ್ದಾರೆ. ನಾಯಕತ್ವ ಮತ್ತು ಪಕ್ಷ ಸಂಘಟನೆಯಲ್ಲಿನ ಬದಲಾವಣೆಯ ಸಾಧ್ಯತೆಯನ್ನು ವರಿಷ್ಠರು ಯಥಾರೀತಿ ನಿರಾಕರಿಸಿಯಾಗಿದೆ.

ಪಕ್ಷದ ಹೈಕಮಾಂಡ್‌ಗೆ, ವಿಶೇಷವಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಯೋಗಿ ಅವರ ಸಾಮರ್ಥ್ಯದ ಬಗ್ಗೆ ಇದ್ದ ವಿಶ್ವಾಸ ಇತ್ತೀಚಿನ ದಿನಗಳಲ್ಲಿ ಕಾಣೆಯಾಗಿರುವುದೇ, ಚುನಾವಣೆಯ ಹೊಸ್ತಿಲಲ್ಲಿ ನಾಯಕತ್ವ ಬದಲಾಗುವ ಸಾಧ್ಯತೆಯ ವದಂತಿ ಬಿತ್ತರವಾಗಲು ಕಾರಣ.

ನಿವೃತ್ತ ಐಎಎಸ್ ಅಧಿಕಾರಿಯ ಬಗ್ಗೆ ಪ್ರಧಾನಿ ಮೋದಿ ಅವರಿಗೆ ಒಲವು ಇದೆ. ಆದರೆ ಯೋಗಿ ಅವರಿಗೆ ಮೋದಿ ಅವರ ಆಪ್ತನಿಗೆ ಹೆಚ್ಚಿನ ಸ್ಥಾನಮಾನ ನೀಡುವ ಯೋಜನೆ ರುಚಿಸಿಲ್ಲ ಎಂದು ಹೇಳಲಾಗುತ್ತಿದೆ.

**ಮೋದಿ ಆಪ್ತನ ಸೇರ್ಪಡೆ:** ಐಎಎಸ್‌ನ ಗುಜರಾತ್ ಕೇಡರ್ ಅಧಿಕಾರಿಯಾಗಿದ್ದ ಅರವಿಂದ ಕುಮಾರ್ ಶರ್ಮಾ, ಜನವರಿಯಲ್ಲಿ ಸ್ವಯಂನಿವೃತ್ತಿ ಘೋಷಿಸಿ ಬಿಜೆಪಿ ಸೇರಿ ಉತ್ತರ ಪ್ರದೇಶದ ವಿಧಾನಪರಿಷತ್‌ಗೂ ಆಯ್ಕೆಯಾಗಿದ್ದಾರೆ. ಪರಿಷತ್‌ಗೆ ಆಯ್ಕೆಯಾದ ಬೆನ್ನಲ್ಲೇ ಲಕ್ನೋದಲ್ಲಿನ ಹಿರಿಯ ಸಚಿವರಿಗೆ ಮೀಸಲಿರುವ ಪ್ರದೇಶದಲ್ಲೇ ಸರ್ಕಾರಿ ಬಂಗಲೆ ಪಡೆದಿದ್ದಾರೆ. ಶರ್ಮಾ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬಹುದು ಅಥವಾ ಉಪ ಮುಖ್ಯಮಂತ್ರಿ ಸ್ಥಾನವನ್ನೇ ನೀಡಬಹುದು ಎಂಬ ಸುದ್ದಿ ದಟ್ಟವಾಗಿದೆ.

ಮೋದಿ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ಅಷ್ಟೂ ಅವಧಿಗೆ ಅವರ ಜೊತೆಗೇ ಇದ್ದುದಲ್ಲದೆ, 2014ರಿಂದ ಈಚಿನವರೆಗೂ ಪ್ರಧಾನಿ ಕಚೇರಿಯಲ್ಲೇ ಕಾರ್ಯನಿರ್ವಹಿಸಿರುವ ಶರ್ಮಾ ಉತ್ತರ ಪ್ರದೇಶದ ಪೂರ್ವಭಾಗದವರು ಎಂಬುದೂ ವದಂತಿಗಳಿಗೆ ರೆಕ್ಕೆ–ಪುಕ್ಕ ಮೂಡಿಸಿದೆ.

**ಅಧಿಕಾರಿಗಳದ್ದೇ ದರ್ಬಾರು:** ಯೋಗಿ ಆಡಳಿತದಲ್ಲಿ ಬಿಜೆಪಿಯಿಂದಲೇ ಆಯ್ಕೆಯಾಗಿರುವ ಜನಪ್ರತಿನಿಧಿಗಳ ಆಟ ನಡೆಯುತ್ತಿಲ್ಲ. ಬದಲಿಗೆ, ಆಡಳಿತಶಾಹಿಯ ಮಾತಿಗೇ ಮನ್ನಣೆ ನೀಡಲಾಗುತ್ತಿದೆ ಎಂಬುದೂ ನಾಯಕತ್ವ ಬದಲಾವಣೆಯ ಕೂಗು ಕೇಳಿ ಬರುವುದಕ್ಕೆ ಪ್ರಮುಖ ಅಂಶವಾಗಿದೆ.

**ಆರ್‌ಎಸ್‌ಎಸ್ ಬೆಂಬಲ:** ಭ್ರಷ್ಟಾಚಾರ, ಸ್ವಜನ ಪಕ್ಷಪಾತಕ್ಕೆ ಯೋಗಿ ಆಸ್ಪದ ನೀಡಿದವರಲ್ಲ. ಇದನ್ನು ಅರಿತಿರುವ ಆರ್‌ಎಸ್‌ಎಸ್ ಅವರ ಬೆಂಬಲಕ್ಕೆ ನಿಂತಿದೆ. ನಾಯಕನ ಕಾರ್ಯವೈಖರಿ ಬಗ್ಗೆ ಕೆಲವರಲ್ಲಿ ಅಸಮಾಧಾನ ಇರುವುದು ಸಹಜ. ಹಾಗಂತ ಬದಲಾವಣೆ ಸೂಕ್ತವೂ ಅಲ್ಲ ಎಂಬುದು ಆರ್‌ಎಸ್‌ಎಸ್ ಮುಖಂಡರ ಅಭಿಪ್ರಾಯ.

**ಮೋದಿ ಉತ್ತರಾಧಿಕಾರಿ:** ಬಿಜೆಪಿಯಲ್ಲಿ ಮೋದಿ ಅವರ ಉತ್ತರಾಧಿಕಾರಿ ಯಾರು? ಎಂಬ ಪ್ರಶ್ನೆ ಉದ್ಭವಿಸಿದಾಗಲೆಲ್ಲ, ‘ಯೋಗಿ’ ಎಂಬ ಉತ್ತರ ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಲೇ ಇದೆ. ಖಟ್ಟರ್ ಹಿಂದುತ್ವವಾದಿಯಾಗಿರುವ ಯೋಗಿ, ಗೋರಖ್‌ಪುರದಿಂದ ನಾಲ್ಕು ಬಾರಿ ಸಂಸದರಾಗಿದ್ದೂ ಹಿಂದುತ್ವದ ಬಲದಿಂದಲೇ.

**ಚುನಾವಣಾ ಸಿದ್ಧತೆಯೇ?:** 20 ಕೋಟಿಗೂ ಅಧಿಕ ಜನಸಂಖ್ಯೆಯ, 403 ವಿಧಾನಸಭೆ ಕ್ಷೇತ್ರಗಳಿರುವ ಉತ್ತರ ಪ್ರದೇಶವು 2017ರ ಆರಂಭದಲ್ಲಿ ಎದುರಿಸಿದ್ದ ಚುನಾವಣೆಯಲ್ಲಿ ಬಿಜೆಪಿ 300ಕ್ಕೂ ಅಧಿಕ ಸ್ಥಾನಗಳನ್ನು ಜಯಿಸಿ ಬೀಗಿತ್ತು.

ಯೋಗಿ ಆದಿತ್ಯನಾಥ್ ಮುಂದಿನ ಚುನಾವಣೆಯ ಸಾರಥ್ಯ ವಹಿಸುವರೇ, ಇಲ್ಲವೇ ಎಂಬ ಪ್ರಶ್ನೆ ಈಗ ಎದುರಾಗಿದೆ.

ಗ್ರಾಮ ಪಂಚಾಯ್ತಿಗಳಿಗೆ ಇತ್ತೀಚೆಗಷ್ಟೇ ನಡೆದ ಚುನಾವಣೆಯಲ್ಲಿನ ಸೋಲು, ಗಂಗಾ ನದಿಗುಂಟ ತೇಲಿದ ಶವಗಳು, ಕೋವಿಡ್‌ನ ಕಳಪೆ ನಿರ್ವಹಣೆಯ ಆರೋಪಗಳ ಹೊರತಾಗಿಯೂ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಮತ್ತೆ ಅಧಿಕಾರ ಹಿಡಿಯುವ ಕನಸನ್ನು ಬಿಜೆಪಿ ಕಾಣುತ್ತಿದೆ.

ಪ್ರತಿಕ್ರಿಯೆ ನೀಡಿರುವ ಯೋಗಿ, ‘ನಮ್ಮ ಗಮನ ಕೋವಿಡ್–19ರ ಮೂರನೇ ಅಲೆಯನ್ನು ನಿಯಂತ್ರಿಸುವುದಾಗಿದೆ. ನಾಯಕತ್ವ ಬದಲಾವಣೆ ಎಂಬುದು ಕೇವಲ ವದಂತಿಯಷ್ಟೇ ಎಂದು ಹೇಳಿಕೊಂಡಿದ್ದಾರೆ.

# ಮೋದಿ ಬಿಜೆಪಿಯ ಉನ್ನತ ನಾಯಕ: ರಾವುತ್

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಮರು ದಿನವೇ ಶಿವಸೇನೆ ಮುಖಂಡ ಸಂಜಯ್ ರಾವುತ್ ಗುರುವಾರ ‘ಮೋದಿ ದೇಶದ ಮತ್ತು ಬಿಜೆಪಿಯ ಉನ್ನತ ನಾಯಕ’ ಎಂದು ಹೇಳಿರುವುದು ಕುತೂಹಲ ಮೂಡಿಸಿದೆ.

ಮೋದಿ ಜನಪ್ರಿಯತೆಯು ಕುಸಿಯುತ್ತಿದೆ ಎಂದು ಭಾವಿಸಿ ಆರ್‌ಎಸ್‌ಎಸ್ ರಾಜ್ಯ ಚುನಾವಣೆಗಳಲ್ಲಿ ರಾಜ್ಯದ ನಾಯಕರನ್ನು ಮುಂದಿಟ್ಟುಕೊಂಡು ಹೋಗುತ್ತಿದೆ ಎನ್ನುವ ಮಾಧ್ಯಮ ವರದಿಗಳ ಬಗ್ಗೆ ಕೇಳಲಾದ ಪ್ರಶ್ನೆಗೆ ರಾವುತ್ ಈ ಪ್ರತಿಕ್ರಿಯೆ ನೀಡಿದರು.

ಉತ್ತರ ಮಹಾರಾಷ್ಟ್ರದ ಪ್ರವಾಸದಲ್ಲಿರುವ ರಾವುತ್ ಜಲ್ಗಾಂವ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಮಾಧ್ಯಮ ವರದಿಗಳನ್ನೂ ನಂಬುವುದಿಲ್ಲ. ನಾನು ಈ ಬಗ್ಗೆ ಪ್ರತಿಕ್ರಿಯಿಸಲು ಬಯಸುವುದಿಲ್ಲ. ಯಾವುದೇ ಅಧಿಕೃತ ಹೇಳಿಕೆಯನ್ನೂ ನೀಡಲಾರೆ. ಬಿಜೆಪಿಯು ಕಳೆದ ಏಳು ವರ್ಷಗಳಲ್ಲಿನ ತನ್ನ ಯಶಸ್ಸನ್ನು ನರೇಂದ್ರ ಮೋದಿಯವರಿಗೆ ಅರ್ಪಿಸಬೇಕು. ಪ್ರಸ್ತುತ ಮೋದಿ ಅವರು ದೇಶದಲ್ಲಿ ಮತ್ತು ಬಿಜೆಪಿಯಲ್ಲಿ ಉನ್ನತ ನಾಯಕರಾಗಿದ್ದಾರೆ’ ಎಂದು ಅವರು ಹೇಳಿದ್ದಾರೆ.

‘ಶಿವಸೇನಾ ನಿಲುವು ಯಾವಾಗಲೂ ಒಂದೇ, ಪ್ರಧಾನಿ ಇಡೀ ದೇಶಕ್ಕೆ ಸೇರಿದವರೇ ಹೊರತು ನಿರ್ದಿಷ್ಟ ಪಕ್ಷಕ್ಕೆ ಸೇರಿದವರಲ್ಲ. ಆಡಳಿತ ಯಂತ್ರದ ಮೇಲೆ ಒತ್ತಡ ಉಂಟಾಗುವುದರಿಂದ ಪ್ರಧಾನಿ ಚುನಾವಣಾ ಪ್ರಚಾರದಲ್ಲಿ ತೊಡಗಬಾರದು’ ಎಂದು ಹೇಳಿದರು.

ಮೋದಿ ಬಯಸಿದಲ್ಲಿ ತಮ್ಮ ಪಕ್ಷವು ಹುಲಿಯೊಂದಿಗೆ (ಶಿವಸೇನೆಯ ಚಿಹ್ನೆ) ಸ್ನೇಹ ಮಾಡಲಿದೆ ಎಂದು ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ರಾವುತ್, ‘ಹುಲಿಯೊಂದಿಗೆ ಯಾರೂ ಸ್ನೇಹ ಬೆಳೆಸಲು ಸಾಧ್ಯವಿಲ್ಲ. ತನ್ನೊಂದಿಗೆ ಯಾರು ಸ್ನೇಹ ಬೆಳೆಸಬೇಕೆನ್ನುವುದನ್ನು ಹುಲಿ ನಿರ್ಧರಿಸುತ್ತದೆ’ ಎಂದರು.

ಉತ್ತರ ಮಹಾರಾಷ್ಟ್ರದ ಪ್ರವಾಸದ ಬಗ್ಗೆ ಕೇಳಿದಾಗ, ‘ಇದು ಸಂಘಟನೆ ಬಲಪಡಿಸುವ ಪಕ್ಷದ ಪ್ರಯತ್ನಗಳ ಭಾಗವಾಗಿದೆ. ಮಹಾ ವಿಕಾಸ್ ಅಘಾಡಿ (ಎಂವಿಎ) ಮಿತ್ರಪಕ್ಷಗಳು ತಮ್ಮ ನೆಲೆ ವಿಸ್ತರಿಸಲು ಮತ್ತು ಪಕ್ಷಗಳನ್ನು ಬಲಪಡಿಸುವ ಹಕ್ಕನ್ನು ಹೊಂದಿವೆ. ಇದು ಈ ಸಮಯದ ಅವಶ್ಯಕತೆ ಕೂಡ ಹೌದು. ಪರಸ್ಪರ ಸಮನ್ವಯ ಬಲಪಡಿಸುವ ಕುರಿತು ನಾವು ಸಭೆಗಳನ್ನು ನಡೆಸುತ್ತಿದ್ದೇವೆ’ ಎಂದು ರಾವುತ್ ಹೇಳಿದರು.

### ‘ಎಂವಿಎ ಸರ್ಕಾರ ಪೂರ್ಣಾವಧಿ ಪೂರೈಸಲಿದೆ’

ಮುಂಬೈ: ‘ಮಹಾರಾಷ್ಟ್ರದಲ್ಲಿನ ಮಹಾ ವಿಕಾಸ ಅಘಾಡಿ (ಎಂವಿಎ) ಸರ್ಕಾರ ತನ್ನ ಸಂಪೂರ್ಣ ಅವಧಿಯನ್ನು ಪೂರೈಸಲಿದೆ. ಈ ಬಗ್ಗೆ ಅನುಮಾನ ಬೇಡ’ ಎಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಗುರುವಾರ ಹೇಳಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಇತ್ತೀಚೆಗೆ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಖುದ್ದಾಗಿ ಭೇಟಿಯಾಗಿದ್ದರು. ಜತೆಗೆ, ಕಳೆದ ವಾರ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಪವಾರ್ ಅವರನ್ನು ಭೇಟಿಯಾಗಿದ್ದರು. ಈ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪವಾರ್ ಅವರ ಈ ಹೇಳಿಕೆ ಮಹತ್ವ ಪಡೆದಿದೆ.

‘ರಾಜ್ಯ ಸರ್ಕಾರ ಉಳಿವಿನ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸಲಾಗುತಿದೆ. ಶಿವಸೇನಾ ವಿಶ್ವಾಸಾರ್ಹತೆ ಹೊಂದಿರುವ ಪಕ್ಷ. ಎನ್‌ಸಿಪಿ, ಶಿವಸೇನಾ ಮತ್ತು ಕಾಂಗ್ರೆಸ್ ಒಗ್ಗೂಡಿ ಕಾರ್ಯನಿರ್ವಹಿಸುತ್ತಿವೆ. ಉತ್ತಮ ಅನುಭವವಾಗಿದೆ’ ಎಂದು ಹೇಳಿದ್ದಾರೆ.

# ಬಿಜೆಪಿ ಸೇರಿದ ಜಿತಿನ್ ವಿರುದ್ಧ ಸಿಬಲ್ ವಾಗ್ದಾಳಿ



ಕಪಿಲ್ ಸಿಬಲ್

ನವದೆಹಲಿ: ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಜಿತಿನ್ ಪ್ರಸಾದ ಅವರು ‘ರಾಜಕೀಯ ಪ್ರಸಾದ’ ಅಥವಾ ವೈಯಕ್ತಿಕ ಲಾಭಗಳಿಗಾಗಿ ಪಕ್ಷಾಂತರ ಮಾಡಿರಬಹುದು ಎಂದು ಕಾಂಗ್ರೆಸ್ ಹಿರಿಯ ಮುಖಂಡ ಕಪಿಲ್ ಸಿಬಲ್ ವಾಗ್ದಾಳಿ ನಡೆಸಿದ್ದಾರೆ.

‘‘ಒಂದು ವೇಳೆ ಪಕ್ಷವು ನನ್ನನ್ನು ‘ಮೃತ ಮರ’ ಅಥವಾ ಯಾವುದೇ ಪ್ರಯೋಜನವಿಲ್ಲ ಎಂದು ಕಡೆಗಣಿಸಿದರೆ ಪಕ್ಷ ತ್ಯಜಿಸುವ ಬಗ್ಗೆ ಚಿಂತಿಸಬಹುದು. ಆದರೆ ಯಾವುದೇ ಕಾರಣಕ್ಕೂ ಬಿಜೆಪಿಗೆ ಸೇರುವುದಿಲ್ಲ. ಅಂಥ ಬೆಳವಣಿಗೆಯು ನನ್ನ ಕೊನೆಯುಸಿರು ಇರುವ ತನಕ ಸಂಭವಿಸುವುದಿಲ್ಲ’’ ಎಂದು ಸಿಬಲ್ ಪ್ರತಿಪಾದಿಸಿದರು.

ಪಕ್ಷ ಬಿಡುವುದು ಜಿತಿನ್ ಅವರ ವೈಯಕ್ತಿಕ ಆಯ್ಕೆ ಆಗಿರಬಹುದು, ಆದರೆ ಅವರು ಬಿಜೆಪಿ ಸೇರಲು ಏಕೆ ನಿರ್ಧರಿಸಿದರು ಎಂಬುದು ಆಶ್ಚರ್ಯ ತರಿಸಿದೆ ಎಂದು ಅವರು ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

‘ಪ್ರಸಾದ (ವೈಯಕ್ತಿಕ ಲಾಭ) ರಾಜಕೀಯವನ್ನು ಹೊರತುಪಡಿಸಿ ಅದಕ್ಕೆ ತರ್ಕಬದ್ಧ ಆಧಾರವೇನು ಎಂದು ಪ್ರಶ್ನಿಸಿದ ಸಿಬಲ್, ದೇಶದಾದ್ಯಂತ ಈ ರೀತಿ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ’ ಎಂದು ಬೇಸರ ವ್ಯಕ್ತಪಡಿಸಿದರು.

**ಜಿತಿನ್ ಪ್ರತಿಕ್ರಿಯೆ:** ಇದಕ್ಕೆ ಪ್ರತಿಕ್ರಿಯಿಸಿರುವ ಜಿತಿನ್ ಪ್ರಸಾದ ಅವರು, ‘ನಾನು ಕಾಂಗ್ರೆಸ್ ತೊರೆಯಲು ಯಾವುದೇ ವ್ಯಕ್ತಿ ಅಥವಾ ಹುದ್ದೆಯ ನಿರೀಕ್ಷೆಯಿಂದಲ್ಲ. ಕಾಂಗ್ರೆಸ್ ಪಕ್ಷ ಮತ್ತು ಜನರ ನಡುವಿನ ಸಂಪರ್ಕ ಕಡಿತವಾಗುತ್ತಿದ್ದು, ಉತ್ತರ ಪ್ರದೇಶದಲ್ಲಿ ಪಕ್ಷ ಪಡೆಯುತ್ತಿರುವ ಮತದ ಪಾಲು ಕುಗ್ಗುತ್ತಿದೆ. ಅಲ್ಲದೆ ಪಕ್ಷವನ್ನು ಪುನರುಜ್ಜೀವನಗೊಳಿಸುವ ಯಾವುದೇ ಯೋಜನೆಗಳೂ ಇಲ್ಲವಾಗಿವೆ. ಹಾಗಾಗಿ ನಾನು ಕಾಂಗ್ರೆಸ್ ತ್ಯಜಿಸಿದೆ’ ಬಿಜೆಪಿ ಸೇರಿದ ಜಿತಿನ್ ಪ್ರಸಾದ ಪ್ರತಿಕ್ರಿಯಿಸಿದ್ದಾರೆ.

**ಸೈದ್ಧಾಂತಿಕ ಬದ್ಧತೆ ಪರಿಶೀಲನೆ ಅಗತ್ಯ:** ‘ಪಕ್ಷದಲ್ಲಿ ಮುಖಂಡರಿಗೆ ಪ್ರಮುಖ ಹುದ್ದೆ, ಜವಾಬ್ದಾರಿಯನ್ನು ನೀಡುವ ವೇಳೆ ಪಕ್ಷದ ತತ್ವ–ಸಿದ್ಧಾಂತದ ಬಗ್ಗೆ ಅವರಲ್ಲಿನ ಬದ್ಧತೆಯನ್ನು ಪರಿಶೀಲಿಸಬೇಕು’ ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ಎಂ.ವೀರಪ್ಪ ಮೊಯಿಲಿ ಗುರುವಾರ ಹೇಳಿದ್ದಾರೆ.

ಜಿತಿನ್ ಪ್ರಸಾದ್ ಅವರು ಪಕ್ಷವನ್ನು ತೊರೆದು ಬಿಜೆಪಿಗೆ ಸೇರ್ಪಡೆಗೊಂಡ ಮರುದಿನವೇ ಮೊಯಿಲಿ ಅವರಿಂದ ಈ ಅಭಿಪ್ರಾಯ ಹೊರಬಿದ್ದಿದೆ.

‘ಕಾಂಗ್ರೆಸ್ ಪಕ್ಷಕ್ಕೆ ‘ದೊಡ್ಡ ಶಸ್ತ್ರಚಿಕಿತ್ಸೆ’ಯ ಅಗತ್ಯವಿದೆ’ ಎಂದು ಅವರು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಬಯಲು ತರಗತಿ ನವದೆಹಲಿಯ ಯಮುನಾ ಖದರ್ ಮಯೂರ್ ವಿಹಾರ ಪ್ರದೇಶದಲ್ಲಿ ಪಂಚಶೀಲ ಶಿಕ್ಷಣ ಸಂಸ್ಥಾನವು ಆಯೋಜಿಸಿದ್ದ ಟ್ಯೂಷನ್ ತರಗತಿಗಳಿಗೆ ಕೊಳೆಗೇರಿ ಮಕ್ಕಳು ಹಾಜರಾಗಿದ್ದರು. ಪಿಟಿಐ– ಚಿತ್ರ

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಆದೇಶ

# ರಶೀದಿ ಮೇಲೆ ಪರವಾನಗಿ ಸಂಖ್ಯೆ ಕಡ್ಡಾಯ

ನವದೆಹಲಿ (ಪಿಟಿಐ): ಆಹಾರ ಉದ್ಯಮದಲ್ಲಿರುವವರು ನಗದು ರಶೀದಿ ಅಥವಾ ಖರೀದಿ ಪಟ್ಟಿಯಲ್ಲಿ ಎಫ್‌ಎಸ್‌ಎಸ್‌ಎಐ ಪರವಾನಗಿ ಅಥವಾ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಆದೇಶ ಹೊರಡಿಸಿದೆ. ಈ ನಿಯಮ ಇದೇ ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ.

ನಿರ್ದಿಷ್ಟ ಮಾಹಿತಿಗಳ ಕೊರತೆಯಿಂದ ಆಹಾರ ಕಲಬೆರಕೆಗೆ ಸಂಬಂಧಿಸಿದಹಲವಾರುದೂರುಗಳನ್ನುಬಗೆಹರಿಸಲಾಗುವುದಿಲ್ಲ. ಹೊಸ ನಿಯಮದಿಂದಾಗಿ ಗ್ರಾಹಕರು ನಿರ್ದಿಷ್ಟ ಆಹಾರ ಉದ್ಯಮದ ಮೇಲೆ ಅದರ ಎಫ್‌ಎಸ್‌ಎಸ್‌ಎಐ ಸಂಖ್ಯೆ ಬಳಸಿ ಆನ್‌ಲೈನ್‌ನಲ್ಲಿ ದೂರು ದಾಖಲಿಸಬಹುದು ಎಂದು ಎಫ್‌ಎಸ್‌ಎಸ್‌ಎ ತಿಳಿಸಿದೆ.

ಹೊಸ ನಿಯಮದ ಕುರಿತು ಉದ್ಯಮಗಳಿಗೆ ಮಾಹಿತಿ ನೀಡಿ ಎಂದು ಪರವಾನಗಿ ಮತ್ತು ನೋಂದಣಿ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿದೆ. ಎಲ್ಲಾ ಆಹಾರ ಉದ್ಯಮಗಳು ಅ.2ರಿಂದ ಹೊಸ ನಿಯಮವನ್ನು ಪಾಲಿಸುವಂತೆ ನೋಡಿಕೊಳ್ಳಲು ಎಫ್‌ಎಸ್‌ಎಸ್‌ಎಐ ಆದೇಶದಲ್ಲಿ ಸೂಚಿಸಲಾಗಿದೆ.

14 ಅಂಕಿಗಳ ಎಫ್‌ಎಸ್‌ಎಸ್‌ಎಐ ಸಂಖ್ಯೆಯು ಗ್ರಾಹಕರಿಗೆ ನೀಡುವ ರಶೀದಿಗಳಲ್ಲಿ ಸ್ಪಷ್ಟವಾಗಿ ನಮೂದು ಆಗಿರುವುದಿಲ್ಲ. ಗ್ರಾಹಕರಿಗೆ ಎಫ್‌ಎಸ್‌ಎಸ್‌ಎಐ ಸಂಖ್ಯೆ ದೊರಕದೇ ಹೋದಲ್ಲಿ, ಅವರಿಂದ ಸ್ಪಷ್ಟವಾದ ದೂರನ್ನು ನಿರೀಕ್ಷಿಸುವುದು ಸರಿಯಲ್ಲ. ಎಷ್ಟೋ ಬಾರಿ ನಿಯಂತ್ರಕರಿಗೇ ದೂರಿನ ಮೂಲ ಕಂಡುಹಿಡಿದು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ನಿರ್ದಿಷ್ಟ ಸಂಕೇತವಿಲ್ಲದೇ ದತ್ತಾಂಶ ಕೋಶ ರಚಿಸಲು ಸಾಧ್ಯವಿಲ್ಲ. ಆಹಾರ ಸುರಕ್ಷತೆ ವಿಚಾರದಲ್ಲಿ ಎಫ್‌ಎಸ್‌ಎಸ್‌ಎಐ ಸಂಖ್ಯೆ ಒಂದು ವಿಶಿಷ್ಟ ಸಂಕೇತವಾಗಿದೆ ಎಂದು ಪ್ರಾಧಿಕಾರ ಹೇಳಿದೆ.

ಸದ್ಯ ಆಹಾರ ಪೊಟ್ಟಣಗಳ ಮೇಲೆ ಎಫ್‌ಎಸ್‌ಎಸ್‌ಎಐ ಸಂಖ್ಯೆಯನ್ನು ಕಡ್ಡಾಯ ಮಾಡಲಾಗಿದೆ. ಆದರೆ ರೆಸ್ಟೋರೆಂಟ್‌ಗಳು, ಸಿಹಿತಿನಿಸು ಅಂಗಡಿಗಳು, ಚಿಲ್ಲರೆ ಅಂಗಡಿಗಳು ಮತ್ತು ಕೇಟರಿಂಗ್‌ನವರನ್ನು ಈ ನಿಯಮದ ಅಡಿ ತರುವುದು ಸವಾಲಾಗಿದೆ. ‘ಆಹಾರ ಸುರಕ್ಷತೆಯ ಪ್ರದರ್ಶನ ಫಲಕ’ಗಳನ್ನು ರೆಸ್ಟೋರೆಂಟ್‌ಗಳ ಪ್ರಮುಖ ಸ್ಥಳಗಳಲ್ಲಿ ಇರಿಸುವುದನ್ನು ಕಡ್ಡಾಯಗೊಳಿಸಲು ಪರವಾನಗಿ ಮತ್ತು ನೋಂದಣಿ ನಿಯಮಗಳಿಗೆ ತಿದ್ದುಪಡಿ ತರಲಾಗುವುದು ಎಂದು ಎಫ್‌ಎಸ್‌ಎಸ್‌ಎಐ ಹೇಳಿದೆ.

ಪೊಟ್ಟಣಗಳಲ್ಲಿ ಮಾರುವ ಆಹಾರಕ್ಕೆ ಅದರ ಉತ್ಪಾದಕರೇ ಎಫ್‌ಎಸ್‌ಎಸ್‌ಎಐ ಸಂಖ್ಯೆಯನ್ನು ಅಚ್ಚು ಮಾಡಿರುತ್ತಾರೆ. ಅಂಥ ಆಹಾರ ಉತ್ಪನ್ನಗಳು ಉತ್ಪಾದಕರಿಂದ ಗ್ರಾಹಕರಿಗೆ ತಲುಪಿದ ಜಾಡನ್ನು ಪತ್ತೆ ಮಾಡಬಹುದು. ಖರೀದಿ ಸಂಖ್ಯೆಯಿಂದಲೂ ಆಹಾರ ಉತ್ಪಾದಕರ ಜಾಡು ಪತ್ತೆ ಮಾಡುವುದು ಸುಲಭ ಎಂದು ಎಫ್‌ಎಸ್‌ಎಸ್‌ಎಐ ಹೇಳಿದೆ.

### ಕಪ್ಪುಶಿಲೀಂಧ್ರ ಚಿಕಿತ್ಸೆ: ಯುವ ರೋಗಿಗಳಿಗೆ ಆದ್ಯತೆಗೆ ಸೂಚನೆ

ನವದೆಹಲಿ: ಕಪ್ಪು ಶಿಲೀಂಧ್ರ ಸೋಂಕಿಗೆ ಚಿಕಿತ್ಸೆ ನೀಡುವಾಗ ಯುವ ರೋಗಿಗಳನ್ನು ಆದ್ಯತೆಯಾಗಿ ಪರಿಗಣಿಸುವಂತೆ ಎಲ್ಲ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಸೋಂಕಿಗೆ ಔಷಧವಾಗಿ ಆ್ಯಂಪೊಟೆರಿಸಿನ್–ಬಿ ಬಳಸಲಾಗುತ್ತಿದೆ

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್‌ನ (ಐಸಿಎಂಆರ್) ರಾಷ್ಟ್ರೀಯ ಕಾರ್ಯಪಡೆ ಜೊತೆ ಸಮಾಲೋಚನೆ ನಡೆಸಿದ ಬಳಿಕ ಕೇಂದ್ರ ಈ ಸೂಚನೆ ನೀಡಿದೆ. ಆ್ಯಂಪೊಟೆರಿಸಿನ್–ಬಿ ಔಷಧ ಬಳಸಿ ಚಿಕಿತ್ಸೆ ನೀಡಲು ಸರ್ಕಾರವು ಎರಡು ನಿರ್ದಿಷ್ಟ ವರ್ಗದ ರೋಗಿಗಳನ್ನು ಗುರುತಿಸಿದ್ದು, ಈ ಪೈಕಿ ಯುವ ಜನತೆಗೆ ಹೆಚ್ಚು ಗಮನ ನೀಡಲು ತಿಳಿಸಿದೆ.

ಸೋಂಕಿಗೆ ಚಿಕಿತ್ಸೆ ನೀಡಲು ಕಡಿಮೆ ಪ್ರಮಾಣದ ಔಷಧ ಲಭ್ಯವಿರುವುದನ್ನು ಪ್ರಸ್ತಾಪಿಸಿದ್ದ ದೆಹಲಿ ಹೈಕೋರ್ಟ್, ‘ಹಿರಿಯ ನಾಗರಿಕರು ಜೀವನ ನಡೆಸಿದ್ದಾರೆ. ಆದರೆ ದೇಶದ ಭವಿಷ್ಯವಾಗಿರುವ ಯುವಜನರನ್ನು ಈ ಸೋಂಕಿನಿಂದ ರಕ್ಷಿಸಬೇಕಾದ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟಿತ್ತು. ಕೋರ್ಟ್ ಈ ಪ್ರಸ್ತಾಪ ಮಾಡಿದ ಮರುದಿನ ಕೇಂದ್ರ ಈ ನಿರ್ಧಾರ ಪ್ರಕಟಿಸಿದೆ.

ದೇಶದಲ್ಲಿ ಕಪ್ಪು ಶಿಲೀಂಧ್ರ ಸೋಂಕು ಇರುವ 28 ಸಾವಿರ ಪ್ರಕರಣಗಳು ವರದಿಯಾಗಿದೆ. ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

### ಜೆಎನ್‌ಯು ಗ್ರಂಥಾಲಯಕ್ಕೆ ನುಗ್ಗಿ ದಾಂದಲೆ: ದೂರು ದಾಖಲು

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳ ಗುಂಪೊಂದು ಕೇಂದ್ರೀಯ ಗ್ರಂಥಾಲಯಕ್ಕೆ ನುಗ್ಗಿ, ಅಲ್ಲಿಯ ಸಿಬ್ಬಂದಿ ಜೊತೆ ಅನುಚಿತವಾಗಿ ವರ್ತಿಸಿದೆ ಎಂದು ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ (ಜೆಎನ್‌ಯು) ಆಡಳಿತ ಮಂಡಳಿಯು ಪೊಲೀಸರಿಗೆ ದೂರು ನೀಡಿದೆ. ಎರಡು ದಿನಗಳಿಂದ ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿಯೇ ಇದ್ದಾರೆ ಎಂದು ಗ್ರಂಥಾಲಯ ಸಿಬ್ಬಂದಿ ಆರೋಪಿಸಿದ್ದಾರೆ.

ಇದು ಮಂಗಳವಾರ ನಡೆದಿದೆ. ವಿಶ್ವವಿದ್ಯಾಲಯದ ಮುಖ್ಯ ಭದ್ರತಾ ಅಧಿಕಾರಿಯ ದೂರಿನ ಆಧಾರದ ಮೇಲೆ ಬುಧವಾರ ಎಫ್‌ಐಆರ್ ದಾಖಲಿಸಲಾಗಿದೆ. ಭಾರತೀಯ ದಂಡ ಸಂಹಿತೆ, ದೆಹಲಿ ವಿಪತ್ತು ನಿರ್ವಹಣೆ ಕಾಯ್ದೆ ಮತ್ತು ಸಾರ್ವಜನಿಕ ಆಸ್ತಿ ಹಾನಿ ತಡೆ ಕಾಯ್ದೆ ಅಡಿ ಮೊಕದ್ದಮೆ ದಾಖಲಿಸಲಾಗಿದೆ ಎಂದು ನೈರುತ್ಯ ದೆಹಲಿ ಡಿಸಿಪಿ ಇಂಗಿತ್ ಪ್ರತಾಪ್ ಸಿಂಗ್ ತಿಳಿಸಿದ್ದಾರೆ. ಪ್ರಕರಣದಲ್ಲಿ ಈವರೆಗೆ ಯಾರನ್ನೂ ಬಂಧಿಸಿಲ್ಲ ಎಂದಿದ್ದಾರೆ.

ವಿದ್ಯಾರ್ಥಿಗಳ ಗುಂಪು ಬಿ.ಆರ್. ಅಂಬೇಡ್ಕರ್ ಗ್ರಂಥಾಲಯಕ್ಕೆ ನುಗ್ಗಿ ಭದ್ರತಾ ಸಿಬ್ಬಂದಿ ಜೊತೆ ಘರ್ಷಣೆ ನಡೆಸಿದೆ. ಬಳಿಕ ಗಾಜಿನ ಬಾಗಿಲನ್ನು ಒಡೆದು, ಗ್ರಂಥಾಲಯದ ಮುಖ್ಯ ಅಧ್ಯಯನ ಕೋಣೆಗೆ ತೆರಳಿದೆ. ಅಂದಿನಿಂದ ಆ ಗುಂಪು ಆ ಕೋಣೆಯಲ್ಲಿಯೇ ಇದೆ. ಗ್ರಂಥಾಲಯಕ್ಕೆ ನುಗ್ಗಿದ ವಿದ್ಯಾರ್ಥಿಗಳು ಕೋವಿಡ್–19 ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿಲ್ಲ. ಮಾಸ್ಕ್ ಧರಿಸಿಲ್ಲ. ಗ್ರಂಥಾಲಯವನ್ನು ಸ್ಯಾನಿಟೈಸ್ ಮಾಡಲು ಅವಕಾಶ ಕೊಡುತ್ತಿಲ್ಲ. ಈ ವಿದ್ಯಾರ್ಥಿಗಳು ಊಟಕ್ಕೆ ಹಾಸ್ಟೆಲ್‌ಗೆ ಹೋಗಿ ಬರುತ್ತಿದ್ದಾರೆ. ಹಾಗಾಗಿ, ಗ್ರಂಥಾಲಯದ ಸಿಬ್ಬಂದಿ ಮತ್ತು ಹಾಸ್ಟೆಲ್‌ನಲ್ಲಿ ನೆಲೆಸಿರುವ ವಿದ್ಯಾರ್ಥಿಗಳಿಗೆ ಅನಾರೋಗ್ಯದ ಅಪಾಯ ಎದುರಾಗಿದೆ ಎಂದು ಜೆಎನ್‌ಯು ಪ್ರಕಟಣೆ ತಿಳಿಸಿದೆ.

‘ಗ್ರಂಥಾಲಯ ಬಹಳ ದಿನಗಳಿಂದ ತೆರೆದಿಲ್ಲ. ಇದರಿಂದ ಪಿಎಚ್‌ಡಿ ವಿದ್ಯಾರ್ಥಿಗಳು ರೋಸಿಹೋಗಿದ್ದಾರೆ. ಅವರ ಪ್ರಬಂಧ ಸಲ್ಲಿಕೆ ಬಾಕಿ ಇದೆ, ಆದರೆ ಗ್ರಂಥಾಲಯಕ್ಕೆ ಪ್ರವೇಶವಿಲ್ಲ. ಈ ಕಾರಣದಿಂದ ವಿದ್ಯಾರ್ಥಿಗಳು ಗ್ರಂಥಾಲಯ ಪ್ರವೇಶಿಸಿದ್ದಾರೆ. ಯಾವುದೇ ಹಿಂಸಾಚಾರ ನಡೆಸಿಲ್ಲ’ ಎಂದು ವಿದ್ಯಾರ್ಥಿಯೊಬ್ಬರು ಹೇಳಿದ್ದಾರೆ.

### ಮ್ಯಾನ್ಮಾರ್: ಸೂ ಕಿ ವಿರುದ್ಧ ಭ್ರಷ್ಟಾಚಾರ ಆರೋಪ

ಯಾಂಗೂನ್ (ಎಎಫ್‌ಪಿ): ಪದಚ್ಯುತ ನಾಯಕಿ ಆಂಗ್ ಸಾನ್ ಸೂ ಕಿ ಅವರ ವಿರುದ್ಧ ಮ್ಯಾನ್ಮಾರ್‌ನ ಮಿಲಿಟರಿ ಆಡಳಿತ ಭ್ರಷ್ಟಾಚಾರದ ಆರೋಪಗಳನ್ನು ಹೊರಿಸಿದೆ.

‘ಸೂ ಕಿ ಅವರು ಅಕ್ರಮವಾಗಿ 11 ಕೆ.ಜಿ ಚಿನ್ನ ಹಾಗೂ ₹ 4.37 ಕೋಟಿ (6 ಲಕ್ಷ ಅಮೆರಿಕನ್ ಡಾಲರ್) ನಗದು ಸ್ವೀಕರಿಸಿದ್ದಾರೆ’ ಎಂಬ ಆರೋಪಗಳನ್ನು ಹೊರಿಸಲಾಗಿದೆ ಎಂದು ‘ಗ್ಲೋಬಲ್ ನ್ಯೂ ಲೈಟ್ ಆಫ್ ಮ್ಯಾನ್ಮಾರ್’ ಸರ್ಕಾರಿ ಒಡೆತನದ ಪತ್ರಿಕೆ ವರದಿ ಮಾಡಿದೆ.

‘ಸೂ ಕಿ ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಭ್ರಷ್ಟಾಚಾರ ಎಸಗಿದ್ದು, ಭ್ರಷ್ಟಾಚಾರ ವಿರೋಧಿ ಆಯೋಗವು ಸಾಕ್ಷ್ಯಗಳನ್ನು ಸಂಗ್ರಹಿಸಿದೆ’ ಎಂದೂ ಪತ್ರಿಕೆ ವರದಿ ಮಾಡಿದೆ.


ಪ್ರಜಾವಾಣಿ ನಾನು ಲಸಿಕೆ ಹಾಕಿಸಿಕೊಂಡೆ ನೀವು?

ಹೊರೆಯನ್ನು ಈಗಲೇ ಕಳಗಿಳಿಸಿ!

ಪರ್ವತ ಏರುವುದೇ ಕಠಿಣವಾದದ್ದು. ಹಾಗೆ ಏರುವಾಗ ಇದನ್ನೂ ಒಯ್ಯುವುದೇಕೆ? ಕೋವಿಡ್–19 ಸಮಸ್ಯೆಯೇ ಬೆಟ್ಟದಷ್ಟಾಗಿದೆ. ಹಾಗಾಗಿ ಲಸಿಕೆ ಹಾಕಿಸಿಕೊಳ್ಳಲು ಹಿಂಜರಿಯುವುದೆಂದರೆ ಆತಂಕದ ಹೊರೆಯನ್ನು ಜತೆಗೆ ಹೊತ್ತೊಯ್ಯುವುದೇ ಆಗಿರುತ್ತದೆ. ಆದ್ದರಿಂದ ಆ ಹೊರೆಯನ್ನು ಕೆಳಗಿಳಿಸಿ. ದಯವಿಟ್ಟು ಲಸಿಕೆ ಹಾಕಿಸಿಕೊಳ್ಳಿ. ನಾನು ಮತ್ತು ನನ್ನ ಕುಟುಂಬದವರು ಲಸಿಕೆ ಪಡೆದಿದ್ದೇವೆ. ಈಗ ನಿಮ್ಮ ಸರದಿ.

ರಮೇಶ್ ಅರವಿಂದ್

ಲಸಿಕೆ ಪಡೆಯಿರಿ; ಪಿಡುಗು ತಡೆಯಿರಿ

#ವ್ಯಾಕ್ಸಿನ್‌ಗೆ ಜೈ ಕೊರೊನಾಗೆ ಬೈ

ಮುಂಬೈನ ಮಲ್ವಾನಿ ಪ್ರದೇಶದಲ್ಲಿ ಕಟ್ಟಡ ಕುಸಿತ ಸಂಭವಿಸಿದ್ದು, ರಕ್ಷಣಾ ಕಾರ್ಯದಲ್ಲಿ ನಿರತರಾಗಿರುವ ಸಿಬ್ಬಂದಿ–ರಾಯಿಟರ್ಸ್ ಚಿತ್ರ

### ಕಟ್ಟಡ ಕುಸಿತ 11 ಮಂದಿ ಸಾವು

ಮುಂಬೈ: ಮಹಾರಾಷ್ಟ್ರದ ಮಲ್ವಾನಿ ಪ್ರದೇಶದಲ್ಲಿ ಬುಧವಾರ ರಾತ್ರಿ ಸಂಭವಿಸಿದ ಕಟ್ಟಡ ಕುಸಿತದಲ್ಲಿ 8 ಮಕ್ಕಳು ಸೇರಿದಂತೆ ಒಟ್ಟು 11 ಮಂದಿ ಮೃತಪಟ್ಟಿದ್ದಾರೆ. 8 ಮಂದಿಗೆ ಗಾಯಗಳಾಗಿವೆ. ಈ ಘಟನೆಯಲ್ಲಿ ಒಂದೇ ಕುಟುಂಬದ 9 ಮಂದಿ ಸಾವಿಗೀಡಾಗಿದ್ದಾರೆ.

ಘಟನೆ ನಡೆದಾಗ ಮನೆಯ ಮಾಲೀಕ ರಫೀಕ್ ಶೇಖ್ ಸ್ಥಳದಲ್ಲಿರಲಿಲ್ಲ. ಆದರೆ ಇವರ ಪತ್ನಿ, ಸಹೋದರ ಮತ್ತು ಸಹೋದರನ ಪತ್ನಿ ಹಾಗೂ ಎರಡು ಕುಟುಂಬದ ಆರು ಮಕ್ಕಳು ಸೇರಿದಂತೆ ಒಟ್ಟು 9 ಮಂದಿ ಮೃತಪಟ್ಟಿದ್ದಾರೆ. ಅದೃಷ್ಟ ವಶಾತ್ ಶೇಖ್ ಅವರ 16 ವರ್ಷದ ಮಗ ಅಪಾಯದಿಂದ ಪಾರಾಗಿದ್ದಾರೆ. ಅವಶೇಷಗಳಡಿ ಸಿಲುಕಿದ್ದ ಬಾಲಕನನ್ನು ಅಗ್ನಿ ಶಾಮಕ ದಳದ ಸಿಬ್ಬಂದಿ ರಕ್ಷಿಸಿದ್ದಾರೆ.

ಅಬ್ದುಲ್ ಹಮೀದ್ ರಸ್ತೆಯ ನ್ಯೂ ಕಲೆಕ್ಟರ್ ಕಾಂಪೌಂಡ್‌ನಲ್ಲಿ ಬುಧವಾರ ರಾತ್ರಿ 11.15ರ ಸುಮಾರಿಗೆ ಮೂರು ಅಂತಸ್ತಿನ ಕಟ್ಟಡವು ಒಂದು ಅಂತಸ್ತಿನ ಕಟ್ಟಡದ ಮೇಲೆ ಕುಸಿದಿದೆ. ಆಗ ಇಡೀ ಕುಟುಂಬ ನಿದ್ರೆಯಲ್ಲಿತ್ತು.

ಮಲ್ವಾನಿ ಪ್ರದೇಶದಲ್ಲಿ ಬುಧವಾರ ಮತ್ತು ಗುರುವಾರ ಒಟ್ಟು 250 ಮಿ.ಮೀ ಮಳೆಯಾಗಿದೆ. ಘಟನಾ ಸ್ಥಳದ ಹತ್ತಿರದಲ್ಲೇ ಮೂರು ಅಂತಸ್ತಿನ ಕಟ್ಟಡ ಅಪಾಯದ ಸ್ಥಿತಿಯಲ್ಲಿದ್ದು, ನಿವಾಸಿಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

## ಸಂಕ್ಷಿಪ್ತ ಸುದ್ದಿ

### ‘ಇಂಟರ್‌ನೆಟ್ ಸೌಲಭ್ಯ ಇಲ್ಲದವರಿಗೂ ಲಸಿಕೆ ನೀಡಿ’

ನವದೆಹಲಿ (ಪಿಟಿಐ): ಇಂಟರ್‌ನೆಟ್ ಸೌಲಭ್ಯ ಇಲ್ಲದವರಿಗೂ ಲಸಿಕೆ ಪಡೆಯುವ ಹಕ್ಕಿದೆ. ಹೀಗಾಗಿ ‘ಕೋವಿನ್’ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸದೇ, ನೇರವಾಗಿ ಲಸಿಕೆ ಕೇಂದ್ರಕ್ಕೆ ಬರುವವರಿಗೂ ಕೋವಿಡ್ ಲಸಿಕೆ ನೀಡಬೇಕು ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಗುರುವಾರ ಆಗ್ರಹಿಸಿದ್ದಾರೆ.

‘ಆನ್‌ಲೈನ್ ಮೂಲಕ ನೋಂದಣಿ ಕಡ್ಡಾಯ ಎಂಬುದು ಸರಿಯಲ್ಲ. ಲಸಿಕೆ ಕೇಂದ್ರಕ್ಕೆ ಬರುವ ಪ್ರತಿ ಅರ್ಹ ವ್ಯಕ್ತಿಗೂ ಲಸಿಕೆ ನೀಡಬೇಕು. ಇಂಟರ್‌ನೆಟ್ ಸೌಲಭ್ಯ ಹೊಂದಿರದವರೂ ಬದುಕುವ ಹಕ್ಕು ಹೊಂದಿದ್ದಾರೆ’ ಎಂದು ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಕೋವಿಡ್ ಲಸಿಕೆ ಪಡೆಯಲು ‘ಕೋವಿನ್’ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸುವುದನ್ನು ಕಡ್ಡಾಯಗೊಳಿಸಬಾರದು ಎಂದು ಕಾಂಗ್ರೆಸ್ ಮೊದಲಿನಿಂದ ಆಗ್ರಹಿಸುತ್ತಲೇ ಇದೆ.

ಪಟ್ಟಣ–ನಗರ ಪ್ರದೇಶಗಳಿಂದ ದೂರ ವಾಸಿಸುತ್ತಿರುವವರು, ಗ್ರಾಮೀಣ ಪ್ರದೇಶದವರು ಹಾಗೂ ಬಡವರಲ್ಲಿ ಸ್ಮಾರ್ಟ್‌ಫೋನ್ ಇರುವುದಿಲ್ಲ. ಡಿಜಿಟಲ್ ಸಂಪರ್ಕದಿಂದ ವಂಚಿತರಾದವರಿಗೂ ಸಹ ಲಸಿಕೆ ನೀಡಬೇಕು ಎಂಬುದು ಪಕ್ಷದ ಪ್ರಮುಖ ಬೇಡಿಕೆಯಾಗಿದೆ.

### ಸಿಂಹಿಣಿಗಳಲ್ಲಿ ಕೋವಿಡ್ ಸೋಂಕು

ಬರೇಲಿ(ಉತ್ತರ ಪ್ರದೇಶ): ‘ತಮಿಳುನಾಡಿನ ಅರಿನಗರ ಅಣ್ಣ ಜೈವಿಕ ಉದ್ಯಾನದಲ್ಲಿ ಎರಡು ಸಿಂಹಿಣಿಗಳಿಗೆ ಕೋವಿಡ್ ಸೋಂಕು ತಗುಲಿರುವುದು ದೃಢಪಟ್ಟಿದೆ. ಇದೇ ವೇಳೆ ಸಿಂಹವೊಂದರಲ್ಲಿ ಡಿಸ್ಟೆಂಪರ್ ವೈರಸ್ ಕಾಣಿಸಿಕೊಂಡಿದೆ ಎಂದು ತಿಳಿದುಬಂದಿದೆ’ ಎಂದು ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆ (ಐವಿಆರ್‌ಐ) ಗುರುವಾರ ತಿಳಿಸಿದೆ.

‘ಈ ಜೈವಿಕ ಉದ್ಯಾನದಿಂದ ನಾಲ್ಕು ಹುಲಿಗಳ ಮಾದರಿ ಸೇರಿದಂತೆ ಒಟ್ಟು ಏಳು ಮಾದರಿಗಳನ್ನು ಸಂಗ್ರಹಿಸಲಾಗಿತ್ತು. ಇದರಲ್ಲಿ ಒಂದು ಸಿಂಹಿಣಿಯಲ್ಲಿ ಕೋವಿಡ್ ಮತ್ತು ಡಿಸ್ಟೆಂಬರ್ ವೈರಸ್ ಪತ್ತೆಯಾಗಿದೆ. ಇನ್ನೊಂದು ಸಿಂಹಣಿಯಲ್ಲಿ ಕೋವಿಡ್ ದೃಢಪಟ್ಟಿದೆ. ಮತ್ತೊಂದು ಸಿಂಹವು ಡಿಸ್ಟೆಂಬರ್ ವೈರಸ್‌ಗೆ ತುತ್ತಾಗಿದೆ.’ ಎಂದು ಐವಿಆರ್‌ವಿ ಜಂಟಿ ನಿರ್ದೇಶಕ ಕೆ.ಪಿ ಸಿಂಗ್ ಅವರು ಮಾಹಿತಿ ನೀಡಿದರು.

## ನಿಧನ ವಾರ್ತೆ

### ಬುದ್ಧದೇವ್ ದಾಸ್‌ಗುಪ್ತಾ



ಕೋಲ್ಕತ್ತ: ಹೆಸರಾಂತ ಚಲನಚಿತ್ರ ನಿರ್ದೇಶಕ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಬುದ್ಧದೇವ್ ದಾಸ್‌ಗುಪ್ತಾ ಅವರು (77) ವಯೋಸಹಜ ಕಾಯಿಲೆಯಿಂದಾಗಿ ಗುರುವಾರ ತಮ್ಮ ನಿವಾಸದಲ್ಲಿ ನಿಧನರಾದರು.

ಅವರು ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿದ್ದರು. ನಿದ್ರೆಯಲ್ಲಿದ್ದಂತೆಯೇ ಅವರಿಗೆ ಹೃದಯಾಘಾತವಾಗಿದೆ’ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಮೃತರ ಸೇವೆ ಸ್ಮರಿಸಿರುವ ಪಶ್ಚಿಮ-ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ‘ಬುದ್ಧದೇವ್ ದಾಸ್‌ಗುಪ್ತಾ ಅವರ ನಿಧನದಿಂದ ಸಿನಿಮಾ ಜಗತ್ತಿಗೆ ಬಹು ದೊಡ್ಡ ನಷ್ಟವಾಗಿದೆ’ ಎಂದು ಟ್ವೀಟ್ ಮಾಡಿದ್ದಾರೆ.

‘ಬುದ್ಧದೇವ್ ಅವರು ಅನಾರೋಗ್ಯದಲ್ಲಿ ಇದ್ದಾಗಲೇ ಟೋಪೆ, ಉರೊಜಾಹಜ್ ಚಿತ್ರಗಳನ್ನು ನಿರ್ದೇಶಿಸಿದ್ದರು. ಬರಹದಲ್ಲಿಯೂ ತೊಡಗಿಕೊಂಡಿದ್ದರು’ ಎಂದು ನಿರ್ಮಾಪಕ ಗೌತಮ್ ಘೋಷ್ ಸ್ಮರಿಸಿದ್ದಾರೆ.

1978ರಲ್ಲಿ ಮೊದಲ ಸಿನಿಮಾ ‘ದೂರತ್ವ’ ನಿರ್ಮಿಸಿದ್ದರು. ಅದಕ್ಕೂ ಹಿಂದೆ ಕಿರುಚಿತ್ರ ‘ಸಮಯೇರ್ ಕಚೆ’ ನಿರ್ಮಿಸಿದ್ದರು. ಅವರ ಕೆಲ ಜನಪ್ರಿಯ ಚಿತ್ರಗಳಲ್ಲಿ ‘ನೀಮ್ ಅನ್ನಪೂರ್ಣ, ಗೃಹಜುದ್ಧಾ, ಬಾಗ್ ಬಹಾದ್ದೂರ್, ತಹದೇರ್ ಕಥಾ, ಲಾಲ್ ದರ್ಜಾ’ ಸೇರಿವೆ.

# ಜೀವನದ ‘ಸೆಣಸಾಟ’ ಮುಗಿಸಿದ ಡಿಂಕೊ

ಏಷ್ಯನ್ ಗೇಮ್ಸ್‌ನ ಚಿನ್ನದ ಪದಕದೊಂದಿಗೆ ಡಿಂಕೊ ಸಿಂಗ್ –ಪಿಟಿಐ ಸಂಗ್ರಹ ಚಿತ್ರ

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗಳಿಸಿದ ಭಾರತದ ಬಾಕ್ಸರ್ ಡಿಂಕೊ ಸಿಂಗ್ (42) ಗುರುವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಬಾಂಟಮ್‌ವೇಟ್ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದ ಡಿಂಕೊ ಸಿಂಗ್ ಅತ್ಯಮೋಘ ಪಂಚಿಂಗ್ ಮತ್ತು ಉತ್ತಮ ವ್ಯಕ್ತಿತ್ವದ ಮೂಲಕ ಯುವ ಬಾಕ್ಸರ್‌ಗಳ ಮೇಲೆ ಪ್ರಭಾವ ಬೀರಿದ್ದರು. 2017ರಿಂದ ಕರುಳಿನ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರಿಗೆ ಕಳೆದ ವರ್ಷ ಜಾಂಡಿಸ್ ಮತ್ತು ಕೋವಿಡ್ ಕೂಡ ಕಾಡಿತ್ತು.

1988ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿದ್ದ ಮಣಿಪುರದ ಡಿಂಕೊ ಸಿಂಗ್ 10ನೇ ವಯಸ್ಸಿನಲ್ಲಿ ಸಬ್ ಜೂನಿಯರ್ ವಿಭಾಗದಲ್ಲಿ ಮೊದಲ ರಾಷ್ಟ್ರೀಯ ಪದಕ ಗೆದ್ದಿದ್ದರು.

ಆಧುನಿಕ ಕಾಲದ ಮೊದಲ ಪ್ರಭಾವಿ ಬಾಕ್ಸರ್ ಎಂದೆನಿಸಿಕೊಂಡಿದ್ದ ಅವರು ಆರು ಬಾರಿಯ ವಿಶ್ವ ಚಾಂಪಿಯನ್ ಎಂ.ಸಿ.ಮೇರಿ ಕೋಮ್ ಸೇರಿದಂತೆ ಪ್ರಮುಖರಿಗೆ ಪ್ರೇರಣೆಯಾಗಿದ್ದರು. ಒಲಿಂಪಿಕ್ ಪದಕ ವಿಜೇತರಾದ ಥಾಯ್ಲೆಂಡ್‌ನ ಸೊಂಟಾಯ ವೊಂಗ್‌ಪ್ರೇಟ್ಸ್ ಮತ್ತು ಉಜ್ಬೆಕಿಸ್ತಾನದ ತಿಮುರ್ ಟುಲ್ಯಕೊವ್ ಅವರನ್ನು ಮಣಿಸಿ ಏಷ್ಯನ್ ಗೇಮ್ಸ್‌ನಲ್ಲಿ ಡಿಂಕೊ ಚಿನ್ನ ಗಳಿಸಿದ್ದರು. ಅದು ಭಾರತ ಬಾಕ್ಸಿಂಗ್‌ನಲ್ಲಿ ಪ್ರಮುಖ ಮೈಲುಗಲ್ಲಾಗಿ ದಾಖಲಾಗಿದೆ. ಆ ಕೂಟಕ್ಕೆ ಅವರನ್ನು ಮಾಡಿರಲಿಲ್ಲ. ಇದರಿಂದ ನೊಂದು ಪ್ರತಿಭಟನೆ ಮಾಡಿದ್ದರು. ಹೀಗಾಗಿ ಕೊನೆಯ ಕ್ಷಣದಲ್ಲಿ ಭಾರತ ತಂಡದೊಂದಿಗೆ ಕಳುಹಿಸಲಾಗಿತ್ತು. ನಂತರ ನಡೆದದ್ದು ಇತಿಹಾಸ. ಅಂದು ಚಿನ್ನ ಗೆದ್ದ ಡಿಂಕೊ ಸಿಂಗ್ ಭಾರತದ ಬಾಕ್ಸಿಂಗ್ ವಲಯದ ದಿಕ್ಕನ್ನೇ ಬದಲಿಸಿಬಿಟ್ಟರು. ಅದರಲ್ಲೂ ಈಶಾನ್ಯ ಭಾರತದ ಪುಟ್ಟ ಹಳ್ಳಿಗಳಿಂದ ಬಾಕ್ಸಿಂಗ್ ಪ್ರತಿಭೆಗಳು ಪ್ರವರ್ಧಮಾನಕ್ಕೆ ಬರಲು ಪ್ರೇರಣೆಯಾದರು.

ಅವರಿಗೆ ಅರ್ಜುನ ಪ್ರಶಸ್ತಿ ಒಲಿದಿತ್ತು. 2013ರಲ್ಲಿ ಪದ್ಮಶ್ರೀ ಪ್ರಶಸ್ತಿಯೂ ಅವರಿಗೆ ಸಂದಿತ್ತು. 2000ರ ಸಿಡ್ನಿ ಒಲಿಂಪಿಕ್ಸ್‌ನಲ್ಲೂ ಪಾಲ್ಗೊಂಡಿದ್ದಾರೆ. ನಿವೃತ್ತರಾದ ನಂತರ ಇಂಫಾಲದ ಭಾರತ ಕ್ರೀಡಾ ಪ್ರಾಧಿಕಾರ ಕೇಂದ್ರದಲ್ಲಿ ಕೋಚ್ ಆಗಿದ್ದರು. ನೌಕಾಪಡೆಯ ಉದ್ಯೋಗಿಯೂ ಆಗಿದ್ದರು.

**ಡಿಂಕೊ ಸಿಂಗ್ ಬಾಕ್ಸಿಂಗ್ ನೋಡಲು ದೊಡ್ಡ ಸಾಲು ಇರುತ್ತಿತ್ತು. ಅದರಲ್ಲಿ ನಾನೂ ಇರುತ್ತಿದ್ದೆ. ಅವರ ವೇಗಕ್ಕೆ ಮಾರುಹೋಗಿದ್ದೆ. ಅವರೇ ನನ್ನ ಪ್ರೇರಣೆ**
**ಮೇರಿ ಕೋಮ್**
ಒಲಿಂಪಿಯನ್ ಬಾಕ್ಸಿಂಗ್ ಪಟು

**ಡಿಂಕೊ ಸಿಂಗ್ ಸಾಧನೆಗಳು ಹಲವು ಪೀಳಿಗೆಗಳಿಗೆ ಸ್ಫೂರ್ತಿ ತುಂಬುವ ದಾರಿದೀಪ. ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿ ಕುಟುಂಬಕ್ಕೆ ಸಿಗಲಿ**
**ವಿಜೇಂದರ್ ಸಿಂಗ್**
ಒಲಿಂಪಿಯನ್ ಬಾಕ್ಸರ್

**ಹೋರಾಟವೆಂದರೆ ಹೋರಾಟ. ಅದಕ್ಕೆ ಪರ್ಯಾಯವೇ ಇಲ್ಲ. ಜೀವನವೇ ಆಗಿರಲಿ, ಪಂದ್ಯವೇ ಆಗಿರಲಿ, ಅದರಲ್ಲಿ ಸೆಣಸಬೇಕು**
**ಡಿಂಕೊ ಸಿಂಗ್**
(ಹೋದ ವರ್ಷ ಕೊರೊನಾ ಸೋಂಕಿನಿಂದ ಗುಣಮುಖರಾದಾಗ ಹೇಳಿದ್ದ ಮಾತು)

## ಶೇಖರ ಬಂಗೇರ ನಿಧನ



ಉಡುಪಿ: ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ, ಉಡುಪಿಯ ಶೇಖರ್ ಪದ್ದು ಬಂಗೇರ (74) ಗುರುವಾರ ನಿಧನರಾದರು.

ಅವರಿಗೆ ಈಚೆಗೆ ಕೋವಿಡ್–19 ದೃಢಪಟ್ಟಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಗುರುವಾರ ನಿಧನರಾದರು.

1980ರ ದಶಕದಲ್ಲಿ ಭಾರತ ಫುಟ್‌ಬಾಲ್ ತಂಡದ ಗೋಲ್ ಕೀಪರ್ ಆಗಿದ್ದ ಅವರು, ಕೆಲಕಾಲ ನಾಯಕತ್ವ ವಹಿಸಿದ್ದರು. ಬಹುಕಾಲ ಮುಂಬೈಯಲ್ಲಿ ವಾಸವಾಗಿದ್ದು, ಮಹಾರಾಷ್ಟ್ರ ತಂಡದಲ್ಲಿಯೂ ಆಡಿದ್ದರು. ನಿವೃತ್ತಿಯ ನಂತರ ತರಬೇತುದಾರರಾಗಿದ್ದರು. ಅಂತ್ಯಕ್ರಿಯೆ ಉಡುಪಿಯಲ್ಲಿ ನೆರವೇರಿತು.

## ಲಸಿಕೆ ಪಡೆದ ಕ್ರೀಡಾಪಟುಗಳು

ಬೆಂಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಿಬಿಎಂಪಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಕ್ರೀಡಾ ಪ್ರಾಧಿಕಾರ ಹಾಗೂ ಕರ್ನಾಟಕ ಒಲಿಂಪಿಕ್ ಸಂಸ್ಥೆ ಹಮ್ಮಿಕೊಂಡಿರುವ ಲಸಿಕಾ ಅಭಿಯಾನ ಗುರುವಾರ ಆರಂಭಗೊಂಡಿತು.

ಅಭಿಯಾನಕ್ಕೆ ಚಾಲನೆ ನೀಡಿದ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ‘ಮೊದಲ ಹಂತದಲ್ಲಿ 10 ಸಾವಿರ ಕ್ರೀಡಾಪಟುಗಳಿಗೆ ಲಸಿಕೆ ನೀಡಲಾಗುತ್ತದೆ’ ಎಂದರು.

‘ಜಿಲ್ಲಾ ಕೇಂದ್ರಗಳಲ್ಲೂ ಲಸಿಕೆ ಕೊಡುವ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರಿನಲ್ಲಿ 2,200 ಮಂದಿ ಹೆಸರು ನೋಂದಾಯಿಸಿಕೊಂಡಿದ್ದು ಶುಕ್ರವಾರವೂ ಲಸಿಕೆ ನೀಡಲಾಗುವುದು’ ಎಂದು ಸಚಿವರು ತಿಳಿಸಿದರು.

ಸಂಸದ ಪಿ.ಸಿ. ಮೋಹನ್, ರಾಜ್ಯ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಾಗೂ ಇಲಾಖೆ ಆಯುಕ್ತ ಗೋಪಾಲಕೃಷ್ಣ ಇದ್ದರು.

ಬ್ಯಾಡ್ಮಿಂಟನ್ ಆಟಗಾರ ಅನೂಪ್ ಶ್ರೀಧರ್, ಶೂಟಿಂಗ್‌ಪಟು ಪಿ.ಎನ್. ಪ್ರಕಾಶ್, ಈಜುಪಟು ಭೂಮಿಕಾ ಆರ್. ಕೇಸರಕರ್, ಅಥ್ಲೀಟ್ ಪ್ರಿಯಾ ಮೋಹನ್ ಮೊದಲ ಡೋಸ್ ಪಡೆದರು.

## ಸುದ್ದಿ 2 ನಿಮಿಷ

### ಭಾರತ ತಂಡಕ್ಕೆ ದೇವದತ್ತ

ಬೆಂಗಳೂರು: ಕರ್ನಾಟಕದ ಯುವ ಬ್ಯಾಟ್ಸ್‌ಮನ್ ದೇವದತ್ತ ಪಡಿಕ್ಕಲ್ ಮತ್ತು ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ ಶ್ರೀಲಂಕಾ ಪ್ರವಾಸ ಮಾಡಲಿರುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇವರಿಬ್ಬರೂ ಇದೇ ಮೊದಲ ಸಲ ರಾಷ್ಟ್ರೀಯ ತಂಡದಲ್ಲಿ ಆಡುವ ಅವಕಾಶ ಪಡೆದುಕೊಂಡಿದ್ದಾರೆ.

ತಂಡದಲ್ಲಿ ಕರ್ನಾಟಕದ ಅನುಭವಿ ಆಟಗಾರ ಮನೀಷ್ ಪಾಂಡೆ ಕೂಡ ಸ್ಥಾನ ಗಿಟ್ಟಿಸಿದ್ದಾರೆ. ಈ ತಂಡಕ್ಕೆ ಅನುಭವಿ ಆರಂಭಿಕ ಬ್ಯಾಟ್ಸ್‌ಮನ್ ಶಿಖರ್ ಧವನ್ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ. ವಿರಾಟ್ ಕೊಹ್ಲಿ ನೇತೃತ್ವದ ಭಾರತ ತಂಡ ಇಂಗ್ಲೆಂಡ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಯನ್‌ಷಿಪ್‌ನಲ್ಲಿ ಆಡಲು ತೆರಳಿದೆ. ಜುಲೈನಲ್ಲಿ ವಿರಾಟ್ ಬಳಗವು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿಯೂ ಆಡಲಿದೆ. ಜುಲೈ 13ರಿಂದ ಶ್ರೀಲಂಕಾದಲ್ಲಿ ನಡೆಯಲಿರುವ ಏಕದಿನ ಮತ್ತು ಟಿ20 ಸರಣಿಗಳಿಗೆ ಭಾರತದ ಎರಡನೇ ತಂಡವನ್ನು ಕಳಿಸಲಾಗುತ್ತಿದೆ. **ತಂಡ:** ಶಿಖರ್ ಧವನ್ (ನಾಯಕ), ಭುವನೇಶ್ವರ್ ಕುಮಾರ್(ಉಪನಾಯಕ), ಪೃಥ್ವಿ ಶಾ, ದೇವದತ್ತ ಪಡಿಕ್ಕಲ್, ಋತುರಾಜ್ ಗಾಯಕವಾಡ್, ಸೂರ್ಯಕುಮಾರ್ ಯಾದವ್, ಮನೀಷ್ ಪಾಂಡೆ, ಹಾರ್ದಿಕ್ ಪಾಂಡ್ಯ, ನಿತೀಶ್ ರಾಣಾ, ಇಶಾನ್ ಕಿಶನ್ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಯಜುವೇಂದ್ರ ಚಾಹಲ್, ರಾಹುಲ್ ಚಾಹರ್, ಕೆ. ಗೌತಮ್, ಕೃಣಾಲ್ ಪಾಂಡ್ಯ, ಕುಲದೀಪ್ ಯಾದವ್, ವರುಣ್ ಚಕ್ರವರ್ತಿ, ದೀಪಕ್ ಚಾಹರ್, ನವದೀಪ್ ಸೈನಿ, ಚೇತನ್ ಸಕಾರಿಯಾ. **ನೆಟ್ ಬೌಲರ್ಸ್:** ಇಶಾನ್ ಪೊರೆಲ್, ಸಂದೀಪ್ ವರಿಯರ್, ಅರ್ಷದೀಪ್ ಸಿಂಗ್, ಸಾಯಿಕಿಶೋರ್, ಸಿಮ್ರಜೀತ್ ಸಿಂಗ್.

### ಆನ್‌ಲೈನ್ ಶೂಟಿಂಗ್ ನಾಳೆಯಿಂದ

ನವದೆಹಲಿ (ಪಿಟಿಐ): ಜೂನಿಯರ್ ವಿಶ್ವ ಚಾಂಪಿಯನ್ ಹೃದಯ್ ಹಜಾರಿಕ ಮತ್ತು ಯೂತ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಶಾಹು ಮಾನೆ ಒಳಗೊಂಡಂತೆ ಭಾರತದ ಪ್ರಮುಖ ಶೂಟರ್‌ಗಳು ಅಂತರರಾಷ್ಟ್ರೀಯ ಆನ್‌ಲೈನ್ ಶೂಟಿಂಗ್‌ನಲ್ಲಿ ಪಾಲ್ಗೊಳ್ಳಲು ಸಜ್ಜಾಗಿದ್ದಾರೆ.

ಇದೇ 12 ಮತ್ತು 13ರಂದು ನಡೆಯಲಿರುವ ಚಾಂಪಿಯನ್‌ಷಿಪ್‌ನ ಮೊದಲ ದಿನ 60 ಶಾಟ್‌ಗಳ ಅರ್ಹತಾ ಸ್ಪರ್ಧೆಗಳು ಮತ್ತು ಎರಡನೇ ದಿನ 24 ಶಾಟ್‌ಗಳ ಫೈನಲ್ ಹಂತದ ಸ್ಪರ್ಧೆಗಳು ಇರುತ್ತವೆ. ಎಲ್ಲ ಸ್ಪರ್ಧೆಗಳನ್ನು ಇಂಡಿಯಾಶೂಟಿಂಗ್ ಡಾಟ್ ಕಾಮ್‌ನ ಫೇಸ್ ಬುಕ್ ಪುಟ ಮತ್ತು ಯು ಟ್ಯೂಬ್ ಚಾನಲ್‌ನಲ್ಲಿ ನೇರ ಪ್ರಸಾರ ಮಾಡಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.

ಇದು ಆನ್‌ಲೈನ್ ಚಾಂಪಿಯನ್‌ಷಿಪ್‌ನ ಏಳನೇ ಆವೃತ್ತಿ ಆಗಿದ್ದು ಜೂನಿಯರ್ ಏಷ್ಯನ್ ಚಾಂಪಿಯನ್ ಯಶ್ ವರ್ಧನ್ ಮತ್ತು ಹಾಲಿ ರಾಷ್ಟ್ರೀಯ ಚಾಂಪಿಯನ್ ಜೀನಾ ಖಿಟ್ಟಾ ಕೂಡ ಪಾಲ್ಗೊಳ್ಳಲಿದ್ದಾರೆ.

ಶೂಟಿಂಗ್ ಫೆಡರೇಷನ್ ಭಾರತದ ಅನೇಕ ಕ್ರೀಡಾಪಟುಗಳಿಗೆ ಅನುಮತಿ ನೀಡಿದೆ ಎಂದು ಸಂಘಟಕ, ಭಾರತದ ಮಾಜಿ ಶೂಟರ್ ಶಿಮಾನ್ ಶರೀಫ್ ತಿಳಿಸಿದ್ದಾರೆ.

## ನೆಟ್ಸ್‌ನಲ್ಲಿ ಬ್ಯಾಟಿಂಗ್; ಬೆವರು ಸುರಿಸಿದ ಬೌಲರ್‌ಗಳು

# ಅಭ್ಯಾಸ ಕಣದಲ್ಲಿ ಭಾರತ ತಂಡ

ಸೌತಾಂಪ್ಟನ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯಕ್ಕೆ ಸಜ್ಜಾಗುತ್ತಿರುವ ಭಾರತ ಕ್ರಿಕೆಟ್ ತಂಡ ಇಂಗ್ಲೆಂಡ್‌ನಲ್ಲಿ ಗುರುವಾರ ಅಭ್ಯಾಸ ಆರಂಭಿಸಿದೆ. ಏಜೀಸ್ ಬೌಲ್ ಕ್ರೀಡಾಂಗಣದ ಸಮೀಪದ ಮೈದಾನದಲ್ಲಿ ಆಟಗಾರರು ವಿವಿಧ ಗುಂಪುಗಳಲ್ಲಿ ಅಭ್ಯಾಸ ಮಾಡಿದರು.

ನ್ಯೂಜಿಲೆಂಡ್ ವಿರುದ್ಧ ಇದೇ ತಿಂಗಳ 18ರಂದು ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯ ಆರಂಭವಾಗಲಿದೆ. ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಜೊತೆಯಾಗಿ ಇಂಗ್ಲೆಂಡ್‌ಗೆ ತೆಳಿದ್ದವು. ಆದರೆ ಆಟಗಾರರು ಮೂರು ದಿನ ಕಠಿಣ ಕ್ವಾರಂಟೈನ್ ಒಳಗೊಂಡಂತೆ ಐದು ದಿನ ಹೋಟೆಲ್ ಕೊಠಡಿಯಲ್ಲೇ ಇದ್ದರು.

ಮೊದಲ ಮೂರು ದಿನಗಳ ಕ್ವಾರಂಟೈನ್ ನಂತರ ಆಟಗಾರರಿಗೆ ಜಿಮ್ ಮತ್ತು ಸಣ್ಣ ಪ್ರಮಾಣದ ಅಭ್ಯಾಸಕ್ಕೆ ಅವಕಾಶ ನೀಡಲಾಗಿತ್ತು. ಹ್ಯಾಂಪ್‌ಶೈರ್ ಬೌಲ್‌ಗೆ ಸಂಬಂಧಿಸಿದ ಹಿಲ್ಟನ್ ಹೋಟೆಲ್‌ನಿಂದ ಹೊರ ಬಂದಿದ್ದ ಆಟಗಾರರು ವೈಯಕ್ತಿಕ ಫಿಟ್‌ನೆಸ್ ಮತ್ತು ಅಭ್ಯಾಸದ ಕಡೆಗೆ ಗಮನ ನೀಡಿದ್ದರು.

ಗುಂಪಾಗಿ ಅಭ್ಯಾಸ ಮಾಡಲು ಇದೇ ಮೊದಲ ಅವಕಾಶವಾಗಿತ್ತು. ವ್ಯಾಯಾಮಕ್ಕೆ ಬೇಕಾದ ಅಗತ್ಯ ಸಲಕರಣೆಗಳನ್ನು ಹೋಟೆಲ್ ಕೊಠಡಿಯಲ್ಲೇ ಒದಗಿಸಲಾಗಿತ್ತು.

ನೆಟ್ಸ್‌ನಲ್ಲಿ ನಾಯಕ ವಿರಾಟ್ ಕೊಹ್ಲಿ, ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ, ಮಧ್ಯಮ ಕ್ರಮಾಂಕದ ಚೇತೇಶ್ವರ್ ಪೂಜಾರ, ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಮುಂತಾದವರು ಕೆಲ ಕಾಲ ಅಭ್ಯಾಸ ಮಾಡಿದರು. ಥ್ರೋಡೌನ್ ಎಸೆತಗಳನ್ನೂ ಅವರು ಎದುರಿಸಿದರು.

ಬೌಲರ್‌ಗಳು ಸ್ವಲ್ಪ ಹೆಚ್ಚು ಬೆವರು ಸುರಿಸಿದರು. ವೇಗಿಗಳಾದ ಇಶಾಂತ್ ಶರ್ಮಾ, ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಮುಂತಾದವರು ಬೌಲಿಂಗ್ ಮಾಡಿದರು.

ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದ ನಂತರ ಫೀಲ್ಡಿಂಗ್ ಕೋಚ್ ಆರ್. ಶ್ರೀಧರ್ ಬಳಿಗೆ ಆಟಗಾರರು ತೆರಳಿದರು. ಸ್ಲಿಪ್‌ನಲ್ಲಿ ಕ್ಯಾಚ್ ಪಡೆಯುವುದರ ಮೇಲೆ ಹೆಚ್ಚು ಗಮನಹರಿಸಲಾಯಿತು.

ಮಿಶ್ರ ಡಬಲ್ಸ್ ವಿಭಾಗದ ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ದ್ರೆಸಿರೆ ಕ್ರೌಜಿಕ್ ಮತ್ತು ಜೋ ಸಲಿಸ್ಬರಿ –ಪಿಟಿಐ ಚಿತ್ರ

## ನಡಾಲ್–ಜೊಕೊವಿಚ್ ಹಣಾಹಣಿ

ಪ್ಯಾರಿಸ್ (ಎಎಫ್‌ಪಿ): ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕಳೆದ ಬಾರಿ ಫೈನಲ್‌ನಲ್ಲಿ ಸೆಣಸಿದ್ದ ಸ್ಪೇನ್‌ನ ರಫೆಲ್ ನಡಾಲ್ ಮತ್ತು ಸರ್ಬಿಯಾದ ನೊವಾಕ್ ಜೊಕೊವಿಚ್ ಈ ಬಾರಿ ಸೆಮಿ ಫೈನಲ್‌ನಲ್ಲಿ ಮುಖಾಮುಖಿಯಾಗಲಿದ್ದಾರೆ. ಈ ಪಂದ್ಯ ಶುಕ್ರವಾರ ನಡೆಯಲಿದೆ.

ಬುಧವಾರ ರಾತ್ರಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ನಡಾಲ್ 6–3, 4–6, 6–4, 6–0ಯಲ್ಲಿ ಅರ್ಜೆಂಟೀನಾದ ಡೀಗೊ ಸ್ವಾರ್ಟ್ಸ್‌ಮನ್ ಅವರನ್ನು ಮಣಿಸಿದ್ದರೆ ಜೊಕೊವಿಚ್ 6–3, 6–2, 6–7(5/7), 7–5ರಲ್ಲಿ ಇಟಲಿಯ ಮಟಿಯೊ ಬೆರೆಟಿನಿ ಎದುರು ಗೆದ್ದಿದ್ದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೊದಲ ಸ್ಥಾನದಲ್ಲಿರುವ ಜೊಕೊವಿಚ್ ಈ ಬಾರಿ ಫ್ರೆಂಚ್ ಓಪನ್ ಟೂರ್ನಿಯ ಚಾಂಪಿಯನ್ ಆದರೆ ಎಲ್ಲ ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ ಎರಡು ಬಾರಿ ಪ್ರಶಸ್ತಿ ಗೆದ್ದ ಮೊದಲ ಆಟಗಾರ ಎನಿಸಿಕೊಳ್ಳಲಿದ್ದಾರೆ. ಆದರೆ ಅದಕ್ಕೆ ಸೆಮಿಫೈನಲ್‌ನಲ್ಲಿ ಜಯ ಗಳಿಸಬೇಕಾಗಿದೆ.

ಎರಡನೇ ಶ್ರೇಯಾಂಕಿತ ನಡಾಲ್ ದಾಖಲೆಯ 21ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ. ಆ ಕನಸು ನನಸಾಗಬೇಕಾದರೆ ಶುಕ್ರವಾರದ ಪಂದ್ಯದಲ್ಲಿ ಜಯ ಅನಿವಾರ್ಯ.

**ಸಲಿಸ್ಬರಿ–ಕ್ರೌಜಿಕ್ ಜೋಡಿಗೆ ಪ್ರಶಸ್ತಿ:** ಜೋ ಸಲಿಸ್ಬರಿ 39 ವರ್ಷಗಳ ನಂತರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಬ್ರಿಟನ್‌ನ ಮೊದಲ ಆಟಗಾರ ಎನಿಸಿದರು. ಅಮೆರಿಕದ ದ್ರೆಸಿರೆ ಕ್ರೌಜಿಕ್ ಜೊತೆಗೂಡಿ ಅವರು ರಷ್ಯಾ ಜೋಡಿ ಅಸ್ಲಾನ್ ಕರತ್ಸೇವ ಮತ್ತು ಎಲಿನಾ ವೆಸ್ನಿನಾ ವಿರುದ್ಧ 2-6, 6-4, 10-5ರಲ್ಲಿ ಜಯ ಗಳಿಸಿದರು.

**ಪೌಲಿಚೆಂಕೋವಾ ಫೈನಲ್‌ಗೆ:** ಸ್ಲೊವೇನಿಯಾದ ತಮಾರ ಜಿಡಾನ್ಸೆಕ್ ವಿರುದ್ಧ 7-5, 6-3ರಲ್ಲಿ ಜಯ ಗಳಿಸಿದ ರಷ್ಯಾದ ಅನಸ್ತೇಸಿಯಾ ಪೌಲಿಚೆಂಕೋವಾ ಅವರು ಮಹಿಳಾ ವಿಭಾಗದ ಫೈನಲ್ ಪ್ರವೇಶಿಸಿದರು. ಗುರುವಾರ ನಡೆದ ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಗ್ರೀಸ್‌ನ ಮರಿಯಾ ಸಕ್ಕಿ ವಿರುದ್ಧ 7–5, 4–6, 9–7ರಲ್ಲಿ ಜಯ ಸಾಧಿಸಿದ ಬಾರ್ಬೊರಾ ಕ್ರೆಸಿಕೋವಾ 40 ವರ್ಷಗಳಲ್ಲಿ ಫ್ರೆಂಚ್ ಓಪನ್ ಟೂರ್ನಿಯ ಫೈನಲ್ ಪ್ರವೇಶಿಸಿದ ಜೆಕ್ ಗಣರಾಜ್ಯದ ಮೊದಲ ಆಟಗಾರ್ತಿ ಎನಿಸಿಕೊಂಡರು.

## ಯುರೋ ಕಪ್ ಇಂದಿನಿಂದ

ರೋಮ್ (ಎಪಿ): ಕೊರೊನಾ ವೈರಸ್ ಹಾವಳಿಯಿಂದಾಗಿ ಮುಂದೂಡಲಾಗಿದ್ದ ಯುರೋಪಿಯನ್ ಚಾಂಪಿಯನ್‌ಷಿಪ್ ಫುಟ್‌ಬಾಲ್ ಶುಕ್ರವಾರ ಆರಂಭವಾಗಲಿದೆ.

ರೋಮ್‌ನಲ್ಲಿರುವ ಸ್ಟೇಡಿಯೊ ಒಲಿಂಪಿಕೊ ಕ್ರೀಡಾಂಗಣದಲ್ಲಿ ನಡೆಯುವ ಮೊದಲ ಪಂದ್ಯದಲ್ಲಿ ಇಟಲಿ ಮತ್ತು ಟರ್ಕಿ ಮುಖಾಮುಖಿಯಾಗಲಿವೆ.

**ನೇರಪ್ರಸಾರ: ಸೋನಿ ನೆಟ್‌ವರ್ಕ್**
**ಸಮಯ: ತಡರಾತ್ರಿ 12.30**

## ಟ್ವೀಟ್ ಕೆದಕಿದ್ದು ಸರಿಯಲ್ಲ: ವಾನ್

ಲಂಡನ್ (ಪಿಟಿಐ): ಜನಾಂಗೀಯ ನಿಂದನೆ ಕುರಿತು ಹಳೆಯ ಟ್ವೀಟ್ ಸಂದೇಶಗಳನ್ನು ಮುಂದಿಟ್ಟುಕೊಂಡು ಆಟಗಾರರನ್ನು ‘ಬೇಟೆ’ ಆಡುತ್ತಿರುವುದು ಅಪಹಾಸ್ಯದ ಪರಮಾವಧಿ ಎಂದು ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ ಮೈಕೆಲ್ ವಾನ್ ಆಕ್ರೋಶವ್ಯಕ್ತಪಡಿಸಿದ್ದಾರೆ.

ಇಂಗ್ಲೆಂಡ್‌ನ ಏಯಾನ್ ಮಾರ್ಗನ್ ಮತ್ತು ಜೋಸ್ ಬಟ್ಲರ್ ಕೆಲವು ವರ್ಷಗಳ ಹಿಂದೆ ಮಾಡಿದ ಟ್ವೀಟ್ ಸಂದೇಶಗಳು ಭಾರತದ ಆಟಗಾರರನ್ನು ಜನಾಂಗೀಯ ನಿಂದನೆ ಮಾಡುವಂತಿದ್ದವು ಎಂಬ ಆರೋಪ ಎದುರಿಸುತ್ತಿದ್ದಾರೆ. ಬುಧವಾರ ಅವರನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಯು ವಿಚಾರಣೆಗೊಳಪಡಿಸಿದೆ. ಈ ಕುರಿತು ಪ್ರತಿಕ್ರಿಯಿಸಿರುವ ವಾನ್, ‘ಮಾರ್ಗನ್, ಬಟ್ಲರ್ ಮತ್ತು ಆ್ಯಂಡರ್ಸನ್ ಟ್ವೀಟ್ ಮಾಡಿದ ಕಾಲಘಟ್ಟದಲ್ಲಿ ಅವು ಆಕ್ಷೇಪಾರ್ಹವಾಗಿದ್ದವು. ಈಗಲೂ ಅವುಗಳನ್ನು ಅದೇ ದೃಷ್ಟಿಕೋನದಲ್ಲಿ ನೋಡುವುದು ಎಷ್ಟು ಸರಿ’ ಎಂದು ಟ್ವೀಟ್ ಮಾಡಿದ್ದಾರೆ.

‘ಸರ್’ ಎಂಬ ಪದಬಳಕೆ ಮಾಡಿ ಭಾರತೀಯ ಆಟಗಾರರನ್ನು ಅಪಹಾಸ್ಯ ಮಾಡಿದ್ದನ್ನು ಇಸಿಬಿ ಗಂಭೀರವಾಗಿ ಪರಿಗಣಿಸಿದೆ. ಈ ಸಂದೇಶಗಳನ್ನು ಬಟ್ಲರ್ ಸ್ಕ್ರೀನ್ ಶಾಟ್ ಮಾಡಿಕೊಂಡು ಬೇರೆಯವರೆಗೂ ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿದ್ದರೆನ್ನಲಾಗಿದೆ. 2012–13ರಲ್ಲಿ ಜನಾಂಗೀಯ ನಿಂದನೆ ಟ್ವೀಟ್ ಮಾಡಿದ್ದ ಇಂಗ್ಲೆಂಡ್ ಆಟಗಾರ ಒಲಿ ರಾಬಿನ್ಸನ್ ಅವರನ್ನು ಕಳೆದ ವಾರ ತಂಡದಿಂದ ಅಮಾನತು ಮಾಡಲಾಗಿತ್ತು. ಮಿಮ್ಮಿ ಆ್ಯಂಡರ್ಸನ್ 2010ರಲ್ಲಿ ಮಾಡಿದ್ದ ಟ್ವೀಟ್ ಕುರಿತೂ ತನಿಖೆ ಆರಂಭಿಸಲಾಗಿತ್ತು.

ತನಿಖೆಯ ನಂತರ ತಪ್ಪು ಸಾಬೀತಾದರೆ ಎಲ್ಲರ ಮೇಲೂ ತಕ್ಕ ಕ್ರಮ ಕೈಗೊಳ್ಳಲಾಗುವುದು ಎಂದು ಇಸಿಬಿ ಈಗಾಗಲೇ ಸ್ಪಷ್ಟಪಡಿಸಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 700-800 |
| ನಡುಗೋಲು | 850-900 |
| ರಾಶಿ | 950-1000 |
| ರಾಶಿ ಉತ್ತಮ | 1000-1050 |
| ಜರಡಿ | 1150-1200 |
| ಹೆರಕಿದ್ದು | 1500-1600 |
| ಹಸಿರು ಸಾಧಾರಣ | 900-1000 |
| ಹಸಿರು ಉತ್ತಮ | 1100-1200 |
| ಹಸಿರು ಅತಿ ಉತ್ತಮ | 1400-1500 |
| ಕಾಳು ಮೆಣಸು | 395 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-40000 |
| ಹಳತು | 42500-50000 |
| **ಕಾರ್ಕಳ** | |
| ಹೊಸತು | 36000-40000 |
| **ಕುಂದಾಪುರ** | |
| ಹೊಸಚಾಲಿ | 35000-40000 |
| **ಪುತ್ತೂರು** | |
| ಹೊಸತು | 28000-40000 |
| **ಸಿದ್ದಾಪುರ** | |
| ಬಿಳಿಗೋಟು | 21699-32221 |
| ಚಾಲಿ | 34869-37739 |
| ಕೋಕ | 25012-30189 |
| ಕೆಂಪುಗೋಟು | 21089-29709 |
| ರಾಶಿ | 37769-41309 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ | 245-395 |
| ದ್ವಿತಳಿ | 368-470 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 10050 | 10700 | 10650 | 157.20 ಸೆಂಟ್ಸ್ |
| ಎಸಿ | 4675 | 4300 | 4100 | |
| ಆರ್‌ಪಿ | 5250 | 5150 | 5175 | ಲಂಡನ್ |
| ಆರ್‌ಸಿ | 3125 | 3100 | 3100 | 1582 ಡಾಲರ್ಸ್ |

**ಮುಂಬೈ ಧಾರಣೆ**

**ಶೇಂಗಾ**

10-6-2021

| | |
|---|---|
| ಜಾವಾ 70/80(ಹೊಸ) | 10050-10100 |
| ಜಾವಾ 80/90(ಹೊಸ) | 9250-9300 |
| ದಪ್ಪ ಮಧ್ಯಪ್ರದೇಶ(ಹೊಸ) | 10400-10500 |
| ದಪ್ಪ ಗುಜರಾತ್(ಹೊಸ) | 9600-9700 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1500 (1495) |
| ಒಂದು ವಾರದ ಡೆಲಿವರಿ | 1495 (1490) |
| ಸೋಯಾ ಕಚ್ಚಾ | 1357 (1375) |
| ಪಾಮ್ ವಾರದ ಡೆಲಿವರಿ | 1223 (1225) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1450 (1450) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ 48,700 (48,800)
ಬೆಳ್ಳಿ ಕೆ.ಜಿ 71,200 (70,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 15,635 |
| ಇಂದಿನ ಅಂತ್ಯ | 15,737 |
| ▲ | 102 |
| ದಿನದ ಗರಿಷ್ಠ | 15,751 |

**ವಿನಿಮಯ ದರ**

| | |
|---|---|
| $ ಡಾಲರ್ | 73.06 |
| £ ಪೌಂಡ್ | 102.97 |
| € ಯುರೊ | 88.87 |
| ¥ ಯೆನ್ (100ಕ್ಕೆ) | 67 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| **ಬೆಂಗಳೂರು** | |
| 100 ಮೊಟ್ಟೆಗೆ | ₹550 |
| 12 ಮೊಟ್ಟೆಗೆ | ₹72 |
| **ಮೈಸೂರು** | |
| 100 ಮೊಟ್ಟೆಗೆ | ₹550 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1490 (1490) |
| ಸೋಯಾ (ರಿಫೈನ್ಡ್) | ₹1395 (1410) |
| ಸೂರ್ಯಕಾಂತಿ (ರಿಫೈನ್ಡ್) | ₹1500 (1510) |
| ಪಾಮೋಲಿನ್ | ₹1225 (1227) |

**ಬೆಂಗಳೂರು ಈರುಳ್ಳಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ದೊಡ್ಡ | ₹1800-2100 |
| ಮಧ್ಯಮ | ₹1500-1800 |
| ಸಣ್ಣ | ₹1000-1500 |

## ಪ್ರವಾಸೋದ್ಯಮ ಮತ್ತು ಹೋಟೆಲ್ ಉದ್ಯಮದ ಪುನಶ್ಚೇತನ ಹೇಗೆ?

# ‘ಪ್ರವಾಸೋದ್ಯಮ: ಸರ್ಕಾರ ಆದ್ಯತೆ ನೀಡಲಿ’

ಪ್ರಜಾವಾಣಿ ಸಂವಾದ

ಬೆಂಗಳೂರು: ಕೊರೊನಾ ಸಾಂಕ್ರಾಮಿಕದಿಂದಾಗಿ ರಾಜ್ಯದಲ್ಲಿ ಪ್ರವಾಸೋದ್ಯಮ ಮತ್ತು ಹೋಟೆಲ್ ಉದ್ಯಮ ದೊಡ್ಡ ಹೊಡೆತ ಅನುಭವಿಸಿವೆ. ಕೊರೊನಾದ ಮೊದಲ ಅಲೆಯಿಂದಾಗಿ ಪ್ರವಾಸೋದ್ಯಮವು ತಿಂಗಳಿಗೆ ಸುಮಾರು ₹ 5 ಸಾವಿರ ಕೋಟಿ ನಷ್ಟ ಅನುಭವಿಸಿದೆ. ಎರಡನೇ ಅಲೆಯಿಂದಾಗಿ ಮತ್ತಷ್ಟು ಸಂಕಷ್ಟಕ್ಕೆ ಸಿಲುಕುವ ಅಪಾಯದಲ್ಲಿವೆ ಎಂದು ‘ಪ್ರಜಾವಾಣಿ’ ಗುರುವಾರ ನಡೆಸಿದ ಸಂವಾದದಲ್ಲಿ ಪಾಲ್ಗೊಂಡ ಮೂವರು ಅತಿಥಿಗಳು ಕಳವಳ ವ್ಯಕ್ತಪಡಿಸಿದರು.

### ಅನುದಾನದ ಸಮರ್ಪಕ ಬಳಕೆ ಆಗುತ್ತಿಲ್ಲ



ಬಜೆಟ್‌ನಲ್ಲಿ ಪ್ರವಾಸೋದ್ಯಮಕ್ಕೆ ಸಾಕಷ್ಟು ಅನುದಾನ ನೀಡಲಾಗುತ್ತಿದೆ. ಆದರೆ ಅದನ್ನು ಸರಿಯಾಗಿ ವಿನಿಯೋಗ ಮಾಡುವಂತಹ ಉತ್ತಮ ತಂಡ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಿಗದಿರುವುದೇ ದುರದೃಷ್ಟಕರ. ಮಂತ್ರಿಗಳು, ಆಯುಕ್ತರು, ಕಾರ್ಯದರ್ಶಿಗಳು ಬದಲಾಗುತ್ತಲೇ ಇದ್ದಾರೆ. ಹೀಗಾದರೆ ಪ್ರವಾಸೋದ್ಯಮ ಮತ್ತು ಹೋಟೆಲ್ ಉದ್ಯಮದಲ್ಲಿ ಉದ್ಯೋಗಾವಕಾಶ ಸೃಷ್ಟಿಸುವ, ರಾಜ್ಯವನ್ನು ಬಿಂಬಿಸುವ ಕೆಲಸಗಳು ಆಗವು. ಸಮಸ್ಯೆ ಇರುವುದು ಎಲ್ಲರಿಗೂ ತಿಳಿದಿದೆ. ಆದರೆ, ಸಂಬಂಧಪಟ್ಟವರು ಅರ್ಜಿ ಕೊಡದಿದ್ದರೆ ಯಾರೂ ಗಮನ ಹರಿಸುವುದಿಲ್ಲ. ಸಮಸ್ಯೆಗಳಿಗೆ ತಕ್ಷಣದ ಪರಿಹಾರ ಸಿಕ್ಕರೆ ಮಾತ್ರವೇ ಉದ್ಯಮದ ಉಳಿವು ಸಾಧ್ಯ.

**ಐ.ಎಂ. ವಿಠ್ಠಲಮೂರ್ತಿ,**
ಪ್ರವಾಸೋದ್ಯಮ ಇಲಾಖೆ ಮಾಜಿ ಪ್ರಧಾನ ಕಾರ್ಯದರ್ಶಿ

### ಹೋಟೆಲ್ ಉದ್ಯಮಕ್ಕೆ ತುರ್ತು ನೆರವು ಅಗತ್ಯ

‘ಪ್ರವಾಸ ಮತ್ತು ಹೋಟೆಲ್ ಉದ್ಯಮ’ ಒಂದೇ ನಾಣ್ಯದ ಎರಡು ಮುಖಗಳು. ಕೋವಿಡ್‌ನಿಂದಾಗಿ ಪ್ರವಾಸೋದ್ಯಮ ಸಂಪೂರ್ಣವಾಗಿ ನಿಂತಿದ್ದರಿಂದ ಹೋಟೆಲ್ ಉದ್ಯಮ ಅತಿ ಹೆಚ್ಚು ನಷ್ಟ ಅನುಭವಿಸುವಂತಾಗಿದೆ. ಮನೆಯಿಂದ ಕೆಲಸ ಮಾಡುವ ವ್ಯವಸ್ಥೆಯೂ ಹೋಟೆಲ್ ಉದ್ಯಮಕ್ಕೆ ಪೆಟ್ಟು ಕೊಟ್ಟಿದೆ. ಹೀಗಾಗಿ ಆಸ್ತಿ ತೆರಿಗೆ, ಪರವಾನಗಿ ಶುಲ್ಕಗಳಲ್ಲಿ ಸ್ವಲ್ಪ ವಿನಾಯಿತಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಇಲ್ಲಿ ಕೆಲಸ ಮಾಡುವವರಿಗೆ ಪರಿಹಾರ ನೀಡುವಂತೆಯೂ ಕೇಳಲಾಗಿದೆ. ಇದುವರೆಗೆ ಸರ್ಕಾರದಿಂದ ಸ್ಪಂದನೆ ಸಿಕ್ಕಿಲ್ಲ.



**ಪಿ.ಸಿ.ರಾವ್,** ಅಧ್ಯಕ್ಷ, ಬೃಹತ್ ಬೆಂಗಳೂರು ಹೋಟೆಲ್ಸ್ ಅಸೋಸಿಯೇಶನ್

### ಎನ್‌ಪಿಎ ಸುಳಿಯಲ್ಲಿ ಹೋಟೆಲ್‌ಗಳು

ಸರ್ಕಾರವು ತುರ್ತಾಗಿ ಪ್ರವಾಸೋದ್ಯಮದ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕಿದೆ. ಹೋಟೆಲ್ ಉದ್ಯಮ ಸಂಕಷ್ಟಕ್ಕೆ ಸಿಲುಕಿಕೊಂಡರೆ ಪ್ರವಾಸಿಗಳು ಬರುವುದೇ ಇಲ್ಲ. ಒಂದೂವರೆ ವರ್ಷದಿಂದ ಹೋಟೆಲ್ ಉದ್ಯಮವು ವ್ಯಾಪಾರವಿಲ್ಲದೇ ತತ್ತರಿಸಿದೆ. ಇದರಿಂದ ವಸೂಲಾಗದ ಸಾಲದ (ಎನ್‌ಪಿಎ) ಸುಳಿಗೆ ಸಿಲುಕಿದೆ. ಆರು ತಿಂಗಳ ಅವಧಿಗೆ ಸಾಲದ ಮೇಲಿನ ಬಡ್ಡಿದರವನ್ನು ಮನ್ನಾ ಮಾಡಬೇಕಿದೆ.

ಪ್ರವಾಸೋದ್ಯಮವು ಖಾಸಗಿಯವರಿಂದ ಬೆಳೆದಿದೆಯೇ ಹೊರತು ಸರ್ಕಾರದ ಯೋಜನೆಗಳಿಂದಲ್ಲ. ಕಲೆ ಮತ್ತು ಸಂಸ್ಕೃತಿ, ಪಾರಂಪರಿಕ ಕಟ್ಟಡಗಳು ಇದ್ದ ಮಾತ್ರಕ್ಕೆ ಪ್ರವಾಸೋದ್ಯಮ ಬೆಳೆಯುವುದಿಲ್ಲ. ಅಲ್ಲಿ ವ್ಯವಸ್ಥಿತವಾದ ಹೋಟೆಲ್ ಸಹ ಬೇಕು. ಹೀಗಾಗಿ ಪ್ರವಾಸೋದ್ಯಮ ಅಭಿವೃದ್ಧಿಗೆ ಮುಂದಾಗುವ ಮೊದಲು ಹೋಟೆಲ್ ಉದ್ಯಮದ ಬೆಳವಣಿಗೆಗೂ ಗಮನ ಅಗತ್ಯ. ರಾಜ್ಯದಲ್ಲಿ ಒಂದು ಲಕ್ಷ ಹೋಟೆಲ್‌ಗಳಿದ್ದು, ಅವುಗಳಲ್ಲಿ 25 ಸಾವಿರ ಹೋಟೆಲ್‌ಗಳು ತೆರೆಯಲು ಆಗದ ಸ್ಥಿತಿಯಲ್ಲಿವೆ. ಹೀಗಾದರೆ, ಕನಿಷ್ಠ ಎರಡೂವರೆ ಲಕ್ಷ ಜನ ಕೆಲಸ ಕಳೆದುಕೊಳ್ಳಲಿದ್ದಾರೆ.

**ಸುಧಾಕರ ಎಸ್. ಶೆಟ್ಟಿ,** ಮಾಜಿ ಅಧ್ಯಕ್ಷ, ಎಫ್‌ಕೆಸಿಸಿಐ

**ಸಂವಾದ ವೀಕ್ಷಣೆಗೆ:**
https://www.facebook.com/prajavani.net

## ಗಳಿಕೆಯ ಹಾದಿಗೆ ಮರಳಿದ ಷೇರುಪೇಟೆ

ಮುಂಬೈ (ಪಿಟಿಐ): ಎರಡು ದಿನಗಳಿಂದ ಇಳಿಮುಖವಾಗಿದ್ದ ಷೇರುಪೇಟೆ ಸಂವೇದಿ ಸೂಚ್ಯಂಕಗಳು ಶುಕ್ರವಾರ ಮತ್ತೆ ಗಳಿಕೆಯ ಹಾದಿಗೆ ಮರಳಿದವು. ಹೂಡಿಕೆದಾರರು ಹಣಕಾಸು, ಔಷಧ ಮತ್ತು ಐ.ಟಿ. ವಲಯದ ಷೇರುಗಳ ಖರೀದಿಗೆ ಹೆಚ್ಚಿನ ಗಮನ ನೀಡಿದರು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 358 ಅಂಶ ಏರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 102 ಅಂಶ ಏರಿಕೆ ಕಂಡಿತು. ಬಜಾಜ್ ಫೈನಾನ್ಸ್ ಷೇರುಗಳು ಶೇಕಡ 7.29ರಷ್ಟು ಗಳಿಕೆ ಕಂಡವು. ಬಜಾಜ್ ಫಿನ್‌ಸರ್ವ್, ಎಸ್‌ಬಿಐ, ಇಂಡಸ್ ಇಂಡ್ ಬ್ಯಾಂಕ್, ಡಾ ರೆಡ್ಡೀಸ್, ಟೆಕ್ ಮಹೀಂದ್ರ, ಐಟಿಸಿ ಮತ್ತು ಕೋಟಕ್ ಬ್ಯಾಂಕ್ ಷೇರುಗಳು ಗಳಿಕೆ ದಾಖಲಿಸಿದವು.

ಬಜಾಜ್ ಆಟೊ, ಮಾರುತಿ, ಎಚ್‌ಸಿಎಲ್ ಟೆಕ್, ಅಲ್ಟ್ರಾಟೆಕ್ ಸಿಮೆಂಟ್, ಪವರ್‌ಗ್ರಿಡ್, ಒಎನ್‌ಜಿಸಿ ಮತ್ತು ನೆಸ್ಲೆ ಷೇರುಗಳು ಇಳಿಕೆ ಕಂಡವು. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಭಾರತದ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 9 ಪೈಸೆ ಕಡಿಮೆ ಆಯಿತು.

## ಚಿನ್ನದ ದರ ₹ 259, ಬೆಳ್ಳಿಯ ದರ ₹ 110 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ, ಬೆಳ್ಳಿ ದರದಲ್ಲಿ ಇಳಿಕೆ ಆಗಿದೆ.

10 ಗ್ರಾಂ ಚಿನ್ನದ ದರ ₹ 259ರಷ್ಟು ಇಳಿಕೆ ಆಗಿದ್ದು, ₹ 48,127ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 110ರಷ್ಟು ಕಡಿಮೆಯಾಗಿ ₹ 70,274ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ದರ ಇಳಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.